ಕೊಡಗು ಸಂಗಾತಿ

ಫೆಬ್ರವರಿ 1 ರಿಂದ 28, 2003 ಪಾಕ್ಷಿಕ ಪತ್ರಿಕೆ (ಪೊನ್ನಿ 18-29 ಮಾಯಿ 1-16)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

R.No. KA/SK/MYS-88/2003 ಸಂಪುಟ : 6 ಸಂಚಿಕೆ : 21-22 ಪುಟಗಳು : 24 ಬೆಲೆ ರೂ. : 12-00



ಲೇಖನ : ಒಳಪುಟದಲ್ಲಿ.

ಪುಟ್ಟ ಜಿಲ್ಲೆಯ ಅಪಾರ ಕೊಡುಗೆ : ದೇಶದ ಪ್ರಪ್ರಥಮ ಮಹಾದಂಡನಾಯಕ ಫೀಲ್ಡ್ ಮಾರ್ಷಲ್ ಕೊಡಂದೇರ ಮಾದಪ್ಪ ಕಾರ್ಯಪ್ಪ.

ಸೂಚನೆ :

ಕೊಡಗು ಸಂಗಾತಿಗೆ ಬರೆಯುವವರು ಭಾಷೆ, ಸಂಸ್ಕೃತಿ, ಸಂಪ್ರದಾಯ, ಪದ್ಧತಿ, ಆಚಾರ, ವಿಚಾರ, ನಾಟಕ, ಸಾಹಿತ್ಯ, ಮಕ್ಕಳ ಕತೆ, 'ಕತೆಕವನ' ಊರಿನಲ್ಲಿ ಜರಗುವ ವಿಚಾರಗಳು, ಊರಿನ ಚರಿತ್ರೆ, ಹಬ್ಬ ಹರಿದಿನಗಳು, ಜನಾಂಗದ ಬಗ್ಗೆ ಚಿಂತನೆ, ಮಂತನ, ಸೋಬಾನೆಗಳ ಬಗ್ಗೆ ಚಿಂತನೆ + ವಿಮರ್ಶೆ, ಅದರ ಬಗ್ಗೆ ವೈಭವೀಕರಣ, ವ್ಯಕ್ತಿಗಳ ಕಿರುಪರಿಚಯ (ಸಮಾಜ ಸೇವೆ), ಪಂಚಾಯಿತಿ ಅಧ್ಯಕ್ಷರುಗಳು, ತಾಲ್ಲೂಕು, ಜಿಲ್ಲಾ, ರಾಜ್ಯ, ರಾಷ್ಟ್ರ ಮಟ್ಟದ ವ್ಯಕ್ತಿಗಳ ಪರಿಚಯ ಇತ್ಯಾದಿ ಇತ್ಯಾದಿ ಹಲವು. ಅದರಲ್ಲೂ ಯುವ ಬರಹಗಾರರಿಗೆ ಖಂಡಿತ ಪ್ರೋತ್ಸಾಹವಿದೆ. ನೆನಪಿರಲಿ - ಬರೆಯುವಾಗ ಕಾಗದದ ಒಂದೇ ಮಗ್ಗುಲಲ್ಲಿ ಬರೆಯಬೇಕು. ಪತ್ರ ಆದಷ್ಟು ಚಿಕ್ಕದಾಗಿ ಚೊಕ್ಕವಾಗಿ, ಅಕ್ಷರ ಉರುಟಾಗಿರಬೇಕು. ಹೆಸರು, ಪೂರ್ಣ ವಿಳಾಸ ಇರಬೇಕು. ತಿಂಗಳ 20 ನೇ ತಾರೀಖಿನ ಒಳಗೆ ಕಛೇರಿಗೆ ತಲಪುವಂತಿರಬೇಕು. ಜಾಹಿರಾತ್ ನೀಡಿ ಸಹಕರಿಸುವುದು. ಚಿರಸ್ಮರಣೆ, ಶುಭ ಹಾರೈಕೆ, ಮಕ್ಕಳ ಹುಟ್ಟುಹಬ್ಬ ಇತ್ಯಾದಿಗಳು, ಜಾಹಿರಾತಿಗೆ ಕಾಲು ಪುಟಕ್ಕೆ 250/-, ಅರ್ಧ ಪುಟಕ್ಕೆ 500/- ಪೂರ್ತಿ ಪುಟಕ್ಕೆ 1000/- ಕನಿಷ್ಠ ದರದಲ್ಲಿ ನಿಗದಿ ಪಡಿಸಲಾಗಿದೆ. ಪತ್ರಿಕೆ ನಿಮ್ಮದು, ಉಳ್ಸಿ, ಬೆಳ್ಸಿ, ಸಹಕರಿಸಿ. ಪತ್ರಿಕೆಯೇ ಜನಾಂಗದ ಜೀವಾಳ.

-ಸಂಪಾದಕಿ.

ವಿನಂತಿ : ಕೊಡಗು ಸಂಗಾತಿ ಚಂದದಾರರು ಮತ್ತು ಹಣವನ್ನು ಸಾಕಷ್ಟು ಸಮಯದಿಂದ ಬಾಕಿ ಇರಿಸಿಕೊಂಡವರು ವಾಯಿದೆಗೆ ಸರಿಯಾಗಿ ತಪ್ಪದೆ ನವೀಕರಿಸಿಕೊಳ್ಳುವುದು. ಹಾಗೂ ಪತ್ರಿಕೆ ತರಿಸುತ್ತಿದ್ದು ಈಗ ನಿಂತು ಹೋಗಿರುವ ಮತ್ತು ಬಾಕಿ ಇರಿಸಿಕೊಂಡ ಮಾಜಿ ಸಂಗಾತಿ ಸದಸ್ಯರು ಪುನಃಹ ಹಣ ಕಳ್ಸಿ ನವೀಕರಣಗೊಳಿಸಿ ಪತ್ರಿಕೆಗೆ ಬೆಂಗಾವಲಾಗಿ ಇರುವಂತೆ ವಿನಮ್ರ ವಿನಂತಿ. ನವೀಕರಣಕ್ಕಾಗಿ ನಾಲ್ಕೈದು ಬಾರಿ ಜ್ಞಾಪಿಸಿಯಾಗಿದೆ. ಪ್ರತಿಯೊಬ್ಬರ ಮನೆ ಮನೆಗೆ ಹೋಗಿ ಸುಸ್ತಾಗಿದೆ. ವಸೂಲಾತಿ ಮಾಡುವುದು ಖಂಡಿತ ಅಸಾಧ್ಯದ ಕೆಲಸ. ನೀವುಗಳೆ ಕಳಿಸಬೇಕು ಸಂಗಾತಿ ಸಾಕಷ್ಟು ನೊಂದಿದೆ, ಬೆಂದಿದೆ, ಒಬ್ಬ ವ್ಯಕ್ತಿ ಕನಿಷ್ಠ ಒಬ್ಬ ಸದಸ್ಯರನ್ನು ನೀಡಿದರೆ ಸಾಕು. ಮುಂದೆ ಪತ್ರಿಕೆ ಲಕ್ಷಣ ರೇಖೆಯಂತೆ ಕಾರ್ಯನಿರ್ವಹಿಸಬಲ್ಲದು. ಅಪಪ್ರಚಾರದಂತಹ ಕಿವಿಮಾತುಗಳಿಗೆ ಆಸ್ಪದ ನೀಡದಿರಿ. ನೇರವಾಗಿ ಸಂಗಾತಿಯನ್ನು (404290) ಸಂಪರ್ಕಿಸುವುದು.

ಒಂದು ಜನಾಂಗದ ಅಭಿವೃದ್ಧಿಯೇ ಒಂದು ದೇಶದ ಪ್ರಗತಿಯೆಂಬುದರಲ್ಲಿ ನಮಗೆ ಖಂಡಿತ ನಂಬಿಕೆ ಇದೆ.

-ಸಂಪಾದಕಿ.

ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ



ಮಂಗಳೂರು ವಿಶ್ವವಿದ್ಯಾನಿಲಯದ ಅರ್ಥ ಶಾಸ್ತ್ರ ವಿಭಾಗದ ಪ್ರೊ. ಎಸ್. ಗಿರಿಯಪ್ಪ ಅವರ ಮಾರ್ಗದರ್ಶನದಲ್ಲಿ ಕೊಡಗಿನ ಬಿ.ಸಿ. ಮಂಜುಳಾ ಅವರು ರಚಿಸಿರುವ "ಯಾ ಈವ್ಯಾಲ್ಯುವೇಶನ್ ಆಫ್ ಎಂಪ್ಲಾಯಿಮೆಂಟ್ ಪ್ರೋಗ್ರಾಮ್ಸ್ ಫಾರ್ ವುಮೆನ್" ಎಂಬ ಮಹಾ ಪ್ರಬಂಧಕ್ಕೆ ವಿ.ವಿ. ಯು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಮಂಜುಳಾ ಅವರು ಮಡಿಕೇರಿಯ ವಕೀಲರಾದ ಕೋಡಿ ನಿರ್ಮಲಾನಂದ ಅವರ ಪತ್ನಿಯಾಗಿದ್ದು, ಮೂಲತಃ ಕೊಡಗಿನ ಬೊಳ್ತಜ್ಜಿರ ಚಂಗಪ್ಪ ಮತ್ತು ರತ್ನ ಅವರ ಪುತ್ರಿಯಾಗಿದ್ದಾರೆ. ಪ್ರಸ್ತುತ ಮಂಜುಳಾ ಅವರು ಮಂಗಳೂರಿನ ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗದ ಪ್ರೊಫೆಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸೇರ್ಪಡೆ

ಹತ್ತು ಕುಟುಂಬ ಹದಿನೆಂಟು ಗೋತ್ರಕ್ಕೆ ಸೇರಿದವರ ಮನೆ ಹೆಸರುಗಳು - ಕೊಡಗು ಸಂಗಾತಿ, ಸಂಪುಟ 3, ಸಂಚಿಕೆ 17,18 (1-9-99 to 30-9-1999)

ಈ ಮೇಲ್ಕಂಡ ಸಂಚಿಕೆಯಲ್ಲಿ ಕೊಡಗಿನ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಗೌಡ ಮನೆತನಗಳ ಹೆಸರು ಪ್ರಕಟವಾಗಿತ್ತು. ಈ ಪ್ರಕಟಣೆಗೆ ಪೂರಕವಾಗಿ ಈಗ ಈ ಹೆಸರುಗಳು ಸೇರ್ಪಡೆಗೊಳ್ಳುವುವು.

ದ. ಕ. ಜಿಲ್ಲೆ : ಗುಂಡಿ ಮಜಲು, ಬೊಪ್ಪಳಿಕೆ, ಎಕ್ಕಡ್ಕ

ಕೊಡಗು ಜಿಲ್ಲೆ : ಆಲುಗುಂಜ, ಎಕ್ಕಡ್ಕ, ಚೆರ್ಕನ,ಬೊಮ್ಮನ, ಮಳ್ಳಂದಿರ, ನೆಕ್ಕಿಲನ, ಚಿಕ್ಕೊಡಿ, ಪಡ್ಪು, ಪಾರಕೋಡಿ, ಕಲ್ಪಡ.

ವಿ. ಸೂ.: ಮನೆ ಹೆಸರುಗಳನ್ನು ಪ್ರಕಟಿಸಲು ಬಾಕಿಯಿದ್ದರೆ ಓದುಗರು ಕಾರ್ಡ್‌ನಲ್ಲಿ ಬರೆದು ಸಂಗಾತಿಗೆ ಕಳುಹಿಸುವುದು.

-ಸಂಗಾತಿ

ಉದ್ಯೋಗ ಸಂಗಾತಿ :

ಕರ್ನಾಟಕದ ವಿವಿಧ ಜಿಲ್ಲೆ ಗಳಲ್ಲಿ ಪೋಲಿಸ್ ಪೇದೆ ಹಾಗೂ ಸಶಸ್ತ್ರ ಪಡೆಯ ಪೇದೆಗಳಿಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ಸಂಖ್ಯೆ : ಸುಮಾರು 2,000. ಗಂಡಸರು ಮತ್ತು ಹೆಂಗಸರಿಗೆ ವಿದ್ಯಾರ್ಹತೆ : ಸಿವಿಲ್ ಪೇದೆ (PUC) , ಸಶಸ್ತ್ರ ಪೇದೆ : (SSLC) ಕರ್ನಾಟಕ ರಾಜ್ಯ ಕೊನೆ ದಿನಾಂಕ - **7-2-2003,** ಹೆಚ್ಚಿನ ಮಾಹಿತಿ, ಸಲಹೆ, ಸೂಚನೆ ಇತ್ಯಾದಿಗಳಿಗೆ ಕೂಡಲೇ ಸಂಪರ್ಕಿಸಿ. **(R) 3433328, (O) 3433014** ಮತ್ತು **5283553.**

ಪ್ರಕಟಣೆ : ಅಧ್ಯಕ್ಷರು, ಕೊಡಗು + ದ. ಕ.ಗೌಡ ಸಮಾಜ, ಬೆಂಗಳೂರು.

2003, ಫೆಬ್ರವರಿ 1 ರಿಂದ 28ರ ತನಕ

ಒಳನೋಟ

ಕನ್ನಡ ವಿಭಾಗ	ಲೇಖಕರು	ಪುಟಗಳು

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಅಥವಾ ಕೋರಿಯರ್ ಸರ್ವಿಸ್ ಇತ್ಯಾದಿ	ಕೊಡಗು ಸಂಗಾತಿ, 12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17 ಫೋನ್: **0821/404290**
	ಕೆ.ಜಿ. ರಾಮಕೃಷ್ಣ, ಕಾವೇರಿ ಆಟೋಮೊಬೈಲ್ ಮುಖ್ಯರಸ್ತೆ, ರಿಂಗ್ ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 ಫೋನ್ : **518463**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್	ಬೈತಡ್ಕ ಜಾನಕಿ ಬೆಳ್ಯಪ್ಪ,, ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/228047**
	ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/229620
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/456591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/673370
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **12**ರೂ.

ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಇಂಡಿಯಾ ನಂಬರ್ ವನ್ - 2020

ಭವ್ಯ ಭಾರತದ ಹಾಲಿ ರಾಷ್ಟ್ರಪತಿ ಅಬ್ದುಲ್ ಕಲಾಂ ಈ ಹಿಂದಿನ ಎಲ್ಲಾ ರಾಷ್ಟ್ರಪತಿಗಳಿಗಿಂತ ವಿಭಿನ್ನವಾಗಿರುವುದು ನೂರಕ್ಕೆ ನೂರರಷ್ಟು ಸತ್ಯ. ಈ ವರ್ಷದ ಗಣ ರಾಜ್ಯೋತ್ಸವ ಸಮಯದಲ್ಲಿ ದೇಶವನ್ನು ಉದ್ದೇಶಿಸಿ ಮಾಡಿರುವ ಸುಂದರ ಭಾಷಣವೇ ಇದಕ್ಕೆ ಸಾಕ್ಷಿ. ದೇಶದ ಸಾಮರ್ಥ್ಯ ಹಾಗೂ ಸವಾಲುಗಳ ನಕ್ಷೆಯೊಂದನ್ನೆ ಅವರು ಜನತೆಗೆ ಬಿಡಿಸಿ ಟ್ಟಿದ್ದಾರೆ. ದೇಶದ ಅಭಿವೃದ್ಧಿ ಫಥದಲ್ಲಿ ಭಾತರೀಯರು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಸಾರಿದ್ದಾರೆ. ಸಾಮಾನ್ಯವಾಗಿ ಇಂತಹ ಭಾಷಣಗಳಲ್ಲಿ ಪ್ರಸ್ತಾಪಿಸುವ ಅಂಶಗಳಿಗೆ ಕಲಾಂ ಯಾವುದೇ ಪ್ರಾಮುಖ್ಯ ನೀಡದಿರುವುದು ವಿಶೇಷವಾಗಿದೆ. ರಾಜಕೀಯದ ಮಾತುಗಳಿಂದ ಬಹೂದೂರವಾಗಿಯೇ ಉಳಿದಿದ್ದ ಕಲಾಂ ತಮ್ಮ ಭಾಷಣದಲ್ಲಿ ಇತ್ತೀಚಿನ ಕೋಮು ಹಿಂಸಾಚಾರವನ್ನಾಗಲಿ, ಜ್ಯಾತ್ಯತೀತ ಮತ್ತೆ ಅಲ್ಪ ಸಂಖ್ಯಾತ ಎಂಬ ಪದ ಬಳಕೆ ಮಾಡದೆ ಇದ್ದದ್ದು ನಿಜಕ್ಕೂ ಗಮನಾರ್ಹ.

ಅವರ ರಾಜಕೀಯ ಭಾಷಣದಲ್ಲಿ ಕಂಡು ಬಂದ ಒಂದೇ ರಾಜಕೀಯ ಅಂಶವೆಂದರೆ ಜಮ್ಮು-ಕಾಶ್ಮೀರ, ಹಾಗೂ ಗುಜರಾತ್ ಚುನಾವಣೆ. ಈ ಚುನಾವಣೆಗಳಲ್ಲಿ ಜನರು ನಿರ್ಭೀತಿಯಿಂದ ಪಾಲ್ಗೊಂಡು ರಾಷ್ಟ್ರದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಎತ್ತಿ ಹಿಡಿದದ್ದು ಅತ್ಯಂತ ಪ್ರಶಂಸನೀಯವೆಂದು ಶ್ಲಾಘಿಸಿದ್ದಾರೆ. ಬಡವರ ಸ್ಥಿತಿ ಸುಧಾರಣೆ ಯೋಜನೆಗೆ ಆಗ್ರಹ, ಯುವ ಜನ-ಮಕ್ಕಳ ಬಗೆಗೆ ಕಾಳಜಿ, ಎಲ್ಲರೂ ಸಮ, ಸರ್ವರಿಗೂ ಸಮಪಾಲು, ಪ್ರತಿಯೊಬ್ಬನು ಭಾರತೀಯನು, ವಿಜ್ಞಾನ-ತಂತ್ರ ಜ್ಞಾನದ ಬೆಳವಣಿಗೆ ಮೂಲಕ ದೇಶದವನ್ನು 2020 ರ ವೇಳೆಗೆ ಅತ್ಯಂತ ಪ್ರಗತಿ ಹೊಂದಿದ ರಾಷ್ಟ್ರವನ್ನಾಗಿಸುವ ಪರಮ ಅತ್ಯುಚ್ಛ ಕನಸು- ಇವು ಕಲಾಂ ಅವರ ಆಶಯಗಳು. ಇಂತಹ ಆಶಯಗಳ ಕನಸು ನನಸು ಆದಾಗ ನಾವು ನಿಜಕ್ಕೂ ಧನ್ಯರು.

ದೇಶದ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಎರಡನೆ 'ಹಸಿರು ಕ್ರಾಂತಿ'ಗೆ ಕಲಾಂ ಪ್ರತಿಪಾದಿಸಿದ್ದಾರೆ. ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಳ ಹಾಗೂ ಕೃಷಿ ಯೋಗ್ಯ ಭೂಮಿ ಲಭ್ಯತೆ ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಭರತ ಭೂಮಿಯ ಒಂದಿಂಚು ಜಾಗ ಖಾಲಿ ಇಲ್ಲದೆ ಕೃಷಿ ಯೋಗ್ಯಕ್ಕೆ ಹಸಿರು ಕ್ರಾಂತಿಯ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ. ಆಡಳಿತದಲ್ಲಿಯೂ ಸಹ ಪಾರದರ್ಶಕತೆಯ ಅವಶ್ಯಕತೆ ಇದೆ ಎಂಬ ಕಲಾಂ ಅವರ ಮಾತು ಒಪ್ಪಿತಕ್ಕದಾದರೂ ಅದು ಅಸಾಧ್ಯವೇನಲ್ಲ. ಒಟ್ಟಿನಲ್ಲಿ ಕಲಾಂ ಅವರ ಭಾಷಣ ದೇಶದ ಭವಿಷ್ಯದ ಒಂದು ವಿಶೇಷ ಹೊಸ ನೋಟವೆಂದು ವ್ಯಾಖ್ಯಾನಿಸಬಹುದು. ಇಂತಹ ಮಹಾನ್ ಚಿಂತನೆಗೆ ಪ್ರತಿ ಭಾರತೀಯರ ಕೊಡುಗೆ ಅಪಾರ. ಆ ದಿಸೆಯಲ್ಲಿ ನಾವೆಲ್ಲರೂ ನಡೆಯಬೇಕು. ಆಗಲೇ ರಾಮ ರಾಜ್ಯದ ಕನಸು ನನಸಾಗುವುದು.

ದುಪ್ಪಟಿ - ದೂರವಾಣಿ

ಭಾರತೀಯ ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರವು ಘೋಷಿಸಿರುವ ಪರಿಷ್ಕೃತ ದರವು ಸ್ಥಿರ ದೂರವಾಣಿ ಚಂದಾದಾರರತ್ತಲೇ ಕೇಂದ್ರೀಕೃತವಾದಂತಿದೆ. ಬಗ್ಗಿದವನಿಗೆ ಗುದ್ದು ಹೆಚ್ಚೆನ್ನುವಂತೆ ದೇಶದ ಸುಮಾರು ನಾಲ್ಕು ಕೋಟಿ ಸ್ಥೀರ ಫೋನ್ ಹೊಂದಿರುವವರಿಗೆ ಈ ದರ ಏರಿಕೆಯ ಬಿಸಿ ತಟ್ಟಲಿದೆ. ಮಾಸಿಕ ಬಾಡಿಗೆ ದರವನ್ನು 250 ರೂಪಾಯಿಗಳಿಂದ 280 ರೂಪಾಯಿಗಳಿಗೇರಿಸಲಾಗಿದೆ. ಇದರೊಂದಿಗೆ ಅನೇಕ ಲಭ್ಯ ಸವಲತ್ತುಗಳಿಗೆ ಕತ್ತರಿ ಹಾಕಲಾಗಿದೆ. ಉಚಿತ ಕರೆ ಸಂಖ್ಯೆಯನ್ನು 60 ರಿಂದ 30 ಕ್ಕೆ ಹಾಗೂ ಪಲ್ಸ್ ಅವಧಿಯನ್ನು ಮೂರು ನಿಮಿಷದಿಂದ ಎರಡು ನಿಮಿಷಗಳಿಗೆ ಇಳಿಸಿರುವುದು ಇನ್ನಿತರ ಶಾಕ್. ಆದರೆ ಜನಸಂಖ್ಯೆಯ ಶೇಕಡ ಒಂದರಷ್ಟಿರುವ ಸೆಲ್ ಬಳಕೆದಾರರಿಗೆ ಹೆಚ್ಚಿನ ಲಾಭ ಸಿಗುವಂತಹ ಕ್ರಮಗಳನ್ನು ಪ್ರಾಧಿಕಾರ ಘೋಷಿಸಿರುವುದು ಸ್ಥಿರ ದೂರವಾಣಿ ಚಂದಾದಾರರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಈ ಹೊಸ ದರ ನೀತಿಯಿಂದ ಹೆಚ್ಚಿನ ಪ್ರಯೋಜನ ಸೆಲ್‌ಫೋನ್ ಹೊಂದಿದ ವರಿಗೆ ಮಾತ್ರ. ಎಲ್ಲ ಒಳಕರೆಗಳು ಉಚಿತವಾಗಲಿರುವುದೇ ಅದಕ್ಕೆ ಕಾರಣ.

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಫೋನ್ ಅತ್ಯಂತ ಚರ್ಚಿತ ವಿಷಯವಾಗಿದ್ದು ದಿಟ. ಅನೇಕ ಪ್ರಮುಖ ಕಂಪೆನಿಗಳು ಈ ಕ್ಷೇತ್ರದ ಮಾರುಕಟ್ಟೆಯನ್ನು ಪ್ರವೇಶಿಸಿದುದರಿಂದ ಸಹಜವಾಗಿ ಪೈಪೋಟಿ ಮುಗಿಲುಮುಟ್ಟಿತ್ತು. ಅಂತರ್ ಸಂಪರ್ಕ ಶುಲ್ಕ ವಿಚಾರದಲ್ಲಿ ವಿವಾದ ಉಂಟಾಗಿತ್ತು. ಸ್ಪರ್ಧೆಯು ನಿರೀಕ್ಷಿಸಿದಂತೆ ಮಾರುಕಟ್ಟೆಯ ವಿಸ್ತರಣೆಗೆ ಅನುವಾಯಿತು. ಈ ಹಿನ್ನಲೆಯಲ್ಲಿ ಪ್ರಾಧಿಕಾರವು ಪರಿಹಾರ ಸೂತ್ರ ರೂಪಿಸುವ ಪ್ರಯತ್ನ ಮಾಡಿ, ಸ್ಥಿರ ದೂರವಾಣಿ ಚಂದಾದಾರರಿಗೆ ಗದಾ ಪ್ರಹಾರವನ್ನೇ ಮಾಡಿದೆ. ಇದು ಸರಿಯಾದ ಕ್ರಮವು ಅಲ್ಲ. ಮೊಬೈಲ್ ಫೋನ್ ಬಳಕೆದಾರರಿಗೆ ನೆರವು ನೀಡಲು ಹಾಗೂ ಆ ಕ್ಷೇತ್ರದ ಬೆಳವಣಿಗೆಗಾಗಿ ಜನ ಸಾಮಾನ್ಯರು ತಮ್ಮ ಫೋನ್ ಸೇವೆಗಾಗಿ ಹೆಚ್ಚುವರು ಹಣ ತೆರಬೇಕಾಗಿರುವುದು ವಿಷಾದನೀಯ.

ಖಾಸಗಿ ಕಂಪೆನಿಗಳು ಅಧಿಕ ಸಂಖ್ಯೆಯಲ್ಲಿ ದೂರ ಸಂಪರ್ಕ ಕ್ಷೇತ್ರವನ್ನು ಪ್ರವೇಶಿಸುತ್ತಿರುವ ಸಂದರ್ಭದಲ್ಲಿ ಅವುಗಳಿಗೇ ಉತ್ತೇಜನ ನೀಡುವ ಈ ಕ್ರಮಗಳು ಬಂಡವಾಳ ಹಿಂತೆಗೆತ ವಿಲ್ಲದೆಯೇ ಸಾರ್ವಜನಿಕ ಉದ್ದಿಮೆಯನ್ನು 'ನಾಶ' ಪಡಿಸುವ ಪರಿ ಎಂದೇ ಹೇಳಬೇಕಾಗುತ್ತದೆ. ಈ ಹೊಸದರ ನೀತಿಯಲ್ಲಿ ಗ್ರಾಮೀಣ ಪ್ರದೇಶದ ಫೋನ್ ಬಳಕೆದಾರರಿಗೆ ಸ್ವಲ್ಪ ಸಮಾಧಾನಪಡುವ ಅಂಶವಿದೆ. ಬಾಡಿಗೆ ದರ ಏರಿಕೆ ಅವರಿಗಿಲ್ಲ. ಆದರೆ ಉಚಿತ ಕರೆ ಕಡಿತ ಅವರಿಗೂ ಅನ್ವಯ. ಪರಿಷ್ಕೃತ ದರ ನೀತಿಯು ಬರುವ ಏಪ್ರಿಲ್ 1 ರಿಂದ ಜಾರಿ ಎಂದು ಸೂಚಿಸಿ ರುವುದು ಹುಬ್ಬೇರುವಂತೆ ಮಾಡಿದೆ. ಬಹುಶಃ ವಿವಿಧ ಹಿತಾಸಕ್ತಿ ಗಳಿಗೆ ಲಾಬಿ ನಡೆಸಲು ಕಾಲಾವಕಾಶ ನೀಡುವ ಉದ್ದೇಶ ಇದಾಗಿರಬಗುದು.

ಅದೇನೇ ಇರಲಿ, ಹೊಸ ನೀತಿಯಿಂದಾಗಿ ಖಾಸಗಿಕರಣಕ್ಕೆ ಹೆಚ್ಚು ಒತ್ತು ನೀಡಿದ್ದಲ್ಲದೆ, ದೂರ ಸಂಪರ್ಕ ಪ್ರಾಧಿಕಾರವು ತನ್ನ ಗ್ರಾಹಕರ ಕುತ್ತಿಗೆಗೆ ಉರುಳು ಹಾಕುವುದು ಸಮಂಜಸ ಕ್ರಮ ಅಲ್ಲವೆಂಬ ಅಂಶವನ್ನೂ ಇಲ್ಲಿ ಗಮನಿಸಬೇಕಾಗುತ್ತದೆ.

ಅಲ್ಪರು ಅದೃಷ್ಟ ಎನ್ನುತ್ತಾರೆ ಬುದ್ಧಿಶಾಲಿಗಳು ಕಾರ್ಯಕಾರಣಗಳನ್ನು ನಂಬುತ್ತಾರೆ

ಮಹಾನ್ ರಾಷ್ಟ್ರ ಪ್ರೇಮಿ - ಶಿಸ್ತಿನ ಸಿಪಾಯಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ



ಎತ್ತರಕ್ಕೆ ತಕ್ಕ ಮೈ ಮಾಟ, ಅಗಲ ಹಣೆ, ಹೊಳಪಿನ ಕಂಗಳು, ಹೊಂಬಣ್ಣ ಶಿಸ್ತಿನ ಸಿಪಾಯಿ ಎನಿಸಿದ್ದ ಫೀಲ್ಡ್ ಮಾ. ಕಾರ್ಯಪ್ಪ ಅಪ್ರತಿಮ ದೇಶಭಕ್ತರೂ ಕೂಡ ಹೌದು. ಭಾರತವೊಂದು ಪ್ರಬಲ ರಾಷ್ಟ್ರವಾಗಿ ರೂಪುಗೊಳ್ಳ ಬೇಕಿದ್ದಲ್ಲಿ ಬಲಿಷ್ಠ ಸೈನ್ಯದ ಅಗತ್ಯತೆ ಯನ್ನು ಪ್ರತಿಪಾದಿಸಿದ್ದ ಅವರು ರಾಷ್ಟ್ರ ರಕ್ಷಣೆಯ ನೆಪದಲ್ಲಿ ಸೇನೆಗೆ ಭರ್ತಿಗೊಂಡು ಅಪೂರ್ವ ಸಾಧನೆ ತೋರಿದ್ದವರು.

ಇಂತಹ ಅಪ್ರತಿಮ ದೇಶಭಕ್ತ, ಪರಿಸರ ಪ್ರೇಮಿ ಕೊಡಂದೇರ ಕಾರ್ಯಪ್ಪ ಅವರು 1899 ಜನವರಿ 28 ರಂದು ಶನಿವಾರ ಸಂತೆಯ ಕೊಡಂದೇರ ಕುಟುಂಬದಲ್ಲಿ ಜನಿಸಿದರು. ಕಂದಾಯ ಅಧಿಕಾರಿಯಾಗಿದ್ದ ಇವರ ತಂದೆ ಮಾದಪ್ಪ ಅವರು ಕೂಡ ಶಿಸ್ತಿಗೆ ಹೆಸರಾದವರು. ಹೀಗಾಗಿ ಕಾರ್ಯಪ್ಪನವರಲ್ಲೂ ಶಿಸ್ತೆಂಬುದು ರಕ್ತಗತವಾಗಿ ಹರಿದು ಬಂದಿದೆ ಎಂದರೆ ತಪ್ಪೆನಿಸದು.

ಸ್ವತಂತ್ರ ಭಾರತದ ಪ್ರಪ್ರಥಮ ದಂಡನಾಯಕರಾಗಿ ನೇಮಕಗೊಂಡಿದ್ದ ಶಿಸ್ತಿನ ಸಿಪಾಯಿ ಎನಿಸಿದ್ದ ಕೊಡಗಿನ ಕೆ. ಎಂ. ಕಾರ್ಯಪ್ಪ ಅವರ ಸೇವೆ ಮರೆಯಲಾಗದಂತಹದು. ಇಂತಹ ಮಹಾನ್ ವ್ಯಕ್ತಿಯ ೧೦೪ನೇ ವರ್ಷದ ಜನ್ಮ ದಿನವಾದ ಈ ಸಂದರ್ಭದಲ್ಲಿ ಅವರ ನಡೆನುಡಿಯನ್ನು ಆದರ್ಶವನ್ನಾಗಿಟ್ಟುಕೊಂಡು ತಾಯ್ನಾಡನ್ನು ರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ತಮ್ಮ ಪ್ರಾಥಮಿಕ ವಿದ್ಯಾಭ್ಯಾಸಗಳನ್ನು ಮಡಿಕೇರಿಯ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ಪೂರೈಸಿದ್ದ ಕಾರ್ಯಪ್ಪ ಅವರು ಉನ್ನತ ಶಿಕ್ಷಣಕ್ಕಾಗಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿಗೆ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿಯೇ ಕಾರ್ಯಪ್ಪನವರಲ್ಲಿ ರಾಷ್ಟ್ರಪ್ರೇಮಿಯ ಸೆಲೆ ಮೊಳಕೆ ಯೊಡೆದಿತ್ತು.

1917 ರಲ್ಲಿ ಸೇನೆಗೆ ಆಯ್ಕೆಗೊಂಡ ಕಾರ್ಯಪ್ಪ ಅವರು ತನ್ನ ಸೇವಾವಧಿಯಲ್ಲಿ ಇರಾಕ್, ಸಿರಿಯಾ ಹಾಗೂ ಇರಾನ್‌ಗಳಿಗೂ ತೆರಳಿ ಕರ್ತವ್ಯ ನಿರ್ವಹಿಸಿದ್ದರು. 1943-44ರಲ್ಲಿ ಬರ್ಮಾ ಹಾಗೂ ವಜೀರಿ ಸ್ಥಾನದಲ್ಲಿ ಸೇನಾ ಮುಖ್ಯಸ್ಥನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭ, ಹದಿನೇಳನೆಯ ರೆಜಿಮೆಂಟನ್ನು ಸ್ಥಾಪಿಸಿದಲ್ಲದೆ ಅದರ ಅಧಿಪತಿ ಯಾಗಿಯೂ ಕರ್ತವ್ಯ ನಿರ್ವಹಿಸಿದ್ದರು. ಇದೇ ಸಂದರ್ಭ ಭಾರತದ ಪೂರ್ವ ಭಾಗದಲ್ಲಿ ಯುದ್ಧದ ಪರಿಸ್ಥಿತಿ ನಿರ್ಮಾಣ ಗೊಂಡಾಗಲಂತೂ ತಮ್ಮ ಸಮರ್ಥ ನಾಯಕತ್ವದಲ್ಲಿ ಹೋರಾಟ ನಡೆಸಿ ಯಶಸ್ಸು ಪಡೆದಿರುವ ಕೀರ್ತಿ ಕಾರ್ಯಪ್ಪ ಅವರಿಗೆ ಲಭಿಸುತ್ತದೆ.

1946 ರಲ್ಲಿ ಕಾರ್ಯಪ್ಪ ಅವರಿಗೆ ಸೇನೆಯಲ್ಲಿ ಬ್ರಿಗೇಡಿಯರ್ ಆಗಿ ಬಡ್ತಿ ದೊರಕಿತ್ತು. ಅನಂತರ ಸೈನ್ಯದ ಪುನರ್ ಸಂಘಟನೆಯತ್ತ ಒಲವು ಹರಿಸಿದ್ದ ಕಾರ್ಯಪ್ಪ ಅವರಿಗೆ 1947 ರಲ್ಲಿ ಭಾರತ ಸ್ವತಂತ್ರಗೊಂಡಾಗ ವಿಧಿಯಿಲ್ಲದೆ ಸೇನಾಪಡೆಯನ್ನು ವಿಭಜಿಸಬೇಕಾಗಿ ಬಂದಿತ್ತು.

1947 ರಲ್ಲಿ ಭಾರತ -ಪಾಕಿಸ್ತಾನ ವಿಭಜನೆಗೊಂಡ ಸಂದರ್ಭ ಭಾರತೀಯ ಸೇನಾಪಡೆಯನ್ನು ಎರಡು ಭಾಗಗಳಾಗಿ ನಿಷ್ಪಕ್ಷಪಾತವಾಗಿ ವಿಭಜಿಸಿ ಶತ್ರು ಪಾಳೆಯದ ಮೆಚ್ಚುಗೆಯನ್ನು ಕೂಡ ಕಾರ್ಯಪ್ಪ ಅವರು ಗಳಿಸಿದ್ದರು.

ಮುಂದೆ ಸ್ವಾತಂತ್ರ್ಯ ಭಾರತದ ಸೇನಾ ಪಡೆಯ ಮುಖ್ಯಸ್ಥರಾಗಿ ಆಯ್ಕೆಗೊಂಡ ಕಾರ್ಯಪ್ಪ ಅವರಿಗೆ ಮೇಜರ್ ಜನರಲ್ ಪದವಿ ಲಭಿಸಿತ್ತು. ಈ ಸಂದರ್ಭ ಭಾರತೀಯ ಸೇನೆಯನ್ನು ಮತ್ತೆ ಒಂದು ಗೂಡಿಸುವಲ್ಲಿ, ಕಾರ್ಯಪ್ಪ ಅವರು ತೋರಿರುವ ಸಾಹಸ ಅಪಾರ. ಅನಂತರ ಲೆಫ್ಟಿನೆಂಟ್ ಜನರಲ್ ಆಗಿ ಬಡ್ತಿ ಹೊಂದಿದ ಕಾರ್ಯಪ್ಪ ಅವರಿಗೆ ಭಾರತದ ಸ್ವಾತಂತ್ರ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಮಹಾತ್ಮಗಾಂಧಿ ಅವರೊಂದಿಗೆ ಉತ್ತಮ ಬಾಂಧವ್ಯ ವೇರ್ಪಟ್ಟಿತು.

ಇದೇ ಸಂದರ್ಭ ಪಾಕಿಸ್ತಾನವು ಕಾಶ್ಮೀರದ ಮೇಲೆ ಧಾಳಿ ನಡೆಸಿ, ಅದನ್ನು ವಶಪಡಿಸಿಕೊಳ್ಳುವ ಪ್ರಯತ್ನ ನಡೆಸಿತ್ತು. ಭಾರತೀಯ ಸೇನಾಪಡೆಯ ಮಹಾದಂಡನಾಯಕರಾಗಿ ನೇಮಕಗೊಂಡಿದ್ದ ಕಾರ್ಯಪ್ಪ ಅವರು ಅದನ್ನು ಸಮರ್ಥವಾಗಿ ಎದುರಿಸಿ ಹಿಮ್ಮೆಟ್ಟಿಸುವಲ್ಲಿ ಸಫಲರಾಗಿದ್ದರು.

1949 ರ ಜನವರಿ 15 ರಂದು ಭಾರತ ಸೇನಾಪಡೆಯ ಮಹಾದಂಡನಾಯಕರಾಗಿ ಕಾರ್ಯಪ್ಪ ಅವರನ್ನು ಸರಕಾರ ನೇಮಕಗೊಳಿಸಿತ್ತು. ಇದಾದ ನಾಲ್ಕು ವರ್ಷಗಳಲ್ಲಿಯೇ ಕಾರ್ಯಪ್ಪ ಅವರು ಭಾರತೀಯ ಸೇನಾಪಡೆಗೆ ಒಂದು ರೂಪು ಕೊಡುವಲ್ಲಿ ಯಶಸ್ವಿಯಾಗಿದ್ದರು. ಕಾರ್ಯಪ್ಪ ಅವರು ಸೇನಾ ಮಹಾದಂಡನಾಯಕನಾಗಿ ನೇಮಕಗೊಂಡ ದಿನವನ್ನು ಇಂದಿಗೂ ಕೂಡ ರಾಷ್ಟ್ರದಾದ್ಯಂತ ಸೇನಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದ್ದು, ಅಂದು ರಾಷ್ಟ್ರದ ಮೂರು ಸೇನಾಪಡೆಗಳು ಒಟ್ಟಾಗಿ ಕವಾಯತು ನಡೆಸಿವೆ. ಅದು ಇಂದು ಸಹ ಮುಂದುವರಿದು ಬಂದಿದೆ.

1953 ರ ಜನವರಿಯಲ್ಲಿ ಸೇನೆಯಿಂದ ನಿವೃತ್ತಿ ಹೊಂದಿದ ಕಾರ್ಯಪ್ಪ ಅವರನ್ನು ಅಂದಿನ ಪ್ರಧಾನಿ ನೆಹರೂ ಅವರು ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್‌ಗಳಿಗೆ ರಾಯಭಾರಿಯನ್ನಾಗಿ ನೇಮಿಸಿದ್ದರು. ಮೂರು ವರ್ಷಗಳ ಕಾಲ ರಾಯಭಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಕಾರ್ಯಪ್ಪ ಅಲ್ಲಿನ ದೇಶವಾಸಿಗಳ ಮನಗೆದ್ದವರಲ್ಲದೆ, ಅನಂತರದಲ್ಲಿ ಆ ರಾಷ್ಟ್ರದಲ್ಲಿ ತಲೆದೋರಿದ್ದ ಪ್ರಕ್ಷುಬ್ಧ ಪರಿಸ್ಥಿತಿಯಿಂದ ಮನನೊಂದು ತಾಯ್ನಾಡಿಗೆ ಮರಳಿದ್ದರು.

1962 ರಲ್ಲಿ ಚೀನಾ ದೇಶವು ಭಾರತದ ಕೆಲ ಭೂ ಪ್ರದೇಶಗಳನ್ನು ಆಕ್ರಮಿಸಿಕೊಂಡಾಗಲಂತೂ ಭಾರತೀಯ ಸೈನ್ಯವನ್ನು ಸೇರಲು ತುದಿಗಾಲಲ್ಲಿ ನಿಂತಿದ್ದ ಕಾರ್ಯಪ್ಪ ಅವರು ತಾಯ್ನಾಡಿಗಾಗಿ ತಮ್ಮ ಪ್ರಾಣವನ್ನು ಬಲಿಕೊಡಲು ಸಿದ್ಧರಾಗಿದ್ದರು.

ತಮ್ಮ ಸೇವಾವಧಿಯಲ್ಲಿ ಭಾರತೀಯ ಸೇನಾಪಡೆಗೆ ಅಪೂರ್ವ ಸೇವೆ ಸಲ್ಲಿಸಿದ್ದ ಕಾರ್ಯಪ್ಪ ಅವರ ಸೇವೆಯನ್ನು ಪರಿಗಣಿಸಿದ ಕೇಂದ್ರ ಸರ್ಕಾರವು 1980 ರಲ್ಲಿ ಸೇನೆಯ ಅತ್ಯುನ್ನತ ಗೌರವ ಸ್ಥಾನವಾದ ಫೀಲ್ಡ್ ಮಾರ್ಷಲ್ ಪದವಿಯನ್ನಿತ್ತು ಗೌರವಿಸಿತ್ತು.

ತಮ್ಮ ಸೇವಾವಧಿಯಲ್ಲಿ ಸಮಾನತೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದವರು ಕಾರ್ಯಪ್ಪ. ಯುದ್ಧದ ಸಂದರ್ಭಗಳಲ್ಲಿ ಶಿಶು ಹಾಗೂ ಸ್ತ್ರೀಯರುಗಳನ್ನು ಹಿಂಸಿಸದಂತೆ ಹಾಗೂ ಧಾರ್ಮಿಕ ಸ್ಥಳಗಳನ್ನು ಸಂರಕ್ಷಿಸುವಂತೆ ಆದೇಶಿಸಿದ್ದರು.

ಹೀಗೆ " ಬಹುಜನ ಹಿತಾಯ ಬಹುಜನ ಸುಖಾಯ' ಎಂಬ ತತ್ವವನ್ನು ಆದರ್ಶವಾಗಿಟ್ಟುಕೊಂಡು ಯಾವುದೆ ಜಾತಿ ಮತ ಪಂಥ ಹಾಗೂ ಪ್ರದೇಶಗಳ ಸೀಮೆಯನ್ನು ದಾಟಿ ಸಮಾಜದ ಏಳಿಗೆಗೆ ಶ್ರಮಿಸಿದ ಕಾರ್ಯಪ್ಪ ಅವರು 93 ವರ್ಷಗಳ ದೀರ್ಘಕಾಲ ತುಂಬು ಜೀವನ ನಡೆಸಿ 1993 ರ ಮೇ 14 ರಂದು ನಮ್ಮನ್ನಗಲಿದರು. ಈಗ ಅವರು ಬಿಟ್ಟು ಹೋದ ಆದರ್ಶಗಳ ನೆನಪುಗಳ ಮಾತ್ರವೇ ನಮ್ಮ ಬಳಿಯಿದೆ.

- ಗಿರಿ.

ಪತ್ರ ವಿಭಾಗ :-

To,
Kodagu
Sangathi

ಕೊಡಗು ಸಂಗಾತಿ ಜನವರಿ 1ರಿಂದ 31,2003 ಕೈ ಸೇರಿತು. ಬಹಳ ಮುಖ್ಯ ವಿಶೇಷಗಳ ಸಮ್ಮಿಳನವಿದೆ. ಸಂಪಾದಕೀಯವನ್ನು ಗೌಡ ಸಮಾಜಕ್ಕೊಂದು ಗೌಡ ನ್ಯಾಯಪೀಠ ಅವಶ್ಯಕತೆಯ ವಿಚಾರ ಕಣ್ಣು ತೆರೆಸುವಂತಾದ್ದು. ಸಮಾಜದ ನ್ಯಾಯಪೀಠ ಕೊಡಗಿಗೆ ಹೊಸದೇನಲ್ಲ. ಪೂರ್ವ ಕಾಲದಲ್ಲಿ ಮಂದ್, ಅಂಬಲ, ಬಾಣೆ ಇಂತಾ ಸ್ಥಳಗಳಲ್ಲಿ ತಪ್ಪಡಕ ಎಂಬ ಪದ್ಧತಿ ಇತ್ತು. ಇಂಗ್ಲೀಷರ ಕೋರ್ಟು ಬಂದು ಇದೆಲ್ಲಾ ಹಿಂದಕ್ಕೆ ಸರಿಯಿತು. ಕೊಡಗಿನ ಕೋರ್ಟುಗಳಲ್ಲಿ ಡೈವೋರ್ಸ್ ಕೇಸುಗಳು ಹೆಚ್ಚುತ್ತಿರುವುದು ಕಳವಳಕಾರಿ. ಸಮಾಜ ನ್ಯಾಯ ಪೀಠವೊಂದೇ ನಮಗಿರುವ ಏಕೈಕ ಮಾರ್ಗ.

ಪುಟ 12 ಕೊಡಗು ಕಾಶ್ಮೀರವಾಗುತ್ತಿದೆ ಲೇಖನ ಸಂದರ್ಭಯೋಚಿತವಾದದ್ದು. ಪ್ರತಿದಿನ ಕೊಡಗಿನಲ್ಲಿ ಹಿಂಸೆ, ಕೊಲೆ, ದೌರ್ಜನ್ಯಗಳನ್ನು ಗಮನಿಸಬೇಕಾದದ್ದೆ. ಕಾರಣ ಜನರಲ್ಲಿ ಪ್ರೀತಿ, ಪ್ರೇಮ ಕಡಿಮೆ. ಸ್ವಾರ್ಥ ಹೆಚ್ಚು. ಕೊಡಗಿನ ನೆಲ, ಜಲ, ಸಂಸ್ಕೃತಿಗಳ ರಕ್ಷಕರು ನಾವೇ ಎಂಬುದರಲ್ಲಿ ಸಂಶಯವಿಲ್ಲ. ನಾವೇ ಎಂದರೆ ಕೊಡಗಿನವರು. ಜನಾಂಗದ ಹೆಸರಿಸಲಾಗದು. ಸಮಾಜಬಾಹಿರ ದುಷ್ಟ ಚಟುವಟಿಕೆಗೆ ಕಾರಣ ಕೊಡಗಿನವರೇ. ಮೊಟ್ಟ ಮೊದಲು ಕೊಡಗಿನಲ್ಲಿ ಜನಾಂಗ ಜನಾಂಗ ದ್ವೇಷವನ್ನು ಬಿತ್ತರಿಸುವವರು ಹೆಚ್ಚಾಗಿದ್ದಾರೆ. ಇದೇ ಕೊಡಗಿಗೆ ಮಾರಕ, ಅನ್ಯೋನ್ಯತೆ, ಒಗ್ಗಟ್ಟು ಕಡಿಮೆಯಾಗಿದೆ. ಕೊಡಗು ಕರ್ನಾಟಕ ದಲ್ಲಿ ವಿಲೀನವಾದಂದಿನಿಂದಲೇ ಜನಾಂಗ ದ್ವೇಷ ಹುಟ್ಟಿದೆ. ಅದನ್ನು ಸರಿಪಡಿಸುವವರು ಯಾರು? ನಾವೇ? ನಮ್ಮ ಜನಾಂಗವೇ? ಯುವಕರೇಕೆ ಹಿಂಜರಿಯುತ್ತಿದ್ದಾರೆ?ಪಟ್ಟಡ ಶಿವಕುಮಾರ್ ರವರು ಬರೆದಂತೆ ನಮ್ಮಲ್ಲಿ ಭಿನ್ನತೆ, ಪ್ರತಿಷ್ಠೆಗಳನ್ನು ಬದಿಗೆ ಸರಿಸಿ, ಸಂಘಟಿತ ಪ್ರಯತ್ನವಾಗಬೇಕಾಗಿದೆ. ಲೇಖನಗಳು ಸಾಲದು. ಕಾರ್ಯಕ್ಕಿಳಿಯಬೇಕು. ಜನಾಂಗ ಮುತ್ಸದಿಗಳ ಚಿಂತನೆ, ಪ್ರಯತ್ನ ಅನಿವಾರ್ಯವಾಗಿದೆ. ಇದನ್ನು ಹೀಗೆ ಮಾಡಬಹುದೆಂಬುದರ ವಿಷಯ ಮಾರ್ಗದರ್ಶನ ಕೊಡಿ. ಕೊಡಗನ್ನು ಕೊಡಗನ್ನಾಗಿ ಮಾಡಿ. ಪರ ಜಿಲ್ಲೆಗಳಿಗೆ ಹೋಲಿಕೆ ಸಲ್ಲ. ಕೊಡಗು ಕಾಶ್ಮೀರ ಅಲ್ಲ. ಕಾಶ್ಮೀರ ಕಾಶ್ಮೀರವೇ. ಕೊಡಗು ಕೊಡಗು ಮಾತ್ರ. ಹೋಲಿಕೆ ಸಲ್ಲ.

ಗೌಡರೆಲ್ಲರೂ ಒಂದೇ ಎಂಬುದು ಮಾತಷ್ಟೇ, ಕೊಡಗಿನ ನಿವಾಸಿ ಗೌಡರು ಎಲ್ಲಾ ವಿಧದಲ್ಲೂ ವಿಭಿನ್ನ ಗೌಡರು. ಅವರಿಗೆ ಜಮ್ಮ ಇದೆ. ಕೋವಿ ಇದೆ, ಕೈಲುಪೊಳುದು, ಕಾವೇರಿ ಸಂಕ್ರಮಣ, ಹುತ್ತರಿ ಹಬ್ಬ, ಕೋಲಾಟ ಇದೆ. ಆದ್ದರಿಂದ ಕೊಡಗಿನ ಗೌಡರು, ಗೌಡರಲ್ಲಿ ಗೌಡರು. ಅದನ್ನು ವೃದ್ಧಿಸಬೇಕು. ಕಳೆದುಕೊಳ್ಳಬಾರದು. ಸಹಬಾಳ್ವೆ ಬೇಕು. ನಮ್ಮ ನಮ್ಮೀತನ ವನ್ನು ವೃದ್ಧಿಸಬೇಕು. ಮನಸ್ಸು ಮಾಡಿ ಒಂದಾಗಿ ಕಲೆತು, ಬೆರೆತು ಬಾಳುವ. ಯುವ ಪೀಳಿಗೆಯೇ ಚಿಂತಿಸಿ, ಕೊಡಗು ನಮ್ಮದು.

-ಚೇಂದ್ರಿಮಾಡ ಗ. ಮುತ್ತಪ್ಪ

ನಗೆಹನಿ

ಶಿಷ್ಯ :ಎಲ್ಲರಿಗೂ ಪ್ರಾಣ ಹೃದಯದಲ್ಲಿ ಇದ್ದರೇ ಮೊಸಳೆಗೇಕೆ ತಲೆಯಲ್ಲಿ ಇರುತ್ತದೆ ? ಗುರು

ಗುರು : ಅರೆರೆ ಹೌದೇ! ನನಗೆ ಗೊತ್ತೇ ಇರಲಿಲ್ಲ ಶಿಷ್ಯ. ಥ್ಯಾಂಕ್ಯೂ.

-ಕಲ್ಲುಮುಟ್ಲು ಅಶೋಕ್ ಮನು, ಸಿದ್ದಾಪುರ.

ಅಧಿಕಾರ ಎಂಬುದು ಒಂದು ಮುಳ್ಳಿನ ಹಾಸಿಗೆ ಇದ್ದಂತೆ

ಹುತಾತ್ಮ ಸುಭೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡ ಸಂಸ್ಮರಣ ಸಮಿತಿ, ಮಡಿಕೇರಿ, ಕೊಡಗು.

ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ. ಮಡಿಕೇರಿ ಇವರ ಮೂಲಕ ಮನವಿಯನ್ನು ದಿನಾಂಕ 31-10-2002 ರಂದು ಸಲ್ಲಿಸಲಾಯಿತು.

ಸನ್ಮಾನ್ಯ ಮುಖ್ಯಮಂತ್ರಿಗಳು

ಮನವಿ :

1837 ರ ಕಾಲಘಟ್ಟದಲ್ಲಿ "ಕೊಡಗು ಕೆನರಾ ಬಂಡಾಯ/ಅಮರ ಸುಳ್ಯ ರೈತದಂಗೆ" ಬ್ರಿಟಿಷರ ವಿರುದ್ಧ ಹೋರಾಡಿ, ಗಲ್ಲಿಗೇರಿಸಲ್ಪಟ್ಟು ವೀರ ಸ್ವರ್ಗವನ್ನೇರಿದ ಹುತಾತ್ಮ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಮತ್ತು ಇತರ 12 ಮಂದಿಯವರುಗಳ ಸ್ಮರಣಾರ್ಥ ಸ್ಮಾರಕ ನಿರ್ಮಾಣ ಮತ್ತು ಶ್ರದ್ಧಾಂಜಲಿ ಕಾರ್ಯಕ್ರಮದ ಬಗ್ಗೆ.

ಪೀಠಿಕೆ :

ಗಿರಿವನಗಳಿಂದ ಕೂಡಿದ ಕೊಡಗು ಜಿಲ್ಲೆಯ ಇತಿಹಾಸದ ಪುಟಗಳನ್ನು ಹಲವು ಗ್ರಂಥಗಳ ಮೂಲಕ ತಿರುವಿ ಹಾಕಿದಾಗ ಭಾರತದ ಸ್ವಾತಂತ್ರ್ಯ ಪೂರ್ವದ ಕಾಲಘಟ್ಟದಲ್ಲಿ ಪ್ರಪ್ರಥಮವಾಗಿ ಕೊಡಗಿನ ನಾಡರಕ್ಷಣೆಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿಯಾಗಿರುವುದು ಕಂಡುಬರುತ್ತದೆ. ಇದನ್ನು ಅವಲೋಕಿಸಿದಾಗ ಆಗಿನ ಕೊಡಗು ಜಿಲ್ಲೆಯ ಮೈಸೂರಿನ ಪಿರಿಯಾಪಟ್ಟಣದಿಂದ ಹಿಡಿದು ಪುತ್ತೂರು-ಸುಬ್ರಹ್ಮಣ್ಯ ಮಂಗಳೂರಿನ ಬೆಳ್ತಂಗಡಿಯವರೆಗೂ ವ್ಯಾಪಿಸಿರುವುದು ಗೋಚರಿಸುತ್ತದೆ. ಈ ಸೀಮೆಯನ್ನು ಅಂದಿನ ಬ್ರಿಟಿಷ್ ಆಡಳಿತಾಧಿಕಾರಿಯಾಗಿದ್ದ ಲೇ|| ಕ|| ಫ್ರೇಸರನು ತನ್ನ ಸ್ವಾರ್ಥ ಸಾಧನೆಗಾಗಿ, ಆಗಿನ ಕೊಡಗಿನ ಹಾಲೇರಿ ಮನೆತನದ ಲಿಂಗಾಯಿತ ವಂಶದ ರಾಜ ಚಿಕ್ಕವೀರರಾಜೇಂದ್ರ ಒಡೆಯರಿಂದ ಕ್ರಿ. ಶ. 1834 ನೇ ಇಸವಿ ಏಪ್ರಿಲ್ 10 ರಂದು ಯಾವುದೇ ಪ್ರತಿಭಟನೆಯನ್ನು ಎದುರಿಸದೆ ತನ್ನ ವಶಪಡಿಸಿಕೊಳ್ಳುತ್ತಾನೆ. ಕೊಡಗಿನಲ್ಲಿ ಬ್ರಿಟಿಷ್ ಸರಕಾರದ ಧ್ವಜವಾದ ಯೂನಿಯನ್ ಜಾಕನ್ನು ಹಾಲೇರಿ ರಾಜರ ಧ್ವಜವಿದ್ದ ಸ್ಥಾನದಲ್ಲಿ ಮಡಿಕೇರಿಯ ಕೋಟೆಯಲ್ಲಿ (ಇಂದಿನ ಜಿಲ್ಲಾಧಿಕಾರಿಯವರ ಕಛೇರಿ) ಧ್ವಜದ ಕಂಬದ ಮೇಲೆ ಏರಿಸುತ್ತಾನೆ. ಈ ಬ್ರಿಟಿಷ್ ಅಧಿಕಾರಿಯ ಒಳಸಂಚಿಗೆ ಕೊಡಗಿನವರೆ ಆದ ಕೆಲವು ದಿವಾನರುಗಳ ಬೆಂಬಲವೇ ಕಾರಣವೆಂದು ತಿಳಿಯುತ್ತದೆ. ಏಪ್ರಿಲ್ 10 ರಂದು ಬ್ರಿಟಿಷರ ಧ್ವಜ ಮಡಿಕೇರಿ ಕೋಟೆಯಲ್ಲಿ ಏರಿಸಲ್ಪಡುವ ಕಾಲಕ್ಕೆ ಕೊಡಗು ರಾಜ ದಂಪತಿಗಳು ತಮ್ಮ ಪರಿವಾರ ಸಮೇತ ನಾಲ್ಕು ನಾಡಿನ ಅರಮನೆಯಲ್ಲಿ (ಕಕ್ಕಬ್ಬೆ ಸಮೀಪ ಯವಕಪಾಡಿ ಗ್ರಾಮದಲ್ಲಿ) ವಿರಾಮದಿಂದಿರುತ್ತಾರೆ. ಈ ಮೋಸದ ಕೃತ್ಯ ನಡೆದದ್ದು ರಾಜರಿಗಾಗಲೀ, ರಾಜರ ಆಪ್ತರಿಗಾಗಲಿ ತಿಳಿಯದೆಯೇ ಒಂದು ನಾಟಕದಂತೆ ಎಲ್ಲವೂ ನಡೆದುಹೋಗುತ್ತದೆ.

ಮುಂದೆ ಕೊಡಗಿನ ಕೆಲವು ದಿವಾನರುಗಳ ಅಭಿಪ್ರಾಯದ ಮೇರೆ ತೋರ್ಪಡಿಕೆಗೆ ದೇಶೀಯ ರಾಜರುಗಳ ಆಡಳಿತದಲ್ಲಿ ಕೊಡಗಿನ ಪ್ರಜೆಗಳಿಗೆ ವಿಶ್ವಾಸವಿಲ್ಲವೆಂದು ಪ್ರಜೆಗಳಿಂದಲೇ ಒಂದು ಅರ್ಜಿಯನ್ನು ತಯಾರಿಸಿ, ಬ್ರಿಟಿಷ್ ಅಧಿಕಾರಿ ಲೇ. ಕ. ಫ್ರೇಸರನು ಬಹಿರಂಗ ಸಭೆಯಲ್ಲಿ ಮನವಿಯನ್ನು ಸ್ವೀಕರಿಸುವಂತೆ ಮಾಡಿ ಬ್ರಿಟಿಷ್ ಸರಕಾರದ ಆಡಳಿತವನ್ನು ಜಾರಿಗೆ ತರಲಾಗುತ್ತದೆ. ತದನಂತರ ನಾಲ್ಕು ನಾಡು ಅರಮನೆಯಿಂದ ಚಿಕ್ಕವೀರರಾಜೇಂದ್ರರನ್ನು ಕರೆಯಿಸಿ ಅವರ ಪರಿವಾರ ಸಮೇತ ಇಲ್ಲಿಂದ ದಿನಾಂಕ 24-4-1834 ರಂದು ಕ್ಯಾಪ್ಟನ್ ಕಾರ್ಪೆಂಟ್‌ನ ಮೇಲ್ವಿಚಾರಣೆಯಲ್ಲಿ ರಾಜಬಂಧಿಯಾಗಿ ಬೆಂಗಳೂರಿಗೆ ನಂತರ, ಅಲ್ಲಿಂದ ನೆಲ್ಲೂರಿಗೆ ಕಳುಹಿಸುತ್ತಾರೆ. ಹಾಲೇರಿ ಮನೆತನದ ಲಿಂಗಾಯಿತರು ಕೊಡಗಿಗೆ ಬರುವ ಮುನ್ನ ಕೊಡಗನ್ನು ತುಂಡು ಪಾಳಯಗಾರರಾದ ತಾವ್‌ನಾಡ್‌ನ ಕರ್ಣೆಂಬಾಹು ಪ್ರಬಲ ನಾಯಕರಾಗಿದ್ದು ಉಳಿದ ಇಬ್ಬರು ಕಿಗ್ಗಟ್‌ನಾಡಿನ ಅಚ್ಚುನಾಯಕ ಮತ್ತು ಬೆಪ್ಪುನಾಡಿನ ಉತ್ತನಾಯಕರಿಂದ ಆಳಲ್ಪಡುತ್ತಿತ್ತೆಂದು ತಿಳಿದುಬರುತ್ತದೆ.

ಸಂಗ್ರಾಮಕ್ಕೆ ನಾಂದಿ ಮತ್ತು ಸ್ವರೂಪ :

ಕೊಡಗು ಸಂಸ್ಥಾನವನ್ನು ಇಬ್ಭಾಗ ಮಾಡಿ ಕೆಳಗಿನ ಕೊಡಗು ಮತ್ತು ಮೇಲಣ ಕೊಡಗು ಎಂಬುದಾಗಿ ಪರಿವರ್ತಿಸಿ, ನಂತರ ಕೆಳಗಿನ ಕೊಡಗಿನ ಪ್ರಜೆಗಳಿಂದ ಭತ್ತ ರೂಪದಲ್ಲಿ ಸಂದಾಯವಾಗುತ್ತಿದ್ದ ಕಂದಾಯವನ್ನು ಮದ್ರಾಸು ಸರ್ಕಾರದ ಆಜ್ಞೆಯಂತೆ ಕಂದಾಯವನ್ನು ನಗದುರೂಪದಲ್ಲಿ ಪಾವತಿಸಲು ಆದೇಶಿಸುವ ಹಿನ್ನಲೆಯಲ್ಲಿ ಪ್ರಜೆಗಳು ಇಕ್ಕಟ್ಟಿಗೆ ಸಿಕ್ಕಿದ ಕಾರಣ, ಅಸಮಧಾನಗೊಂಡು ಬ್ರಿಟಿಷರ ವಿರುದ್ಧ ದಂಗೆಯೇಳುವ ಅಭಿಪ್ರಾಯ ಪಡುತ್ತಾರೆ. ಇದರೊಂದಿಗೆ ರಾಜ ಚಿಕ್ಕವೀರ ರಾಜೇಂದ್ರ ಒಡೆಯನ ಚಿಕ್ಕಪ್ಪ ಅಪ್ಪಾಜಿರಾಜನ ಮಕ್ಕಳೆಂದು ಹೇಳಿಕೊಂಡು "ಸ್ವಾಮಿ ಅಪರಂಪರ" ಮತ್ತು "ಕಲ್ಯಾಣ ಸ್ವಾಮಿ" ಎಂಬ ಇಬ್ಬರು ಸನ್ಯಾಸಿಗಳು ಕೊಡಗಿನ ರಾಜ್ಯದ ಹಕ್ಕಿಗಾಗಿ ಕಾರ್ಯವೆಸಗುತ್ತಿರುವುದು ಬ್ರಿಟಿಷ್ ಆಡಳಿತಾಧಿಕಾರಿಯ ಗಮನಕ್ಕೆ ಬಂದು ಅವರನ್ನು ಬಂಧಿಸಿ ಜೈಲಿನಲ್ಲಿಡುತ್ತಾರೆ. ಈ ವಿಚಾರವು ಸುಳ್ಯ ಸೀಮೆಯ ಜನರಿಗೆ ತಿಳಿದಿರುವುದಿಲ್ಲ. ಇಂತಹ ಸಂದಿಗ್ಧ ಸಮಯದಲ್ಲಿ ಸುಳ್ಯದಲ್ಲಿ ಮತ್ತು ಕೊಡಗಿನಲ್ಲಿ ಜಮೀನು ಹೊಂದಿದ್ದ ಗೌಡ ಜನಾಂಗದ ಕೆದಂಬಾಡಿ ರಾಮಪ್ಪ ಗೌಡನೆಂಬ ಪ್ರಮುಖನು ಬ್ರಿಟಿಷರ ವಿರುದ್ಧ ದಂಗೆ ಏಳುವ ಅಭಿಪ್ರಾಯ ಪಟ್ಟು, ಸುಳ್ಯದಲ್ಲಿ ಹಿಂದೆ ಆಡಳಿತಾಧಿಕಾರಿಯಾಗಿದ್ದ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡ, ಸುಳ್ಯದ ಅಡ್ಕಾರ್ ಅಣ್ಣಯ್ಯ ಗೌಡ, ಕುರುಂಜಿ ಸುಬ್ಬಯ್ಯ ಗೌಡ, ಕೂಜುಗೋಡು ಅಪ್ಪಯ್ಯಗೌಡ, ಮಲ್ಲಪ್ಪ ಗೌಡ, ಕುಕ್ಕನೂರು ಚೆನ್ನಯ್ಯ ಗೌಡ, ಶಾಂತಳ್ಳಿ ಮಲ್ಲಯ್ಯಗೌಡ, ಮಂಡೀರ ಉತ್ತಯ್ಯ, ಚೆಟ್ಟಿಕುಡಿಯ, ಕುರ್ತಕುಡಿಯ ಮುಂತಾದವರನ್ನು ಸೇರಿಸಿ ಗುಪ್ತ ಸಭೆ ನಡೆಸಿ ದಂಗೆಯ ಜವಾಬ್ದಾರಿಕೆಯನ್ನು ವಹಿಸಿಕೊಳ್ಳುತ್ತಾನೆ. ಮುಂದೆ ಹುಲಿಕೊಂದ ನಂಜಯ್ಯನೆಂಬವನೊಡನೆ ಶನಿವಾರಸಂತೆಯ ಹೆಮ್ಮಾಗಿ ಗ್ರಾಮದಲ್ಲಿ ಕಲ್ಯಾಣ ಸ್ವಾಮಿಗೆ ಹೋಲುವ ವ್ಯಕ್ತಿ ಪುಟ್ಟ ಬಸಪ್ಪ ಯಾನೆ ಮರಿಬಸವಯ್ಯ ಎಂಬವನನ್ನು ಕಂಡು, ರಾಜಮನೆತನದ ಗೌರವ ಉಳಿಸುವ ಸಲುವಾಗಿ ಕಲ್ಯಾಣ ಸ್ವಾಮಿಯಾಗಿ ನಟಿಸುವಂತೆ ಅಭ್ಯಾಸ ನಡೆಸಲಾಗುತ್ತದೆ.

ಮುಂದೆ 1837ರ ಮಾರ್ಚ್ 5 ರಂದು ಕೊಡಗಿನಲ್ಲಿ ದಂಗೆ ಏಳುವುದೆಂದು ಹಾಗೂ ಏಪ್ರಿಲ್ 6 ರ ಯುಗಾದಿಯಂದು ಅಮರ ಸುಳ್ಯದಲ್ಲಿ ಕೊಡಗಿನ ಸಿಂಹಾಸನಕ್ಕೆ ಹಕ್ಕು ಬಹಿರಂಗಗೊಳಿಸುವ

ವಿಚಾರದಲ್ಲಿ ದಂಗೆ ಏಳಲು ಅಭಿಪ್ರಾಯ ಪಡುತ್ತಾರೆ. ಆದರೆ ಕೊಡಗಿನಲ್ಲಿ ಪ್ರಧಾನ ದಿವಾನರು ಬ್ರಿಟಿಷರ ಪರವಾದುದರಿಂದ ಮತ್ತು ತನ್ನ ಆಪ್ತಬಂಧುಗಳ ಮನೆಗೆ ಖುದ್ದಾಗಿ ಭೇಟಿಕೊಟ್ಟು, ಕೊಡಗಿನಲ್ಲಿ ದಂಗೆ ಏಳದಂತೆ ಮಾಡುತ್ತಾರೆ. ಇದನ್ನು ಅರಿತ ಗುಡ್ಡೆಮನೆ ಅಪ್ಪಯ್ಯಗೌಡ, ಕುಕ್ಕನೂರು ಚೆನ್ನಯ್ಯ ಗೌಡ, ಸಿರಕಜೆ ಮಲ್ಲಯ್ಯಗೌಡ, ಕೆದಂಬಾಡಿ ರಾಮಗೌಡ ಮುಂತಾದ ಮೇಲಿನ ಕೊಡಗಿನ ನಿವಾಸಿಗಳು, ಮಂಡೀರ ಉತ್ತಯ್ಯ, ಚೆಟ್ಟಿಕುಡಿಯ, ಕುರ್ತಕುಡಿಯ ಹಾಗೂ ಕೆಳಗಿನ ಕೊಡಗಿನ ಕೂಜುಗೋಡು ಅಪ್ಪಯ್ಯಗೌಡ, ಅಡ್ಕಾರು ಅಣ್ಣೇಗೌಡ, ಗುಡ್ಡೆಮನೆ ತಮ್ಮಯ್ಯ ಗೌಡ, ಬ್ರಾಹ್ಮಣರ ಸುಭೇದಾರ ಕೃಷ್ಣಯ್ಯ, ಕರಣಿಕೆ ಸುಬ್ಬಯ್ಯ, ವೀರಣ್ಣ ಬಂಟ ಮುಂತಾದವರೆಲ್ಲರೂ ಸೇರಿ ಸುಳ್ಯದಲ್ಲಿ ಬ್ರಿಟಿಷರ ವಿರುದ್ಧ ಹೋರಾಡುವ ನಿರ್ಧಾರವನ್ನು ಕೈಗೊಳ್ಳುತ್ತಾರೆ. ಈ ಬ್ರಿಟಿಷರ ವಿರುದ್ಧ ಹೋರಾಡಿ ಪ್ರಾಣಾರ್ಪಣೆಗೆ ಬದ್ಧರಾದ ವೀರಪುತ್ರರು ಹಿಂದಿನ ನಿರ್ಧಾರವನ್ನು ಬದಲಾಯಿಸಿ ಏಪ್ರಿಲ್ 6 ಕ್ಕೆ ಒಂದು ವಾರ ಮುಂಚಿತವಾಗಿಯೇ ಮದುವೆ ರೂಪದಲ್ಲಿ ಸಭೆ ಏರ್ಪಡಿಸಿ ಪ್ರಥಮವಾಗಿ ಸುಳ್ಯದಲ್ಲಿ ಬ್ರಿಟಿಷರ ಪರಮ ಭಕ್ತನಾಗಿದ್ದ ಅಟ್ಲೂರು ರಾಮಪ್ಪಯ್ಯನನ್ನು ಬಲಿತೆಗೆದುಕೊಳ್ಳುತ್ತಾರೆ. ಈ ವೀರಯೋಧ ಗೌಡ ಗಂಡಾಳುಗಳ ಸೈನ್ಯ, ಪಂಜ, ಬೆಳ್ಳಾರೆ ಕೋಟೆಗಳನ್ನು ಗೆದ್ದು, ಪುತ್ತೂರನ್ನು ವಶಪಡಿಸಿ ಕೊಂಡು, ಮಂಗಳೂರಿಗೆ 5-4-1837 ರಂದು ಪ್ರವೇಶಿಸಿ ಅಲ್ಲಿನ ಬ್ರಿಟಿಷ್ ಅಧಿಕಾರಿಗಳನ್ನು ಸದೆಬಡಿದು ಅಲ್ಲಿನ ಖಜಾನೆಯನ್ನು ದಂಡಿನ ಕ್ಷೇತ್ರಕ್ಕೆ (ಕಂಟೋನ್ಮೆಂಟ್) ಸಾಗಿಸುತ್ತಾರೆ. ಧ್ವಜ ಸ್ಥಂಭದ ಮೇಲೆ ಕಷ್ಟಕ್ಕೆ ಸಿಕ್ಕಿದ್ದೇವೆ ಎಂದು ಸೂಚಿಸುವ ಬ್ರಿಟಿಷರ ಬಾವುಟವು ಹಾರಾಡುತ್ತದೆ! ಕೊಡಗಿನ ರಾಜರ ಸ್ವಾತಂತ್ರ್ಯವೀರ ಯೋಧರ ಸಾಹಸದ ಪ್ರತೀಕವಾದ ಹಾಲೇರಿ ವಂಶದ ಧ್ವಜವು ಮಂಗಳೂರಿನಲ್ಲಿ ರಾರಾಜಿಸುತ್ತದೆ. 13 ದಿನಗಳ ಕಾಲ ರಾಜ್ಯಭಾರ ಮಾಡುತ್ತಾರೆ. ಇದನ್ನರಿತ ಬಲಿಷ್ಠ ಬ್ರಿಟಿಷರು ಮುಂಬಯಿ, ಕಲ್ಲಿಕೋಟೆ, ಬೆಳಗಾಂ ಕಡೆಗಳಿಂದ ಸೈನ್ಯ ತರಿಸುತ್ತಾರೆ.

ಇತ್ತ ಕೊಡಗಿನ ಬಲಮುರಿ ಗ್ರಾಮದ ಸುಬೇದಾರ ಗುಡ್ಡೆಮನೆ ಅಪ್ಪಯ್ಯಗೌಡರ ನಾಯಕತ್ವದಲ್ಲಿ ಕೊಡಗನ್ನು ಹಿಡಿಯುವ ಅಭಿಪ್ರಾಯಕ್ಕೆ 1500 ಮಂದಿ ಸೈನ್ಯ, ಕೂಡಿ ಏಪ್ರಿಲ್ 5 ರಂದು ಹೋಗಿರುತ್ತಾರೆ. ಆದರೆ ಬ್ರಿಟಿಷರ ಸೂಚನೆಯಂತೆ ಭಕ್ತರಾದ ದಿವಾನನವರ ಸೈನ್ಯ ಸಂಪಾಜೆ ಮಾರ್ಗವಾಗಿ ಅಮರಸುಳ್ಯ ತಲಪುತ್ತದೆ. ಬ್ರಿಟಿಷರ ಬಲಿಷ್ಠ ಸೈನ್ಯದ ಮುಂದೆ ರಾಷ್ಟ್ರಪ್ರೇಮಿಗಳ ಕೆಚ್ಚೆದೆಯ ಹೋರಾಟ ನಡೆದರೂ ದಿವಾನರ ಒಳಸಂಚು ಹಾಗೂ ಕುತಂತ್ರದಿಂದ ಮಹಾದಂಡನಾಯಕರಾಗಿದ್ದ ಅಪ್ಪಯ್ಯಗೌಡರು ಸೋಲನ್ನು ಅನುಭವಿಸಬೇಕಾಗುತ್ತದೆ. ಅಪ್ಪಯ್ಯಗೌಡರ ಏರ್ಪಾಡಿನಂತೆ ತಾವು ನಾಡಿನ ಕಡೆಯುವರು ಮಡಿಕೇರಿಯ ದಕ್ಷಿಣದ ಕಡೆಯಿಂದಲೂ, ಅಮರ ಸುಳ್ಯದ ಜನರು ಪಶ್ಚಿಮದ ಕಡೆಯಿಂದಲೂ ಮತ್ತು ಸ್ವತಃ ಅಪ್ಪಯ್ಯ ಗೌಡರು ಉತ್ತರ ದಿಕ್ಕಿನಿಂದಲೂ ಮುತ್ತಿಗೆ ಹಾಕುವ ಯೋಜನೆಯಂತೆ, ಮಡಿಕೇರಿಯಿಂದ ನಾಲ್ಕು ಮೈಲಿ ದೂರದಲ್ಲಿ ಸೋಮವಾರಪೇಟೆ ದಾರಿಯಲ್ಲಿ ಬಿಸ್ಲೆಘಾಟ್ ಬಳಿ ತಮ್ಮ ಪಾಳಯವನ್ನು ಬೀಡು ಬಿಟ್ಟಿದ್ದರು. ಮಡಿಕೇರಿಯನ್ನು ಮುತ್ತಲು ಬರುತ್ತಿರುವುದನ್ನು ದಿವಾನರ ಮೂಲಕ ತಿಳಿದ ಮಡಿಕೇರಿ ಯಲ್ಲಿದ್ದ ಬ್ರಿಟಿಷ್ ಅಧಿಕಾರಿ ಕ್ಯಾಪ್ಟನ್ ಲೀಹಾರ್ಡಿ ಗಾಬರಿಗೊಂಡು ಪಾಂಡವಪುರದಿಂದ ಇಂಗ್ಲೀಷರ 19 ನೇ ರೆಜಿಮೆಂಟನ್ನು ತರಿಸಿ ನಡೆಯುವ ಯುದ್ಧದಲ್ಲಿ ಬ್ರಿಟಿಷರಿಗೆ ಜಯವಾಗುತ್ತದೆ.

ಬಲಿಷ್ಠ ಬ್ರಿಟಿಷರೊಂದಿಗೆ ಸೋತ ವೀರಯೋಧರು ಶರಣಾಗಿ ದಸ್ತಗಿರಿಯಾಗುತ್ತಾರೆ. ಆದರೆ ಅಪ್ಪಯ್ಯಗೌಡರು ಈ ಅವಮಾನವನ್ನು ಸಹಿಸಲಾಗದೆ ಸುಬ್ರಮಣ್ಯದವರೆಗೂ ಕಾಲುನಡಿಗೆಯಲ್ಲಿ ತಲುಪಿ ತಪ್ಪಿಸಿಕೊಳ್ಳುವ ಪ್ರಯತ್ನಪಟ್ಟರೂ, ಕೊನೆಗೆ ಶರಣಾಗುವುದೇ ಶೂರತನವೆಂದು ಭಾವಿಸಿ, ವಾಪಸ್ಸು ಬಲಮುರಿಗೆ ಬಂದು ತನ್ನ ಪತ್ನಿ ಮತ್ತು ಒಬ್ಬಳೇ ಮಗಳನ್ನು ಕೊನೆ ಬಾರಿ ಮಾತನಾಡಿಸಿ ತನ್ನ ಸಂಸಾರವನ್ನು, ಮೈದುನ ಪೊನ್ನಪ್ಪನಿಗೆ ವಹಿಸಿ ಮಡಿಕೇರಿಗೆ ಬಂದು ಶರಣಾಗುತ್ತಾರೆ.

ಇತ್ತ ಕ್ಯಾಪ್ಟನ್ ಲೀಹಾರ್ಡಿಯು ಕಾನೂನುರೀತ್ಯಾ ವಿಚಾರಣೆ ನಡೆಸಿ ಒಟ್ಟು 13 ಮಂದಿ ಬಂಡಾಯಗಾರರಿಗೆ ಜೀವಾವಧಿ ಶಿಕ್ಷೆ ಗಲ್ಲುಶಿಕ್ಷೆ ಮತ್ತು ಗಡೀಪಾರು ಹಾಗೂ ಮರಣದಂಡನೆಯನ್ನು ವಿಧಿಸುತ್ತಾನೆ. ಇದರಲ್ಲಿ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರಿಗೆ ಅಮರಸುಳ್ಯದಲ್ಲೂ, ಕೊಡಗಿನಲ್ಲೂ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದುದಕ್ಕೆ ಶಿಕ್ಷೆಯಾಗಿ ಅವರನ್ನು ಬಹಿರಂಗವಾಗಿ ತೂಗು ಹಾಕುವುದೆಂದು ತೀರ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕ್ಯಾಪ್ಟನ್ ಲೀಹಾರ್ಡಿಯು ಬಲಮುರಿಗೆ ಒಬ್ಬ ರಾಜದೂತನನ್ನು ಕಳುಹಿಸಿ ಅಪ್ಪಯ್ಯಗೌಡರ ಪತ್ನಿಯನ್ನು ಕೊಡಗಿನ ಉಡುಪಾದ ದಟ್ಟಿ ಕುಪ್ಪಸವನ್ನು ತನ್ನ ಪತಿಗೆ, ಮತ್ತು ತಾನು ಧಾರೆ ಸೀರೆ ಉಟ್ಟು ದಿನಾಂಕ 31-10-1837 ರಂದು ಬೆಳಿಗ್ಗೆ 10 ಗಂಟೆಗೆ ಬರ ಬೇಕೆಂದು ಆಜ್ಞಾಪಿಸುವನು. ಅಲ್ಲದೆ ಊರು ಪಟೇಲರನ್ನೂ ನಾಡ ಗೌಡರನ್ನೂ ಮತ್ತು ರೈತರನ್ನು ತಮ್ಮಲ್ಲಿಗೆ ಆಯುಧಗಳೊಂದಿಗೆ ಆ ದಿನ ಶರಣಾಗಬೇಕೆಂದು ಆದೇಶ ನೀಡುವನು. ಅದೇ ಪ್ರಕಾರ ಎಲ್ಲರೂ ನೋಡು ನೋಡುತ್ತಿದ್ದಂತೆ, ಅಪ್ಪಯ್ಯಗೌಡರನ್ನು ನೇಣುಗಂಬಕ್ಕೆ ಹತ್ತಿಸಿ ಮಡಿಕೇರಿಯ ಕೋಟೆ ಮುಂಭಾಗದಲ್ಲಿ (ಈಗಿನ ಜಿಲ್ಲಾಧಿಕಾರಿಯವರ ಕಛೇರಿ) ತೂಗುಹಾಕಲಾಯಿತು. ಈ ಭಯಂಕರ ದೃಶ್ಯವು ನೆರೆದಿದ್ದ ಜನರಲ್ಲಿ ತಲ್ಲಣ ಮೂಡಿಸಿ ಇನ್ನು ಮುಂದೆ ಯಾರೊಬ್ಬರೂ ಬ್ರಿಟಿಷರ ವಿರುದ್ಧ ದಂಗೆ ಏಳದಂತೆ ಎಲ್ಲರೂ ತಿಳಿದುಕೊಳ್ಳುವಂತೆ ಮಾಡಿತು. ಈ ರೀತಿಯಲ್ಲಿ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರು ಬ್ರಿಟಿಷರ ವಿರುದ್ಧ ಹೋರಾಡಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಬಲಿದಾನಗೈದು, ವೀರ ಮರಣವನ್ನಪ್ಪಿದ ರಾಷ್ಟ್ರ ವ್ಯಕ್ತಿಯಾಗಿ, ವೀರ ಯೋಧರಾಗಿ, ತ್ಯಾಗಿಯಾಗಿ ಹುತಾತ್ಮರಾಗಿದ್ದಾರೆ.

ಈ ಮಹಾನ್ ಯೋಧನಿಗೆ ಇಂದಿಗೆ 165 ವರ್ಷ ಗತಿಸಿದರೂ ಮನ್ನಣೆ ದೊರೆಯದಿರುವುದು ಒಂದು ದುರಂತ ! ಇಂದಿನ ಮಹಾನ್ ದಿನಗಳ ಸಂದರ್ಭದಲ್ಲಿ ನಾವು ನೀವೆಲ್ಲರೂ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸುವುದರೊಂದಿಗೆ, ಮುಂದೆ ಶಾಶ್ವತವಾಗಿ ಇವರ ಮತ್ತು ಇತರ 12 ಮಂದಿ ವೀರ ಯೋಧರ ಸ್ಮರಣೆಗಾಗಿ, ಸ್ಮಾರಕ ನಿರ್ಮಾಣ ಕಾರ್ಯವನ್ನು ಮತ್ತು ದಿನಾಚರಣೆಯನ್ನು ಸರಕಾರವೇ ನಡೆಸುವಂತಾಗಬೇಕೆಂದು ಇಂದಿನ ದಿನದ ಮುಖ್ಯ ಉದ್ದೇಶವಾಗಿದೆ.

ಬ್ರಿಟಿಷ್ ಪ್ರಶಂಸೆ :

ಈ ಸ್ವಾತಂತ್ರ್ಯ ಹೋರಾಟದ ಕಾರಣಗಳನ್ನು ಕುರಿತು ವಿಚಾರಣೆ ಮಾಡಲು ಭಾರತ ಸರಕಾರದವರು ನೇಮಿಸಿದ ಬ್ರಿಟಿಷ್

ಕಮೀಷನರ್ ಕಾಟನ್ ರಿಪೋರ್ಟ್, ರಿಕ್ಬರ್‌ರಿಪೋರ್ಟ್‌ಗಳು, ಈ ಹೋರಾಟವು ನಿಜವಾದ ಜನತಾ ಬಂಡಾಯವೆಂದೂ, ಬ್ರಿಟಿಷ್ ಪ್ರಭುತ್ವವನ್ನು ಧ್ವಂಸ ಮಾಡುವುದೇ ಅವರ ಗುರಿಯಾಗಿತ್ತೆಂದು ತಿಳಿಸಿದ್ದನ್ನು ಇಲ್ಲಿ ಸ್ಮರಿಸಲಾಗಿದೆ.

ಈವರೆಗೆ ಸಂದ ಗೌರವ :

1985 ರಲ್ಲಿ ಪುರಸಭೆ ವತಿಯಿಂದ ಮಡಿಕೇರಿ ಜೂನಿಯರ್ ಕಾಲೇಜ್ ಮುಂಬಾಗದಿಂದ ಮೇಲಿನ ಗೌಡ ಸಮಾಜದವರೆಗಿನ ರಸ್ತೆಗೆ 'ಸ್ವಾತಂತ್ರ್ಯಯೋಧ ಸುಭೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ' ಎಂಬುದಾಗಿ ನಾಮಕರಣ.

ಸರಕಾರದ ಮುಂದೆ ಬೇಡಿಕೆಗಳು

1. ಈಗಾಗಲೇ ನಾಮಕರಣಗೊಂಡ ರಸ್ತೆಯ ನಾಮಫಲಕವನ್ನು ಅಮೃತ ಶಿಲೆಯಲ್ಲಿ ಬರೆಯಿಸುವುದು.
2. ದಿನಾಂಕ 31-10-1837 ರ ದಿನವನ್ನು "ಹುತಾತ್ಮರ ದಿನಾಚರಣೆ"ಯಾಗಿ ಸರಕಾರ ಮುಂದೆ ನಿಂತು ಆಚರಿಸುವುದು.
3. ಹುತಾತ್ಮರಾದ ಸುಭೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಮತ್ತು ಇತರ 12 ಮಂದಿಗೆ ಸ್ಮಾರಕ ನಿರ್ಮಾಣ-ಮಡಿಕೇರಿ ಕೋಟೆ ಮುಂಭಾಗದಲ್ಲಿ ಹಾಗೂ 'ವೀರ ವನ' ನಿರ್ಮಾಣ ಮಾಡುವುದು.
4. ಕ್ರಾಂತಿವೀರ ಸುಭೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರಿಗೆ "ಮರಣೋತ್ತರ ರಾಷ್ಟ್ರ ಪ್ರಶಸ್ತಿ" ನೀಡಲು ಶಿಫಾರಸ್ಸು ಮಾಡುವುದು.
5. ಕೇಂದ್ರ ಸರ್ಕಾರದಿಂದ ಸ್ವಾತಂತ್ರ್ಯ ಹೋರಾಟಗಾರರಿಗೆ ದೊರಕುವ ಅನುದಾನವನ್ನು ಒದಗಿಸಲು ಶಿಫಾರಸ್ಸು ಮಾಡುವುದು.
6. ಕೊಡಗಿನ ಪ್ರಜೆಗಳು ತೋರುವ ಧೈರ್ಯ ಸಾಹಸಕ್ಕೆ ಪ್ರತಿವರ್ಷ "ಶೌರ್ಯ ಪ್ರಶಸ್ತಿ" ಪುರಸ್ಕಾರ ನೀಡುವುದು.
7. ಇತರ 12 ಮಂದಿ ಶಿಕ್ಷೆಗೊಳಗಾದವರಲ್ಲಿ ಸದ್ರಿಯವರುಗಳ ಜನ್ಮಸ್ಥಳಗಳಲ್ಲಿ ಸ್ಮಾರಕವನ್ನು ನಿರ್ಮಾಣ ಮಾಡುವುದು.
8. ಈ ಹೋರಾಟದಲ್ಲಿ ಭಾಗವಹಿಸಿ ಮಂಗಳೂರಿನ ಬಿಕ್ರನಕಟ್ಟೆಯಲ್ಲಿ ಗಲ್ಲು ಶಿಕ್ಷೆಗೊಳಗಾದ ಶ್ರೀ ಪುಟ್ಟಬಸಪ್ಪ, ಹೆಮ್ಮಾನಿ ಗ್ರಾಮ, ಶನಿವಾರಸಂತೆ, ಇವರಿಗೆ ಜನ್ಮ ಸ್ಥಳದಲ್ಲಿ ಸ್ಮಾರಕ ನಿರ್ಮಾಣ ಮಾಡುವುದು.

ಸುಭೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ ನಿರ್ಮಾಣದ ಹಿಂದಿನ ಪ್ರಾಮಾಣಿಕ ಪ್ರಯತ್ನದ ವಿವರ:


1. 1970ರ ದಶಕದಲ್ಲಿ 'ಶಕ್ತಿ' ದಿನಪತ್ರಿಕೆಯಲ್ಲಿ 'ಕೊಡಗಿನ ಇತಿಹಾಸ' ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಂಡ ಲೇಖನಗಳು. *- ಲೇಖಕ ದಿ|| ಡಿ.ಎನ್. ಕೃಷ್ಣಯ್ಯ*
2. 1975ರಲ್ಲಿ 'ಶಕ್ತಿ'ದಿನಪತ್ರಿಕೆಯಲ್ಲಿ 'ಇತಿಹಾಸದ ಮೇಲೆ ಹೊಸಬೆಳಕು'ಶೀರ್ಷಿಕೆಯಲ್ಲಿ ಪ್ರಕಟಗೊಂಡ ಲೇಖನಗಳು *-ಲೇಖಕ ಕೊ.ಕಾ. ವೇಣುಗೋಪಾಲ*
3. 1979ರಲ್ಲಿ ದಿನಾಂಕ 31-10-1979 ರಂದು ಪುರಭವನದಲ್ಲಿ ನಡೆದ ಶ್ರದ್ಧಾಂಜಲಿ ಸಮಾರಂಭ, ಮುಖ್ಯ ಅತಿಥಿ ಶ್ರೀ ಎಂ. ಸಿ. ನಾಣಯ್ಯ, ಅಧ್ಯಕ್ಷತೆ ದಿ|| ಬಿ.ಡಿ. ಗಣಪತಿ, ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ ಸಮಿತಿಯಿಂದ ಕಾರ್ಯಕ್ರಮ.
4. 1980-83ರ ದಶಕದಲ್ಲಿ ಪ್ರಕಟಗೊಂಡ 'ಶಕ್ತಿ' ದಿನ ಪತ್ರಿಕೆಯಲ್ಲಿನ ಲೇಖನಗಳು. -ದಿ|| ಕೊ.ಸ. ಕಾರ್ಯಪ್ಪ
5. 1984ರಲ್ಲಿ ಚೌಕಿ ವೃತ್ತಕ್ಕೆ ನಾಮಕರಣಕ್ಕೆ ಒತ್ತಾಯ. -ಸ್ಮಾರಕ ಸಮಿತಿ.
6. 1983ರಲ್ಲಿ ರಾಜ್ಯದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಬರೆದ ಪತ್ರ. *-ದಿ|| ಕೊ. ಸಾ. ಕಾರ್ಯಪ್ಪ.*
7. 1985ರಲ್ಲಿ, ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ, ಅರಣ್ಯಖಾತೆ ಸಚಿವ ಶ್ರೀ ಜೀವಿಜಯ, ಸ್ಮಾರಕ ಸಮಿತಿ ಸಂಚಾಲಕ ಶ್ರೀ ಟಿ.ಕೆ. ಚಂಗಪ್ಪ, ಶಾಸಕರು ಶ್ರೀ ಡಿ. ಎ. ಚಿಣ್ಣಪ್ಪ, ಕೌನ್ಸಿಲರ್ ಶ್ರೀ ಎಂ. ಸಿ. ವಾಸುದೇವ, ಅಧ್ಯಕ್ಷರು ಶ್ರೀ ಕೆ. ಎಸ್. ದೇವಯ್ಯ *- ಇವರುಗಳಿಗೆ ಕುಟುಂಬಸ್ತರ ಮನವಿ.*
8. 1985 ರಲ್ಲಿ ಜೂನಿಯರ್ ಕಾಲೇಜ್ ರಸ್ತೆಗೆ ನಾಮಕರಣ *-ಪುರಸಭೆ ವತಿಯಿಂದ*
9. 1996ರಲ್ಲಿ ಡಾ||ಮಳಲಿ ವಸಂತಕುಮಾರರವರಿಗೆ ಕೊ.ಸಾ.ಕಾರ್ಯಪ್ಪನವರು ಬರೆದ ಸುದೀರ್ಘ ಪತ್ರ.
10. 1996 ರಲ್ಲಿ ಚೆಟ್ಟಿಮಾನಿಯಲ್ಲಿ ನಡೆದ ಸಭೆ. -ಸಂಚಾಲಕ ದಿ|| ಕೋಡಿ ಮೇದಪ್ಪ
11. 1997ರಲ್ಲಿ ಡಿ.ವೈಎಫ್.ಐ. ವತಿಯಿಂದ ಪ್ರತಿಜ್ಞಾ ಸ್ವೀಕಾರ.
12. 1997ರಲ್ಲಿ ಬಲಮುರಿ ಗುಡ್ಡೆರ ಕುಟುಂಬದಲ್ಲಿ ನಡೆದ ಸಭೆಗಳು-ಸಂಸ್ಮರಣಾ ಸಮಿತಿ ರಚನೆ - ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಕೆ.
13. 1997 ರಿಂದ ಈಚೆಗೆ ಹುತಾತ್ಮ ಸುಭೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ಸಂಸ್ಕರಣ ಸಮಿತಿ ವತಿಯಿಂದ ವರ್ಷಂಪ್ರತಿ ಶ್ರದ್ಧಾಂಜಲಿ ಸಭೆಗಳು.
14. 1999ರಲ್ಲಿ ಗೌಡ ಅಕಾಡೆಮಿ ವತಿಯಿಂದ 'ಗುಡ್ಡೆಮನೆ ಅಪ್ಪಯ್ಯಗೌಡ' ನಾಟಕ
15. 1999ರಲ್ಲಿ ಬ್ಲೂಸ್ಟಾರ್ ಕ್ಲಬ್ ವತಿಯಿಂದ 'ಹುತಾತ್ಮ ಗುಡ್ಡೆಮನೆ ಅಪ್ಪಯ್ಯಗೌಡ ಸ್ಮಾರಕ ಪುಟ್ ಬಾಲ್ ಟೂರ್ನಮೆಂಟ್'.
16. 1999ರಲ್ಲಿ ರೂರಲ್ ಹೌಸ್ ಬಿಲ್ಡಿಂಗ್ ಕೋಪರೇಟಿವ್ ಸೊಸೈಟಿ ವತಿಯಿಂದ ಬೆಂಗಳೂರು ಜಕ್ಕೂರು ಬಡಾವಣೆ ಮುಖ್ಯರಸ್ತೆಗೆ ನಾಮಕರಣ.
17. ಈಚಿನ ವರ್ಷಗಳಲ್ಲಿ ಜಿಲ್ಲೆಗೆ ಆಗಮಿಸಿದ ಶ್ರೀ ಧನಂಜಯ ಕುಮಾರ್, ಸಂಸದ ಶ್ರೀ ವೀರಪ್ಪ ಮೊಯ್ಲಿ, ಡಾ|| ಚಿದಾನಂದ ಮೂರ್ತಿ ಹಾಗೂ ಇತರ ಗಣ್ಯರುಗಳಿಗೆ ಪ್ರಜಾವೇದಿಕೆ, ಗೌಡ ಅಕಾಡೆಮಿ, ಸಂಸ್ಮರಣ ಸಮಿತಿಗಳಿಂದ ಮನವಿ ಸಲ್ಲಿಕೆ.
18. 2002ರಲ್ಲಿ 'ಕೊಡಗು ಸಂಗಾತಿ' ಪತ್ರಿಕೆಯ ಸಂಪಾದಕೀಯದಲ್ಲಿ ದಿನದ ಮಹತ್ವದ ಸಲುವಾಗಿ ಮನವಿ ಸಲ್ಲಿಕೆ.
19. 2002 ರಲ್ಲಿ ಜಿಲ್ಲಾಧಿಕಾರಿ ಕೊಡಗು, ಇವರ ಮುಖಾಂತರ ಸರ್ಕಾರಕ್ಕೆ ಪ್ರಸ್ತಾಪ.

14-11-2002 ರಲ್ಲಿ ಕೊಡಗು ಜಿಲ್ಲಾಧಿಕಾರಿ ಕಛೇರಿಯಿಂದ ನಿರ್ದೇಶಕರು, ಪ್ರಾಚ್ಯ ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ಇವರಿಗೆ ಕೋಟೆ ಆವರಣದಲ್ಲಿ ವೀರಗಲ್ಲು ಮತ್ತು ವೀರವನ ಸ್ಥಾಪಿಸಲು ಸೂಕ್ತ ಕ್ರಮ ಮತ್ತು ಅನುಮತಿ ಕೋರಿ ಶಿಫಾರಸ್ಸು ಪತ್ರ ರವಾನೆ. ನಕಲನ್ನು ಕೊಡಗು ಸಂಗಾತಿಗೆ ಕಳುಹಿಸಲಾಗಿದೆ ಮತ್ತು ಸಂಸ್ಕರಣ ಸಮಿತಿಗೆ ಕಳುಹಿಸಿದೆ.

-ಗುಡ್ಡೆಮನೆ ರಮೇಶ್, ಸಂಚಾಲಕರು, ಹುತಾತ್ಮ ಸುಭೇದಾರ್, ಗುಡ್ಡೆಮನೆ ಅಪ್ಪಯ್ಯ ಗೌಡ ಸಂಸ್ಕರಣಾ ಸಮಿತಿ.

ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆ ಮತ್ತು ಕನ್ನಡಿಗರ ಪ್ರಜಾನುಡಿ ಪತ್ರಿಕೆ

ವಾಸು
ಮಾಜಿ ಮೇಯರ್, ಮೈಸೂರು



ಉತ್ತಮ ಪ್ರಜೆ ಆಗಲು ಉತ್ತಮ ವಿದ್ಯೆ ಅಗತ್ಯ. ಅದರಲ್ಲೂ ತಾಂತ್ರಿಕ ಜ್ಞಾನದಲ್ಲಿ ದಾಪುಗಾಲು ಹಾಕುತ್ತಿರುವ ಇಂದಿನ ಜಗತ್ತಿನಲ್ಲಿ ಉತ್ತಮ ತಾಂತ್ರಿಕ ವಿದ್ಯಾಭ್ಯಾಸ ಅನಿವಾರ್ಯ ಎಂದು ಮನಗಂಡು, ಈ ಕ್ಷೇತ್ರದಲ್ಲಿ ಅತ್ಯುತ್ತಮ ವಾದ ವಿದ್ಯಾರ್ಜನೆ ಮಾಡಿ ತನ್ಮೂಲಕ ಉತ್ತಮ ಪ್ರಜೆಯ ನ್ನು ರೂಪಿಸುವ ಒಂದೇ ದೃಷ್ಟಿಯಿಂದ 1991 ರಲ್ಲಿ ಸ್ಥಾಪಿತ ಗೊಂಡದ್ದು ಈ ವಿದ್ಯಾ ವಿಕಾಸ್ ಶಿಕ್ಷಣ ಸಂಸ್ಥೆ. ಹೆಸರೇ ಸೂಚಿಸುವಂತೆ ಉತ್ತಮ ವಿದ್ಯೆಯ ವಿಕಾಸವೇ ಈ ಸಂಸ್ಥೆಯ ಶ್ರೇಷ್ಠ ಗುರಿ.

ಈ ವಿದ್ಯೆಯ ವಿಕಾಸ ಬರೇ ನಗರದ ವಿದ್ಯಾರ್ಥಿಗಳಿಗೆ ಮಾತ್ರ ಮೀಸಲಾಗಿರದೆ ಸುತ್ತ ಮುತ್ತಲಿನ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ, ಉತ್ತಮ ಮಟ್ಟದ ವಿದ್ಯೆಯಿಂದ ವಂಚಿಸಲ್ಪಟ್ಟ ಯುವಕರಿಗೂ ಈ ಸರ್ವೋತ್ತಮ ಸೌಲಭ್ಯವನ್ನು ದೊರಕಿಸಿ ಕೊಡಬೇಕೆನ್ನುವುದು ಸಂಸ್ಥೆಯ ಮತ್ತೊಂದು ಉದ್ದೇಶ.

ಈ ದಿಸೆಯಲ್ಲಿ ಸಣ್ಣದಾಗಿ ಒಂದು ಪಾಲಿಟೆಕ್ನಿಕ್ 1993 ರಲ್ಲಿ ಮೈಸೂರು ನಗರದಲ್ಲಿ ಪ್ರಾರಂಭಿಸಿ, ಸಿಕ್ಕ ಪ್ರೋತ್ಸಾಹ ಹಾಗೂ ಉತ್ತೇಜನದಿಂದ ಇವತ್ತು ಹಲವಾರು ವಿದ್ಯಾ ಸಂಸ್ಥೆಗಳ ಸ್ಥಾಪನೆಯ ಹೆಗ್ಗಳಿಕೆ ಈ ಸಂಸ್ಥೆಯದಾಗಿದೆ. ಅವುಗಳಲ್ಲಿ ಮುಖ್ಯವಾಗಿ,

ಅ) ವಿದ್ಯಾ ವಿಕಾಸ್ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ. ಆ) ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್. ಇ) ಹೋಟೇಲ್ ಮ್ಯಾನೇಜ್‌ಮೆಂಟ್ ಮತ್ತು ಕೇಟರಿಂಗ್ ಟೆಕ್ನಾಲಜಿ ಈ) ಪಾಲಿಟೆಕ್ನಿಕ್, ಮೈಸೂರು ಹಾಗೂ ಬೆಂಗಳೂರಿನಲ್ಲಿ- ಡಿಪ್ಲೋಮಾ ಜೊತೆಗೆ ಐ.ಟಿ.ಐ. ಹಾಗೂ ಜೆ.ಎಲ್.ಸಿ. ಕೋರ್ಸ್‌ಗಳು. ಉ) ಪದವಿ ಪೂರ್ವ ಕಾಲೇಜು ಮತ್ತು ಇತರ ಕಾಲೇಜುಗಳು, ಮೈಸೂರು ಹಾಗೂ ಮಂಡ್ಯದಲ್ಲಿ.

ಮೈಸೂರು- ಬನ್ನೂರು ರಸ್ತೆಯಲ್ಲಿರುವ 50 ಎಕರೆ ಭೂಮಿಯಲ್ಲಿ ಸುಂದರವಾಗಿ ರೂಪುಗೊಳ್ಳುತ್ತಿರುವ ಉದ್ಯಾನವನದ ನಡುವೆ ಸಂಸ್ಥೆಯ ಕೆಲವು ಕಾಲೇಜುಗಳು ಈಗಾಗಲೇ ಸ್ಥಾಪಿತಗೊಂಡಿದ್ದು ಇನ್ನೂ ಕೆಲವು ಕಾಲೇಜುಗಳು ನಗರದ ಮಧ್ಯದಲ್ಲಿ ಸ್ಥಾಪಿತಗೊಂಡಿವೆ.

ಮೇಲೆ ಹೇಳಿದಂತೆ ತನ್ನ ಕಾರ್ಯವ್ಯಾಪ್ತಿಯನ್ನು ಕೇವಲ ಮೈಸೂರಿಗೆ ಮೀಸಲಾಗಿಡದೆ ಈಗಾಗಲೇ ಮಂಡ್ಯದಲ್ಲಿ ಪದವಿಪೂರ್ವ ಕಾಲೇಜು - (2001 ರಿಂದ ಪ್ರಾರಂಭಿಸಲ್ಪಟ್ಟಿದ್ದು) ಇಲ್ಲಿ ಇನ್ನೂ ಹಲವು ವಿಜ್ಞಾನ ಹಾಗೂ ಕಲೆಗಳ ಕಾಲೇಜು ಪ್ರಾರಂಭಗೊಳ್ಳಲಿವೆ.

ತನ್ನ ದೀರ್ಘಾವಧಿ ಯೋಜನೆಯಲ್ಲಿ ಈ ಸಂಸ್ಥೆ ಚಾಮರಾಜನಗರ, ಕೆ.ಆರ್.ನಗರ, ಹುಣಸೂರು, ಪಿರಿಯಾಪಟ್ಟಣ, ಕುಶಾಲನಗರ, ಮಡಿಕೇರಿ, ಇನ್ನಿತರ ಊರುಗಳಲ್ಲಿ ಕಾಲೇಜುಗಳನ್ನು ತೆರೆಯಲು ಸಿದ್ಧತೆ ನಡೆಸುತ್ತಿದೆ.

ಈ ನಡುವೆ, ಈ ಸಂಸ್ಥೆ 2 ವರ್ಷಗಳಿಂದ ಪ್ರಸಾರದಲ್ಲಿರುವ ಮೈಸೂರು ನಗರದ ದೈನಂದಿನ ಪತ್ರಿಕೆ "**ಕನ್ನಡಿಗರ ಪ್ರಜಾನುಡಿ**"ಯ ಮಾಲೀಕತ್ವವನ್ನು ವಹಿಸಿ ಕೊಂಡಿದ್ದು, ಅದರ ಗುಣ ಮಟ್ಟವನ್ನು ಹೆಚ್ಚಿಸಲು ಅತ್ಯಾಧುನಿಕ ರೀತಿಯಲ್ಲಿ ಸಜ್ಜುಗೊಳಿಸಿರುವ ನೂತನ ಕಛೇರಿಗೆ ಈಗ ಸ್ಥಳಾಂತರಿಸಲಾಗಿದೆ. ಇದರೊಂದಿಗೆ ಹಿತೈಷಿಗಳು ಹಾಗೂ ಮಿತ್ರರ ಅನಿಸಿಕೆಯಂತೆ ನಗರದಲ್ಲಿ ಬರುವ ಫೆಬ್ರುವರಿ ತಿಂಗಳಿನಿಂದ ಒಂದು ಇಂಗ್ಲೀಷ್ ಪತ್ರಿಕೆಯನ್ನು ಸಹ ಹೊರಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅದಕ್ಕೆ 'ದಿ ಮೈಸೂರು ಮೇಲ್' ಎಂಬ ಹೆಸರಿಡಲಾಗಿದೆ.

ಸಂಸ್ಥೆಯ ಈ ಎಲ್ಲಾ ಪ್ರಗತಿಗೆ ಹಿತೈಷಿಗಳ ನಿರಂತರ ಆಶೀರ್ವಾದ, ಪ್ರೋತ್ಸಾಹವೆ ಕಾರಣವೆನ್ನುತ್ತಾರೆ ಶ್ರೀ ವಾಸುರವರು.

ಹಿತೈಷಿಗಳು ವೈಯಕ್ತಿಕವಾಗಿ ತೋರಿಸಿರುವ ಪ್ರೀತಿ, ವಿಶ್ವಾಸ ಹಾಗೂ ಅವರ ಬಗ್ಗೆ ಇರುವ ಅಚಲವಾದ ನಂಬಿಕೆ, ಅಪಾರ. ಅದು ಅಳತೆಗೆ ಮೀರಿದ್ದು, ಹಾಗಿಲ್ಲದಿದ್ದಲ್ಲಿ ಶ್ರೀಯುತರು ಮೈಸೂರು ನಗರ ಮಹಾಪೌರನಾಗಲಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಲಿ, ಅವಿರೋಧವಾಗಿ ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕಿನ ಅಧ್ಯಕ್ಷನಾಗಲೀ ಆಗಲು ಸಾಧ್ಯವಾಗುತ್ತಿದ್ದಿಲ್ಲವೆನ್ನುವ ಅಭಿಪ್ರಾಯ ಪಡುತ್ತಾರೆ.

ಈ ಎಲ್ಲ ಕ್ಷೇತ್ರದಲ್ಲೂ ಹಾಗೂ ಇನ್ನೂ ಹತ್ತು ಹಲವಾರು ಸಂಸ್ಥೆಗಳಲ್ಲಿ ಹಿತೈಷಿಗಳು ಕಲ್ಪಿಸಿಕೊಟ್ಟಿರುವ ಅವಕಾಶಗಳಿಂದ ಪ್ರೇರೇಪಿತರಾಗಿ ದುಡಿದಿದ್ದಾರೆ, ದುಡಿಯುತ್ತಿದ್ದಾರೆ ಎಂದರೆ ತಪ್ಪಾಗಲಾರದು.

ಸಮಾಜದಿಂದ ಪಡೆದುಕೊಂಡಿರುವ ಅಪಾರ ಸೌಲಭ್ಯವನ್ನು- ಅದು ರಾಜಕೀಯ ಕ್ಷೇತ್ರದಲ್ಲಾಗಲೀ, ಸಾಮಾಜಿಕ ಕ್ಷೇತ್ರದಲ್ಲಾಗಲೀ ಅಥವಾ ಸಹಕಾರ ಕ್ಷೇತ್ರದಲ್ಲಾಗಲೀ ಕಿಂಚಿತ್ತಾದರೂ ಕೃತಜ್ಞತಾ ಪೂರ್ವಕವಾಗಿ ಹಿಂತಿರುಗಿಸಲು ಹಿತೈಷಿಗಳು ಮಾಡಿಕೊಟ್ಟಿರುವ ಈ ಎಲ್ಲಾ ಅವಕಾಶಗಳನ್ನು ನಿರ್ವಂಚನೆಯಿಂದ ನಿರ್ವಹಿಸುತ್ತೇನೆಂಬ ಆಶ್ವಾಸನೆಯನ್ನು ನೀಡುತ್ತಾರವರು. ಇವರು ಹಮ್ಮಿಕೊಂಡಿರುವ ವಿವಿಧ ಕಾರ್ಯಚಟುವಟಿಕೆಗಳಿಗೆ ಹಿತೈಷಿಗಳ ನಿರಂತರ ಆಶೀರ್ವಾದ/ ಪ್ರೋತ್ಸಾಹ ಎಂದೆಂದಿಗೂ ಇರುತ್ತದೆ ಎಂದು ದೃಢವಾಗಿ ನಂಬಿದ್ದಾರೆ ಶ್ರೀ ವಾಸುರವರು.

-ಪಟ್ಟಡ ಪ್ರಭಾಕರ್, ಕೊಡಗು ಸಂಗಾತಿ.

ಪ್ರೇಮವೆಂದರೆ ತನ್ನಲ್ಲಿ ಇನ್ನೊಬ್ಬರನ್ನು, ಇನ್ನೊಬ್ಬರಲ್ಲಿ ತನ್ನನ್ನು ಕಾಣುವ ಪ್ರಯತ್ನ

ಗ್ರಾಮ ದರ್ಶನ - 2

ಗಾಳಿಬೀಡು

-ಲೇಖಕ : ಶಿವಳ್ಳಿ ಕೆಂಪೇಗೌಡ



ಕೊಡಗು ಜಿಲ್ಲಾ ಕೇಂದ್ರಸ್ಥಾನವಾದ ಮಡಿಕೇರಿಯಿಂದ ಪಶ್ಚಿಮಾಭಿಮುಖವಾಗಿ ಗಾಳಿಬೀಡು ಎಂಟು ಕಿ. ಮೀಟರ್ ದೂರದಲ್ಲಿದೆ. ಕೊಡಗು ಜಿಲ್ಲೆಯಲ್ಲಿಯೇ ಗಾಳಿ ಅತ್ಯಂತ ರಭಸವಾಗಿ ಬೀಸುವ ಪ್ರದೇಶ ಇದಾಗಿದೆ. ಮಳೆಗಾಲದಲ್ಲಿ ಈ ಪ್ರದೇಶದಲ್ಲಿ ಗಾಳಿ ಎಷ್ಟು ರಭಸವಾಗಿ ಬೀಸುತ್ತದೆಂದರೆ, ಬಿಡಿಸಿ ಹಿಡಿದ ಕೊಡೆಯನ್ನು ಕೈಯಿಂದ ಹಾರಿಸಿಕೊಂಡು ಹೋಗುತ್ತದೆ! ಇದರಿಂದಾಗಿಯೇ ಈ ಊರಿಗೆ ಗಾಳಿಬೀಡು ಎಂಬ ಹೆಸರು ಬಂದಿದೆ.

ದಕ್ಷಿಣ ಕನ್ನಡ ಜಿಲ್ಲೆ ಪರಿಸರಕ್ಕೆ ಹೊಂದಿಕೊಂಡಿರುವ ಗಾಳಿಬೀಡು ಗ್ರಾಮದಲ್ಲಿ ಐದು ನೂರಕ್ಕೂ ಹೆಚ್ಚು ಕುಟುಂಬಗಳಿವೆ. ಇಲ್ಲಿ ಗೌಡ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಇವರಲ್ಲದೆ ಕೊಡವರು, ಬ್ರಾಹ್ಮಣರು, ಗೊಲ್ಲರು, ಹರಿಜನ, ಗಿರಿಜನ ಹಾಗೂ ಐರಿ ಜನಾಂಗದವರೂ ಸಹ ಇಲ್ಲಿ ವಾಸಿಸುತ್ತಿದ್ದಾರೆ. ಮಡಿಕೇರಿ ತಾಲ್ಲೂಕಿನಲ್ಲಿಯೇ ಗಾಳಿಬೀಡು ಅತಿ ದೊಡ್ಡ ಗ್ರಾಮವಾಗಿದೆ. ಗಾಳಿಬೀಡು ಹಾಗೂ ಒಂದನೇ ಮೊಣ್ಣಂಗೇರಿ ಜೋಡಿ ಗ್ರಾಮಗಳಾಗಿವೆ.

ರಾಜರ ಆಳ್ವಿಕೆಯ ಕಾಲದಲ್ಲಿ ಕೊಡಗು ಸೀಮೆಯಲ್ಲಿ 35 ನಾಡುಗಳಿದ್ದವು.ಈ ಪೈಕಿ ಮಡಿಕೇರಿ ತಾಲ್ಲೂಕಿನಲ್ಲಿಯೇ 14 ನಾಡುಗಳಿದ್ದವು. ಈ ಎಲ್ಲಾ ನಾಡುಗಳಲ್ಲಿ ಗಾಳಿಬೀಡು ಪ್ರದೇಶದ ಹೊರಮಲೆ ನಾಡು ಐತಿಹಾಸಿಕವಾಗಿ ಮಹತ್ವ ಪಡೆದಿತ್ತು.

ಮುದ್ದುರಾಜರ ಮಗ ಲಿಂಗರಾಜರ ತಮ್ಮ ಅಪ್ಪಾಜಿ ರಾಜರು ಹೊರಮಲೆನಾಡು ಪ್ರದೇಶದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಅವರು ಇಲ್ಲಿಯೇ ಅರಮನೆಯೊಂದನ್ನು ಕಟ್ಟಿಸಿಕೊಂಡು ನೆಲೆಸಿದ್ದರು. ಅಪ್ಪಾಜಿ ರಾಜರ ತರುವಾಯ ಕ್ರಿ.ಶ. 1835 ರಲ್ಲಿ ಈ ಅರಮನೆ ಪಾಳುಬಿದ್ದು ಶಿಥಿಲವಾಯಿತು. ಈ ಅರಮನೆ ನೆಲ್ಲಪಟ್ಟೀರ ಕುಟುಂಬದ ಸ್ವಾಧೀನದಲ್ಲಿರುವ ಏಲಕ್ಕಿ ತೋಟದಲ್ಲಿತ್ತು.

ಗಾಳಿಬೀಡು ಹಾಗೂ ಒಂದನೇ ಮೊಣ್ಣಗೇರಿ ಜೋಡಿ ಗ್ರಾಮಗಳ ಅಧಿದೇವತೆ ಭಗವತಿ. ಶತಮಾನಗಳ ಹಿಂದೆ ಕಳಕೇರಿ ನಿಡುಗಣೆ ಗ್ರಾಮದವರು ಒಂದನೇ ಮೊಣ್ಣಗೇರಿ ಗ್ರಾಮದ ಭಗವತಿ ದೇವತೆಯ ಬಿಂಬ ಅಥವಾ ಕಡಂಬು (ಪಂಚಲೋಹದಿಂದ ನಿರ್ಮಿಸಲಾದ ವಿಗ್ರಹ)ವನ್ನು ಕದ್ದೊಯ್ದರು. ಈ ಸಂಗತಿಯನ್ನು ತಿಳಿದ ಒಂದನೇ ಮೊಣ್ಣಂಗೇರಿ ಗ್ರಾಮದ ಐರೀರ ಕುಟುಂಬಸ್ಥರು ಕಲಕೇರಿ ನಿಡುಗಣೆ ಗ್ರಾಮಕ್ಕೆ ಹೋಗಿ ಅಲ್ಲಿದ್ದ ಭಗವತಿ ದೇವಿಯ ಬಿಂಬವನ್ನು ಕದ್ದು ವಾಪಸ್ಸು ಗ್ರಾಮಕ್ಕೆ ತಂದರೆಂದು ಹಿರಿಯರಾದ ಪಾಂಡಿರ ಸಿ. ಮೇದಪ್ಪ ತಿಳಿಸುತ್ತಾರೆ.

ಒಮ್ಮೆ ಅಪ್ಪಾಜಿರಾಜರು ಕುದುರೆಯ ಮೇಲೆ ಎತ್ತಲೋ ಹೊರಟಿದ್ದರು. ಆಗ ಐರೀರ ಕುಟುಂಬಸ್ಥರ ಓರ್ವವ್ಯಕ್ತಿ ಈಗಿನ ಭದ್ರಕಾಳಿ ದೇವಾಲಯದ ಸಮೀಪದಲ್ಲಿ ದೇವಿಯ ಬಿಂಬವನ್ನು ತನ್ನ ಬೆನ್ನಿಗೆ ಕಟ್ಟಿಕೊಂಡು ಆವೇಶಭರಿತನಾಗಿದ್ದ. ಆತನ ಈ ವೇಷವನ್ನು ನೋಡಿದ ಅಪ್ಪಾಜಿರಾಜರು ನಕ್ಕು ಆತನನ್ನು ಹೀಯಾಳಿಸಿದರು. ಆ ವೇಳೆಯಲ್ಲಿ ಅವರ ಕುದುರೆ ಮುಂದಕ್ಕೆ ಹೋಗದೆ ನಿಂತಲ್ಲೇ ನಿಂತುಬಿಟ್ಟಿತು!

ಆಗ ಅಪ್ಪಾಜಿರಾಜರಿಗೆ ತಮ್ಮ ತಪ್ಪಿನ ಅರಿವಾಯಿತು. ತಾನು ಜಗನ್ಮಾತೆಯ ಭಂಟನನ್ನು ಕಂಡು ನಕ್ಕು ಪರಿಹಾಸ್ಯ ಮಾಡಬಾರದಿತ್ತು ಎನ್ನಿಸಿತು. ಪಶ್ಚಾತ್ತಾಪದ ದಳ್ಳುರಿಯಲ್ಲಿ ಬೆಂದ ಅವರು "ಒಂದೇ ರಾತ್ರಿಯಲ್ಲಿ ದೇವಾಲಯ ನಿರ್ಮಾಣ ಮಾಡಿಸುತ್ತೇನೆ. ಒಂಟಿ ಕುದುರೆ ಹಬ್ಬ ನಡೆಸುತ್ತೇನೆ. ನನ್ನ ಕುದುರೆಯನ್ನು ಮುಂದೆ ಹೋಗುವಂತೆ ಮಾಡು ದೇವ, ಎಂದು ಪ್ರಾರ್ಥಿಸಿದರು. ನಂತರ ಪರಿಪರಿಯಾಗಿ ಜಗನ್ಮಾತೆಯನ್ನು ಬೇಡಿಕೊಂಡರೂ ಕುದುರೆ ಮುಂದೆ ಕಾಲು ಕೀಳಲಿಲ್ಲ. ಆಗ ಅಪ್ಪಾಜಿರಾಜರು ಜೋಡು ಕುದುರೆ ಹಬ್ಬ ನಡೆಸುತ್ತೇನೆಂದು ಬೇಡಿಕೊಂಡಾಗ ಶಿಲಾಶ್ವದಂತೆ ಕದಲದೆ ನಿಂತಿದ್ದ ಕುದುರೆಗೆ ಜೀವ ಸಂಚಾರವಾಗಿ ಅದು ನಾಗಲೋಟದಲ್ಲಿ ದೌಡಾಯಿಸಿತು. ಇದರಿಂದ ಹರ್ಷಿತರಾದ ಅಪ್ಪಾಜಿರಾಜರು ತಾವು ಹರಕೆ ಹೊತ್ತಂತೆ ಒಂದೇ ರಾತ್ರಿಯಲ್ಲಿ ಬೆಳಕು ಹರಿಯುವುದರೊಳಗಾಗಿ ಭಗವತಿ ದೇವಿಗೆ ಕಲ್ಲಿನ ದೇವಾಲಯ ನಿರ್ಮಿಸಿದರು. ಜೋಡು ಕುದುರೆ ಹಬ್ಬ ನಡೆಸಿದರು. ಅಪ್ಪಾಜಿರಾಜರು ನಿರ್ಮಿಸಿದ ಆ ದೇವಾಲಯವನ್ನು ಈಗಲೂ ಇಲ್ಲಿ ನೋಡಬಹುದು.

ಗಾಳಿಬೀಡು ಹಾಗೂ ಒಂದನೇ ಮೊಣ್ಣಂಗೇರಿ ಗ್ರಾಮಗಳಲ್ಲಿ ಎರಡು ವರ್ಷಗಳಿಗೊಮ್ಮೆ ಏಪ್ರಿಲ್ ತಿಂಗಳಿನಲ್ಲಿ ಭದ್ರಕಾಳಿ ಹಬ್ಬ ವಿಜೃಂಭಣೆಯಿಂದ ನಡೆಯುತ್ತದೆ. ಹಿಂದೆ ಈ ಹಬ್ಬ ಹದಿನೆಂಟು ದಿನಗಳ ಕಾಲ ನಡೆಯುತ್ತಿದ್ದು ಇತ್ತೀಚಿನ ವರ್ಷಗಳಲ್ಲಿ ಒಂಬತ್ತು ದಿನಗಳಿಗೆ ಇಳಿಸಲಾಗಿದೆ.

ಭದ್ರಕಾಳಿ ಹಬ್ಬದ ಒಂಭತ್ತು ದಿನಗಳ ಕಾಲ ಈ ಎರಡೂ ಗ್ರಾಮಗಳಲ್ಲಿ ಯಾರೂ ಗುಂಡು ಹೊಡೆಯುವಂತಿಲ್ಲ. ಪ್ರಾಣಿ ಹಿಂಸೆ ಮಾಡುವಂತಿಲ್ಲ. ಗಿಡಮರ ಕಡಿಯುವಂತಿಲ್ಲ. ಕಟ್ಟುಪಾಡು ವಿಧಿಸಿದ ನಂತರ ಯಾರೂ ಈ ಎರಡೂ ಗ್ರಾಮಗಳ ಗಡಿದಾಟಿ ಹೋಗುವಂತಿಲ್ಲ. ಹಾಗೊಂದು ವೇಳೆ ಯಾರಾದರೂ ಈ ಎರಡೂ ಗ್ರಾಮಗಳ ಗಡಿದಾಟಿಹೋದರೆ ಅಂಥವರು ವಾಪಸ್ಸು ಊರಿಗೆ ಬಂದಾಗ ಮಿಂದು, ರಾತ್ರಿ ನಕ್ಷತ್ರ ದರ್ಶನ ಮಾಡಿದ ನಂತರ ಮನೆಯೊಳಗೆ ಹೋಗಬೇಕಾಗುತ್ತದೆ. ಸಾಮಾನ್ಯವಾಗಿ ಈ ದಿನಗಳಲ್ಲಿ ಯಾರೂ ಗ್ರಾಮಬಿಟ್ಟು ಹೊರ ಹೋಗುವಂತಿಲ್ಲ ಎಂದು ಕೋಳುಮುಡಿಯನ ಆರ್. ಅನಂತ ಕುಮಾರ್ ತಿಳಿಸುತ್ತಾರೆ.

ಭದ್ರಕಾಳಿ ಹಬ್ಬದ ಮೊದಲನೆಯ ದಿನ ಎರಡೂ ಗ್ರಾಮಗಳ ಇಪ್ಪತ್ತನಾಲ್ಕು ಕುಟುಂಬಗಳ ತಲಾ ಓರ್ವ ಸದಸ್ಯರು ಆದಿಸ್ಥಾನದಿಂದ ಕೊಡಿ(ದೇವರು)ಯನ್ನು ತೆಗೆದುಕೊಂಡು ದೇವಾಲಯಕ್ಕೆ ಹೋಗುತ್ತಾರೆ. ಅಲ್ಲಿ ಪೂಜೆ, ಪುನಸ್ಕಾರವಾದ ನಂತರ ಕುಣಿತದ ಕಾರ್ಯಕ್ರಮ ನಡೆಯುತ್ತದೆ. ಈ ಹಬ್ಬದ

ದಿನಗಳಲ್ಲಿ ಪುರುಷರು ಮನೆಯ ಕೈಯಾಲೆ (ಪಡಸಾಲೆ)ಯಲ್ಲಿ ಶುದ್ಧಮುದ್ರಿಕೆ ಇರುವ ಚಾಪೆಯ ಮೇಲೆ ಮಲಗುವ ಪದ್ಧತಿ ರೂಢಿಯಲ್ಲಿದೆ. ಈ ಹಬ್ಬದ ಎರಡನೆಯ ದಿನ ಬೇಡು ಹಬ್ಬ ನಡೆಯುತ್ತದೆ. ದೋಷ ಪರಿಹಾರಕ್ಕಾಗಿ ಅಪ್ಪಾಜಿ ರಾಜರು ಹೊತ್ತ ಹರಕೆಯನ್ನು ಗ್ರಾಮಸ್ಥರು ಭಗವತಿಗೆ ಬೇಡು ಹಬ್ಬದ ಮುಖಾಂತರ ಒಪ್ಪಿಸುವ ಪದ್ಧತಿ ಅನೂಚಾನವಾಗಿ ನಡೆದು ಕೊಂಡು ಬಂದಿದೆ. ಈ ಹಬ್ಬದ ಒಂದು ದಿನ ಕಹಳೆ ಹಿಡಿಯುತ್ತಾರೆ. ಮೂರು ದಿನ ಕೈತಲೆ ಭಗವತಿಯ ಸ್ಮರಣೆ ಮಾಡಲಾಗುತ್ತದೆ. ಎರಡು ದಿನ ಈಶ್ವರನ ಪ್ರೀತ್ಯರ್ಥವಾಗಿ ಬೆಳಕಿನ ಹಬ್ಬ ಆಚರಿಸಲಾಗುತ್ತದೆ.

ಭದ್ರಕಾಳಿ ಹಬ್ಬದ ಕೊನೆಯದಿನ ಚೌರಿ ಆಟ ನಡೆಯುತ್ತದೆ. ದೇವರನ್ನು ಭಕ್ತಿಭಾವದಿಂದ ಪ್ರಾರ್ಥಿಸಿ, ಸ್ತುತಿಸಿ, ಒಲೈಸಿಕೊಳ್ಳಲು ದುಡಿ, ಮದ್ದಳೆ ವಾದನದ ಜೊತೆಗೆ ಪದ ಹೇಳುತ್ತಾ ಕುಣಿಯುತ್ತಾರೆ. ಅದೇ ದಿನ ರಾತ್ರಿ ಎರಡು ಗಂಟೆಯಿಂದ ಮಾರನೆಯ ದಿನ ಮಧ್ಯಾಹ್ನದವರೆಗೆ ಲೋಕಮಾತೆಗೆ ಪೂಜೆ ಸಲ್ಲಿಸಲು ಭಕ್ತಾದಿಗಳು ದೇವಾಲಯಕ್ಕೆ ಹೋಗುತ್ತಾರೆ. ನಂತರ ದೇವಾಲಯದ ಆವರಣದಲ್ಲಿ ಈಲಿ ಆಟ ನಡೆಯುತ್ತದೆ.

ಗಾಳಿಬೀಡಿನ ಸಮೀಪದಲ್ಲಿ ಕೊಡುಗು ಜಿಲ್ಲೆಯಲ್ಲಿಯೇ ಎರಡನೇ ಎತ್ತರದ ನಿಶಾನ್ ಬೆಟ್ಟವಿದೆ. ನಿಶಾನ್ ಬೆಟ್ಟದ ಉತ್ತರಭಾಗದಿಂದ ಹರಿದು ಬರುವ ಝರಿ ಕೂಟು ಹೊಳೆಯನ್ನು ಸೇರುತ್ತದೆ. ಗಾಳಿಬೀಡಿಗೆ ಸಮೀಪದಲ್ಲಿಯೇ ಕೂಟುಹೊಳೆಗೆ ಕಟ್ಟೆಯೊಂದನ್ನು ನಿರ್ಮಿಸಲಾಗಿದೆ. ಇಲ್ಲಿಂದ ಮಡಿಕೇರಿ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜಾಗುತ್ತದೆ.

ಗಾಳಿಬೀಡು ಪ್ರದೇಶದಲ್ಲಿ ಏಲಕ್ಕಿಯನ್ನು ಯಥೇಚ್ಛವಾಗಿ ಬೆಳೆಯಲಾಗುತ್ತಿದೆ. ಹತ್ತಾರು ವರ್ಷಗಳಿಂದ ಇಲ್ಲಿ ಕಾಫಿ ಕೃಷಿ ನಡೆಯುತ್ತಿದೆ. ವಿವಿಧ ವರ್ಗಗಳ ಜನರು ಇಲ್ಲಿ ಅನೋನ್ಯವಾಗಿ ಜೀವಿಸುತ್ತಿರುವರು.

ರಕ್ತ ಸಂಬಂಧಿಯ ಸಂಬಂಧ

ಮನುಷ್ಯನು ತನ್ನ ಹತ್ತಿರದ ರಕ್ತ ಸಂಬಂಧಿಗಳನ್ನು ಮದುವೆ ಆಗುವುದರಿಂದ ಹುಟ್ಟುವ ಮಕ್ಕಳಲ್ಲಿ ಹೆಚ್ಚು ಅಂಗವಿಕಲತೆ ಉಂಟಾಗುವ ಸಾಧ್ಯತೆ ಸಾಮಾನ್ಯವಾಗಿ ಬೇರೆ ದಂಪತಿಗಳಿಗಿಂತ ಹತ್ತು ಪಟ್ಟು ಹೆಚ್ಚಾಗಿರುತ್ತದೆ. ಅಲ್ಲದೆ ಈ ದಂಪತಿಗಳಲ್ಲಿ ಬಂಜೆತನ ಮೂಡುವ ಹೆಚ್ಚಿನ ಸಾಧ್ಯತೆಗಳಿರುತ್ತವೆ.

ಸೋದರ ಮಾವ, ಸೋದರ ಅತ್ತೆ ಹಾಗೂ ಅಕ್ಕನ ಮಕ್ಕಳನ್ನು ಮದುವೆ ಆಗುವ ಪದ್ಧತಿ ಹಿಂದೂ ಸಂಸ್ಕೃತಿಯಲ್ಲಿ ರೂಢಿಯಲ್ಲಿದ್ದು ಹಾಗೆಯೇ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳನ್ನು ಮದುವೆ ಆಗುವ ಪದ್ಧತಿ ಮುಸ್ಲಿಂ ಜನಾಂಗದಲ್ಲಿ ಬಳಕೆಯಲ್ಲಿವೆ. ಆದ್ದರಿಂದ ಇಂತಹ ಹತ್ತಿರದ ಸಂಬಂಧಿಗಳನ್ನು ಮದುವೆ ಆಗುವ ಪದ್ಧತಿಯನ್ನು ಕೈ ಬಿಡುವುದು ಬಹು ಸೂಕ್ತ. ಹೆಂಗಸರು ಹಾಗೂ ಪುರುಷರಲ್ಲಿ ಕಂಡು ಬರುವ ಬಂಜೆತನಕ್ಕೆ ಕಾರಣವನ್ನು ತಜ್ಞ ವೈದ್ಯರನ್ನು ಕಂಡು ಪರಿಹಾರ ಕಂಡುಕೊಳ್ಳಬೇಕು. ಈ ತೆರದಲ್ಲಿ ಪ್ರತಿಯೊಂದು ಜಾತಿ ಪಂಗಡಗಳು ತರ್ಕಿಸಿ ಕೊಳ್ಳುವುದರಲ್ಲಿ ಅರ್ಥವಿದೆ.

-ಸಂಗಾತಿ

ಏ ಹೈದ ನೀ ಚಿಂತೆ ಮಾಡ್‌ಬ್ಯಾಡ

(ಸ್ವರಚಿತ ಕವನ)

ಗುರಿಯತ್ತ ಸಾಗ್ ಏ ಹೈದಾ ನೀ ಚಿಂತೆ ಮಾಡಬ್ಯಾಡ
ಆಗದ್ ಆಗಿಹೋತ್, ಬೇಡಾದ್ ನಡ್ದ್‌ಹೋತ್,
ಬೇಜಾರ್ ಮಾಡ್‌ಬ್ಯಾಡ
ಜೀವನದ ದಾರಿಲಿ ಬೇಕಾದ ಗುರಿಉಟ್ಟು, ಬೇಕಾದಷ್ಟ್
ಬಾಗಿಲುಟ್ಟು
ಸಂತೋಷಲಿ ಬಾಳಿಕೆ ನಿನ್ನ ಬಾಳ್ ಮೇಲೇರಿಕೆ,
ಇರೊಕ್ಕೊಂದೊಳ್ಳೆ ಗುರಿ
ಗುರಿ ತೊಪ್ಪಿ ಸೋಲಿಕಾಕನ ಸೋಲಾಗಿ ಹೋತ್‌ತಾ,
ಪಡ್‌ಬ್ಯಾಡ ನೀ ಗಾಭರಿ
ಅಷ್ಟ್ ಬೇಗ ಸಿಕ್ಕುದಿಲ್ಲೆ ಯಶಸ್ಸು, ನೀ ಸೋತ್ ಸೋತ್
ಸುಣ್ಣಾದ್ರೂ,
ಎಲ್ಲದಕ್ಕೂ ಸಂಬಾಳಿಸಕ್ಕು ಹಠ ಬುಡದೆ ಕಷ್ಟ ಪಡಕು
ಗುರಿಯತ್ತಲೇ ಹೋಕು, ನ್ಯಾಯ ಮಾರ್ಗಲೇ ನಡಿಯೋಕ್ಕು
ನಿನ್ನ ಕೆಲಸಕ್ಕೊಂದು ಗುರಿಯಿರ್ಲಿ, ಗುರಿಗೊಂದು ಅರ್ಥವಿರ್ಲಿ
ಎದೆಲಿ ಧೈರ್ಯಇರಲಿ, ಹುಮ್ಮನ್ಸ್‌ನ ಚೈತನ್ಯ ಇರಲಿ
ಗುರಿಯತ್ತ ಸಾಗ್ ಏ ಹೈದಾ, ಮನ್ಸ್‌ನ ಬರವಸೆಯಿರಲಿ
ಗುಂಪು ಮಧ್ಯೇಲಿ ಓಡಿಕಾಕನ, ನೀ ತಿರ್‌ಗಿ ತಿರ್‌ಗಿ
ನೋಡದಿರ್,
ಗುರಿಮುಟ್ಟುವ ತನ್ಕ ಮೈ ಮರ್ತ್, ಸೋಮಾರಿ ನೀ
ಆಗ್‌ಬ್ಯಾಡ
ನಶೀಬ್‌ನ ಹಳೀಬ್ಯಾಡ, ಹೇಡಿ ಆಗಿ ನೀ ದೇವರ
ಬೊಯ್ಯಿಬ್ಯಾಡ
ಸೋಲಿಗೂ ಚಿಂತೆಗೂ ಬಹಳ ಉಟ್ಟ್, ಒಂಥರದ
ನೆಂಟಸ್ತಿಕೆ
ದೃಢ ಮನ್ಸಿಗೂ ಧೈರ್ಯದ ಬುದ್ಧಿಗೂ ಉಟ್ಟ್‌ಗಡ
ಮಧ್ಯಸ್ತಿಕೆ
ಮೈಮುರ್ದ್ ಬೆವರಿಳಿಸುದಿಲ್ಲೆ, ನಿತ್ಯ ಕರ್ತವ್ಯನ
ಮಾಡುದಿಲ್ಲೆ
ಶಕ್ತಿ ಮೀರಿ ದುಡಿಯೊದೂ ಇಲ್ಲೆ, ಗ್ಯಾನ ಮಾಡ್
ಸಿಕ್ಕುದೂ ಇಲ್ಲೆ.
ಹೋದರೆ ಹೋಗಲಿ, ಆದೆದ್ ಆಗಲಿ, ಏ ಹೈದ ನೀ ಚಿಂತೆ
ಮಾಡಬ್ಯಾಡ
ಊರಿಗೂ ನೆರೆಗೆ ಹೊರೆಯಾಗಿ ಉಪದ್ರವ ನೀ
ಕೊಡ್‌ಬ್ಯಾಡ
ಆದಷ್ಟ್ ಆಗಲಿ ಉಪಕಾರ ನಿನ್ನಿಂದ ಅಪಕಾರ ಎಂದೂ
ಬಗಿಬ್ಯಾಡ
ಗುರಿಯತ್ತ ಸಾಗ್ ಏ ಹೈದಾ, ನೀ ಸದಾ ಚಿಂತೆ
ಮಾಡ್‌ಬ್ಯಾಡ.

- ಶಂಕರನ ಯಂ. ಬಸಪ್ಪ. ಮೈಸೂರು.

ಗೌಡ ಸಂಸ್ಕೃತಿ ಉಳಿವಿಗೆ ಯುವ ಜನಾಂಗ ಮುಂದಾಗಬೇಕು. ಕುಶಾಲನಗರ ಗೌಡ ಸಮುದಾಯ ಭವನದಲ್ಲಿ ಗಣ್ಯರ ನುಡಿ.

ಗೌಡ ಜನಾಂಗದ ಸಂಸ್ಕೃತಿ ಪರಂಪರೆಗಳ ಶಾಶ್ವತ ಉಳಿಯುವಿಗೆ ಜನಾಂಗದ ಯುವ ಸಮುದಾಯ ಮುಂದಾಗಬೇಕೆಂದು ದಿನಾಂಕ 25-12-2002 ರಂದು ನಡೆದ ಕೊಡಗು ಗೌಡ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾದ ತುಂತಜೆ ಗಣೇಶ್‌ರವರು ಸೇರಿದಂತೆ ಸಮಾಜದ ವಿವಿಧ ಪ್ರಮುಖರು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಕುಶಾಲನಗರದ ಗೌಡ ಸಮಾಜದ ಅಧ್ಯಕ್ಷರಾದ ಕೋರನ ಪೂಣಚ್ಚನವರು ವಹಿಸಿದ್ದರು. ಕಾರ್ಯಕ್ರಮವನ್ನು ಸಮಾಜದ ಹಿರಿಯರಾದ ನಿವೃತ್ತ ಠಾಣಾಧಿಕಾರಿ ಸೂದನ ಅಯ್ಯಪ್ಪನವರು ಉದ್ಘಾಟಿಸಿದರು. ಸಮಾಜಕ್ಕೆ ನೂತನವಾಗಿ ಅಳವಡಿಸಿರುವ ವಿದ್ಯುತ್ ಜನಕವನ್ನು ನಿವೃತ್ತ ಡಿ.ವೈ.ಎಸ್.ಪಿ. ಕೋಂಪುಳಿರ ಸೋಮಪ್ಪನವರು ಉದ್ಘಾಟಿಸಿದರು. ಕುಶಾಲನಗರ ಮಟ್ಟದ ದೂರವಾಣಿ ಡೈರೆಕ್ಟರಿಯನ್ನು ಡಾ|| ಕುಂಞ್ಞಾಳಿರ ಬೋಪಣ್ಣನವರು ಬಿಡುಗಡೆಮಾಡಿದರು.

ಸಮಾರಂಭದಲ್ಲಿ ಪರ್ಲಕೋಟಿ ಶ್ರೀ ಮೋಟಯ್ಯನವರನ್ನು, ಗುಡ್ಡಂಡ್ರ ಶ್ರೀ ಗಣಪತಿಯವರನ್ನು, ನಡುವಟ್ಟೀರ ಸೀತಾರಾಮ್ ನವರನ್ನು, ಕೈಬೀಲಿರ ಶ್ರೀ ಮೇದಪ್ಪನವರನ್ನೂ, ಪೊನ್ನಚನ ಶಾರದ ಚಂಗಪ್ಪನವರನ್ನು ಹಾಗೂ ಚೆರಿಯ ಮನೆ ಕಮಲ ಬೋಪ್ಪಯ್ಯನವರನ್ನು ಇವರು ಗೌಡ ಸಮಾಜಕ್ಕೆ ಮಾಡಿದ ಗಣನೀಯ ಸೇವೆಯನ್ನು ಕುರಿತಂತೆ ಹೂ ಹಾರ ಹಾಕಿ ಫಲಪುಷ್ಪನೀಡಿ ಸನ್ಮಾನಿಸಲಾಯಿತು. ಸನ್ಮಾನಿತರೆಲ್ಲರೂ ಯುವ ಪ್ರತಿಭೆಗಳಿಗೂ ನೆರೆದ ಸಮಸ್ತ ಗೌಡ ಬಾಂಧವರಿಗೂ ಸೂಕ್ತ ಸಲಹೆ, ಹಿತವಚನ ನೀಡಿ ಮಾತನಾಡುತ್ತಿದ್ದರು.

ಸಂತೋಷಕೂಟದ ಅಂಗವಾಗಿ ಜನಾಂಗ ಬಾಂಧವರಿಗೆ ವಿವಿಧ ಕ್ರೀಡೆಗಳು ರಸಪ್ರಶ್ನೆ ಸ್ಪರ್ಧೆಗಳು, ವಿವಿಧ ಸಾಂಸ್ಕೃತಿಕ ಚಟುವಟಿಕಗೆಗಳು, ನೃತ್ಯ, ಹಗ್ಗಜಗ್ಗಾಟ ಸ್ಪರ್ಧೆಗಳು ನಡೆದವು. ಕೊಡಗು ಗೌಡರ ಸಾಂಪ್ರಾದಾಯಿಕ ಉಡುಪುಗಳನ್ನು ಧರಿಸಿದ್ದ ಮಹಿಳೆಯರು ಮತ್ತು ಮಕ್ಕಳು ಸಮಾರಂಭದಲ್ಲಿ ಭಾಗವಹಿಸಿ ಸಮಾರಂಭಕ್ಕೆ ಹೆಚ್ಚಿನ ಮೆರಗು ತಂದರು.

ವೇದಿಕೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಕೇಚಪ್ಪನ ಮೋಹನ್, ಆರ್ಥಿಕ ಸಮಿತಿ ಅಧ್ಯಕ್ಷ ಕೇಟೋಳಿ ಶ್ರೀಧರ್, ಕ್ರೀಡಾ ಸಮಿತ ಅಧ್ಯಕ್ಷತೆಕ್ಕಡೆ ನೇಮಿರಾಜ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಕುದುಪಜೆ ಶಾಂತಿ ಬೋಜಪ್ಪ, ಬೋಜನ ಸಮಿತಿ ಅಧ್ಯಕ್ಷರಾದ ಕಡ್ಯದ ಬೋಪಯ್ಯ ಉಪಸ್ಥಿತರಿದ್ದರು. ಸ್ವಾಗತ ನೃತ್ಯವನ್ನು ನಂಬುಡಿರ ಪ್ರೀತು ಬಸಪ್ಪ ಮತ್ತು ನೀತು ಬಸಪ್ಪನವರು ಜ್ಯೋತಿಯ ಬೆಳಗೋಣ ನೃತ್ಯದ ಮೂಲಕ ನೆರೆದವರನ್ನು ಸ್ವಾಗತಿಸಿದರು.

ಸನ್ಮಾನಿತರು ಹಿತವಚನ, ಸಲಹೆ ನೀಡಿದರಲ್ಲದೆ ಇಂತಹ ತಾಂತ್ರಿಕ ಯುಗದಲ್ಲೂ ಯುವಕರು ಆಗಿಂದಾಗ್ಗೆ ಇಂತಹ ಸಭೆ ಸಮಾರಂಭಗಳನ್ನು ನಡೆಸಬೇಕು. ಎಲ್ಲ ಇಷ್ಟ ಮಿತ್ರರನ್ನೂ, ಬಂಧುಗಳನ್ನೂ, ಸಮಾಜ ಬಾಂಧವರನ್ನು ನೋಡುವಂತ ಸೌಭಾಗ್ಯ ವರ್ಷಕ್ಕೊಮ್ಮೆ ನಡೆದರೆ ಮುಂದಿನ ಯುವ ಪೀಳಿಗೆಯವರಿಗೆ ಖಂಡಿತ ಸಹಕಾರಿಯಾಗುವುದು. ನಾವು ನಮ್ಮವರು ಅನ್ನುವ ಭಾವನೆ ಪ್ರೀತಿ ವಿಶ್ವಾಸ ಮೂಡಿ ನಾವು, ನಮ್ಮ ಭಾಷೆ, ಸಂಸ್ಕೃತಿ ಬಗ್ಗೆ ಸದಭಿಪ್ರಾಯ ಮೂಡಿ ದೇಶದ ಮುಖ್ಯವಾಹಿನಿಯಲ್ಲಿ ಸೇರ್ಪಡೆಗೆ ಸಹಕಾರಿಯಾಗಲಿ ಅನ್ನುವ ಅಂಶವು ಹಿರಿಯರಿಂದ ಬಂತು.

ಪೆರುಬಾಯಿ ಮಂಜುನಾಥನವರು ಪ್ರಾರ್ಥಿಸಿದರು. ಪೊನ್ನಚನ ಮೋಹನ್‌ನವರು ಸ್ವಾಗತಿಸಿದರೆ, ಕೊಡಗನ ಮನೆ ರಮೇಶ್‌ನವರು ಪ್ರಾಸ್ತಾವಿಕ ಭಾಷಣ ನೀಡಿದರು. ಕವಿತ ಮೋಹನ್ ಹಾಗೂ ಪಿ.ಎಂ. ಮೋಹನ್‌ನವರು ಸ್ವಾರಸ್ಯಕರವಾಗಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

25-12-2002 ರಲ್ಲಿ ಜರುಗಿದ ಲಾಟರಿ ವಿಜೇತರು

1 ನೇ ಬಹುಮಾನ	-	0027	5 ಸೆಂಟು ಜಾಗ
2 ನೇ ಬಹುಮಾನ	-	0844	10 ಗ್ರಾಂಚಿನ್ನ
3 ನೇ ಬಹುಮಾನ	-	0208	5 ಗ್ರಾಂ ಚಿನ್ನ
4 ನೇ ಬಹುಮಾನ	-	0418	1 ಗ್ರಾಂ ಚಿನ್ನ
5 ನೇ ಬಹುಮಾನ	-	0428	1 ಗ್ರಾಂ ಚಿನ್ನ
6 ನೇ ಬಹುಮಾನ	-	0546	1 ಗ್ರಾಂ ಚಿನ್ನ
7 ನೇ ಬಹುಮಾನ	-	1764	1 ಗ್ರಾಂ ಚಿನ್ನ

- ಕೊಡಗನ ಮನೆ ರಮೇಶ್, ಕಾರ್ಯದರ್ಶಿ, ಗೌಡ ಸಮಾಜ, ಕುಶಾಲನಗರ.

ಸೇನಾ ದಿನಾಚರಣೆಯಲ್ಲಿ ಯೋಧರ ತ್ಯಾಗ ಸ್ಮರಣೆ ಕೊಡಗಿನ ಮೂವರಿಗೆ ಪ್ರಶಸ್ತಿ ಪ್ರಧಾನ.

ಸೇನಾ ದಿನಾಚರಣೆ ಹಾಗೂ ಸಂಸ್ಥಾಪನೆ ದಿನಾಚರಣೆ ಅಂಗವಾಗಿ ಭೂ ಸೇನೆಯ ದಕ್ಷಿಣ ಕಮಾಂಡ್ ದಿನಾಂಕ 8-1-2003 ರಲ್ಲಿ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಭಾರತ ದೇಶಕ್ಕೆ ತ್ಯಾಗ ಮತ್ತು ಪ್ರಾಣಾರ್ಪಣೆಗೈದ ಸುಮಾರು 62 ವೀರ ಯೋಧರಿಗೆ ಮತ್ತು ಬಲಿದಾನಗೈದ ವೀರ ಯೋಧರ (ಮರಣೋತ್ತರ) ಪತ್ನಿಯರಿಗೆ ದಕ್ಷಿಣ ಕಮಾಂಡಿನ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಜಿ. ಎಸ್. ಸಿಹೋಟ ಪ್ರಶಸ್ತಿ ಪ್ರಧಾನ ಮಾಡಿದರು.

ಇವರಲ್ಲಿ ಕೊಡಗಿನ ವೀರ ಪರಂಪರೆಯಲ್ಲಿ ಬರುವ ಕೊಡಗಿನ ವೀರ ಯೋಧರಾದ ಮೇಜರ್ ಕೆ. ಯು. ಕರುಂಬಯ್ಯ ಮತ್ತು ಸಿಪಾಯಿ ಬಿಲ್ಲವರ ದೇವಪ್ಪ ಮುತ್ತಪ್ಪ (ಮರಣೋತ್ತರ) ನವರಿಗೆ ಸೇನಾ ಮೆಡಲ್ (ಶೌರ್ಯ) ಪ್ರಶಸ್ತಿಯನ್ನು ಹಾಗೂ ಕರ್ನಲ್ ಪಾರುಪಂಗಡ ಮಾದಪ್ಪ ಕಾರ್ಯಪ್ಪನವರಿಗೆ ವಿಶಿಷ್ಟ ಸೇನಾ ಮೆಡಲ್ ಪದಕ ಪ್ರಧಾನ ಮಾಡಲಾಯಿತು.

ನನ್ನ ಮಗ ಶೂರ: ಕಾರ್ಗಿಲ್ ಯುದ್ಧದಲ್ಲಿ ಮಗ ಸಿಪಾಯಿ ದೇವಪ್ಪನನನ್ನು ಕಳೆದುಕೊಂಡಿರುವ ನಾಪೋಕ್ಲಿನ ಬಿಲ್ಲವರ ಮುತ್ತಪ್ಪ ದೇಶಕ್ಕಾಗಿ ತನ್ನ ಮಗನ ಬಲಿದಾನವನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಸರಕಾರ ಎಷ್ಟೇ ಹಣ ಕೊಟ್ಟರು ಮಗನ ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಮಾತೃಭೂಮಿಗಾಗಿ ಹೋರಾಡಿ ಜೀವ ತೆತ್ತಿದ್ದಾನೆ ಎನ್ನುವುದೊಂದೆ ನಿಜವಾದ ಸಮಾಧಾನದ ಸಂಗತಿ. ನನ್ನ ಎರಡನೇ ಮಗನನ್ನು ಸಹ ಸೇನೆಗೆ ಸೇರಿಸುವ ಬಯಕೆಯನ್ನು ಹೊಂದಿದ್ದಾರೆ. ಈ ಹಿಂದೆ ಕೊಡಗು ಸಂಗಾತಿ ಸಂಪುಟ -5, ಸಂಚಿಕೆ 13-14 ರಲ್ಲಿ ಪ್ರಕಟಿಸಿತ್ತು.

ಬಂಧು ಯಾರು ?

ಶಿವನೇ ಜೀವ; ಜೀವವೇ ಶಿವ, ಇದನ್ನರಿತವನೇ ಜ್ಞಾನಿ. ಇದೊಂದು ಜ್ಞಾನ ಜ್ಯೋತಿ. ಹಾಗೆಂದರೆ ಜೀವವಿರುವವರೆಲ್ಲರೂ ಶಿವನಾಗದಿದ್ದರೂ ಶಿವಾಂಸವಿರುವವರೆಂದು ಒಪ್ಪಿಕೊಳ್ಳ ಬಹುದು. ಇದನ್ನು ಒಪ್ಪಿಕೊಂಡರೆ ನಮ್ಮ ಬಂಧು ಪರಮಾತ್ಮನೇ. ಇದು ಪುಸ್ತಕದಲ್ಲಿ ಬರಿಯುವಂತದ್ದಲ್ಲ; ಮಸ್ತಕದಲ್ಲಿ ಮನನ ಮಾಡುವಂತದ್ದು. ಅದನ್ನೇ ಭಗವದ್ಗೀತೆ "ಮಾಮಾತ್ಮ ಸರ್ವ ಭೂತಾಂತರಾತ್ಮ" ಎಂದಿದೆ. ಅದನ್ನೇ ನಾವು ಆತ್ಮ, ಜೀವಾತ್ಮ ಎನ್ನುತ್ತೇವೆ. ಇದನ್ನು ಗುರ್ತಿಸುವ ಶಕ್ತಿ ಮನುಷ್ಯನಿಗೆ ಮಾತ್ರವಿದೆ. ಪ್ರಾಣಿಗಳಿಗಿಲ್ಲ. ಇಷ್ಟಾದರೂ ಮನುಷ್ಯ ಮೋಹ ಮತ್ತು ಮಾಯೆಯಲ್ಲಿ ಸಿಕ್ಕಿಕೊಂಡಿದ್ದಾನೆ. ಇದಕ್ಕೆ ಕಾರಣ ನಮ್ಮ ಗುಣ. ಸರ್ವಗುಣಗಳನ್ನು ಭಗವಂತನಿಗೆ ಅರ್ಪಿಸಿದರೆ ಮಾಯೆ ಮತ್ತು ಮೋಹ ದೂರವಾಗುವುದು. ಮೋಹವೆಂದರೆ Attachment ಧನಮೋಹ, ಸ್ತ್ರೀಮೋಹ, ಸಂಸಾರ ಮೋಹ (ಮಕ್ಕಳ ಮೋಹ) ಇದೆ. ಮೋಹವೆಂಬ ಮಾಯೆ, ಮಾಯೆ ಯಾರನ್ನೂ ಬಿಟ್ಟಿಲ್ಲ. ಸರ್ವವ್ಯಾಪಿಯಾಗಿದೆ. ಆದರೆ ಅದನ್ನು ಮಾಯೆ ಎಂದು ಅರಿಯುವ ಬುದ್ಧಿ, ಜ್ಞಾನ ಮಾನವನಿಗಿಂತ ಮಾಯೆ ಶಾಶ್ವತ ಅಲ್ಲ. ಅದನ್ನು ಗುರ್ತಿಸಬೇಕು.

ವಿದ್ಯಾರ್ಥಿಜೀವನ ಅಥವಾ ಯೌವ್ವನ ಒಂದು ಚಿನ್ನದ ಯುಗ, ಇದನ್ನು ಯುವಜನಾಂಗ ಉತ್ತಮ ರೀತಿಯಲ್ಲಿ ಬಳಸಬೇಕು. ನೀವು ಮಾಡುವ ಕಾರ್ಯ ಜನರ ಉಪಯೋಗಕ್ಕಿರಲಿ, ಭಗವಂತನಲ್ಲಿ ಅಚಲ ವಿಶ್ವಾಸವಿರಲಿ, ಮಾಡುವ ಕಾಯಕದಲ್ಲಿ ಶ್ರದ್ಧೆ, ಉತ್ಸಾಹವಿರಲಿ, ಹೃದಯ ವಿಶಾಲವಾಗಿರಲಿ, ಮುಖದಲ್ಲಿ ಮಂದಹಾಸವಿರಲಿ, ತನ್ನ ಶರೀರವನ್ನು ಯಾವ ರೀತಿಯಿಂದಲೂ ಅಪವಿತ್ರಗೊಳಿಸಿ ಕೊಳ್ಳಬೇಡಿ. ಶುದ್ಧಗಾಳಿ ಇರಬೇಕಾದ ಶ್ವಾಸಕೋಶದಲ್ಲಿ ಧೂಮಪಾನ ಹೊಗೆಯಿಂದ ಆವರಿಸದಿರಲಿ. ಪವಿತ್ರವಾದ ನಾಲಿಗೆಯಲ್ಲಿ 'ಗುಟಕ' ಇಲ್ಲದಿರಲಿ. ವಚನ ಕ್ರಿಯೆಯಲ್ಲಿ ನಿರತವಾಗಬೇಕಿರುವ ಕರುಳಿನಲ್ಲಿ ಮಾದಕ ದ್ರವ್ಯ ತುಂಬದಿರಲಿ, ಜ್ಞಾನವಿರಲಿ. ಕಾದ ಮೆದುಳಿನಲ್ಲಿ ಮಾದಕ ನಿಶ ತುಂಬದಿರಲಿ, ಶರೀರದ ಪ್ರತಿಯೊಂದು ಅಂಗವೂ ಸ್ವಚ್ಛತೆಯಿಂದಿರಲಿ ಇದೇ ಯುವ ಜನಾಂಗದ ಗುಪ್ತ ನಿಧಿ. ಇಂದು ಯುವ ಜನಾಂಗದಲ್ಲಿ ಹಣಗಳಿಕೆಗೆ ಮಹತ್ವ ಹೆಚ್ಚು. ಹಣ ಬೇಕೆ ಬೇಕು. ಹಣವಿಲ್ಲದವ ಹೆಣ ಸಮಾನ. ಗಳಿಕೆ ಉತ್ತಮ ಆದರೆ ಅದರ ಸದುಪಯೋಗ ಮಹತ್ವದ್ದು. ಗಳಿಕೆಯ ಬುದ್ಧಿಗಿಂತ, ಖರ್ಚು ಮಾಡುವ ಬುದ್ಧಿ ಮಹತ್ವದ್ದು. ಇಂದು 'ಸೆಕ್ಯೂಲರಿ'ಗೆ ಶರಣಾಗಿದ್ದೇವೆ. ಸೆಕ್ಯೂರಿಟಿಯನ್ನು ಕಳೆದುಕೊಂಡಿದ್ದೇವೆ. ಸೆಕ್ಯೂಲರಿಸಂ ಹೊಟ್ಟೆ ಪಾಡಿಗೆ ಸರಿ. ಆಧ್ಯಾತ್ಮಿಕ ಹೃದಯ ನೈರ್ಮಲ್ಯ ಮಾನವನಿಗೆ ಈ ಎರಡು 'ಇಸಂ'ಗಳೂ ಬೇಕು. ಎಲ್ಲದರಲ್ಲೂ ಪವಿತ್ರತೆ ಇರಬೇಕು.

ಯುವ ಜನಾಂಗ ಇಂದು ಕೃತಜ್ಞತೆಯನ್ನು ಮರೆಯುತ್ತಿದೆ. ಹೆತ್ತ ತಾಯಿಗೆ ಕೃತಜ್ಞತೆ. ಅನ್ನಬಟ್ಟೆ, ವಿದ್ಯೆ ಕೊಟ್ಟ ತಂದೆಗೆ ಕೃತಜ್ಞತೆ. ಪಾಠ ಕಲಿಸಿ ನಮ್ಮನ್ನು ನಮ್ಮ ಕಾಲ ಮೇಲೆ ನಿಲ್ಲಲು ಶ್ರಮಿಸಿದ, ವಿದ್ಯೆ ಕಲಿಸಿದ ಗುರುಗಳಿಗೆ ಕೃತಜ್ಞತೆ ಇಲ್ಲದಾಗಿದೆ. ಇದು ದುರ್ದೈವ.

ಯಾರು ತನಗೆ ಸಹಾಯಮಾಡಿ ಸಹಕರಿಸಿದರೋ ಅವರನ್ನೇ ನಾಶ ಮಾಡಲು ಹಿಂಜರಿಯುವುದಿಲ್ಲ. ವಿದ್ಯೆ ಕಲಿಸಿದ ಗುರುಗಳನ್ನೇ ನಿಂದಿಸುತ್ತಾರೆ. ಹೆತ್ತ ತಾಯಿಯನ್ನು ಸಾಕಿ ಸಲಹಿದ ತಂದೆಯನ್ನು ನಿರ್ಲಕ್ಷಿಸುತ್ತಿದೆ. ಅವರ ಮನಸ್ಸಿನ ನೋವು, ನಿಮ್ಮನ್ನು ನೋಯಿಸದೆ ಬಿಡದು. 'ಮಾಡಿದ್ದುಣ್ಣೋ ಮಾರಾಯ' ಎಂಬ ಗಾದೆ ನೆನಪಿಗೆ ಬರುವುದು. ಇದಕ್ಕೆ ಕಾರಣ ಸ್ವಾರ್ಥ, ಸ್ವಾಥ ಅಲ್ಪಕಾಲಿಕ, ನಿಸ್ವಾರ್ಥ ಶಾಶ್ವತ. ಸಮಾಜ ಆಪ್ತ ಬಂಧು ತನ್ನ ನಡತೆ (Character) ತನಗೆ ಜ್ಯೋತಿ. ಲೋಕವೇ ಜ್ಞಾನ ದೇವತೆ. ನಿನ್ನ ಹೃದಯವೇ ಗುರು. ಅದೇ ಆಧ್ಯಾತ್ಮಿಕ ಹೃದಯ. ಆಪ್ತ ಬಂಧುವೇ ದೇವರು. ದೇವರನ್ನು ಕಳೆದುಕೊಂಡವನು ತನ್ನ ಬುದ್ಧಿ ಶಕ್ತಿಯನ್ನೂ ಕಳೆದುಕೊಂಡು, ಅದನ್ನು ದುರುಪಯೋಗ ಪಡಿಸಿಕೊಳ್ಳುತ್ತಾನೆ. ಧರ್ಮವನ್ನು ರಕ್ಷಿಸಲಾಗದವನಾಗುವನು. ದೇವರ ದಯವೇ ನಮ್ಮ ರಕ್ಷಣೆ.As is the action; so is the re-action. ನಮ್ಮ ವರ್ತನೆಯಿಂದಲೇ ನಮ್ಮನ್ನು ನಾವು ಗುರ್ತಿಸಲ್ಪಡುತ್ತೇವೆ.

ನಮಗೆ ಸ್ನೇಹಿತರು ಬೇಕು. ಎಂತವರು? ನಿಷ್ಠಾವಂತನಾಗಿ ನಟಿಸುವವನು ವಂಚಿಸುವವನು, ನೆಚ್ಚಿನ ಮಾತನ್ನಾಡಿ ವಂಚಿಸುವವನು, ಕೊಟ್ಟ ಭಾಷೆಯನ್ನು ತಪ್ಪುವವನು, ಮಿತ್ರನಲ್ಲ. ಸತ್ಯ ನುಡಿಯುವವನು, 2 ಶರೀರದಲ್ಲಿ ಒಂದೇ ಉಸಿರಾಗಿರುವವರೇ ನಿಜವಾದ ಸ್ನೇಹಿತರು. ನಮ್ಮ ಬಯಕೆಗಳನ್ನು ಹತೋಟಿಯಲ್ಲಿಟ್ಟುಕೊಂಡು, ಪ್ರಾಪಂಚಿಕ ಸುಖವನ್ನು ಕಡಿಮೆ ಮಾಡಿ, ತನ್ನ ಶ್ರೇಯಸ್ಸಿಗಾಗಿ ಸಮಾಜದ ಒಳಿತಿಗಾಗಿ ದುಡಿಯುವವನೇ ಸಮಾಜದಲ್ಲಿ ಗಣ್ಯರು. ಇಂದು ವಿದ್ಯಾವಂತರಲ್ಲಿರುವಷ್ಟು ಸಂಶಯ ಅವಿದ್ಯಾವಂತರಲ್ಲಿಲ್ಲ ಕಾರಣ ಇಂದಿನ ವಿದ್ಯೆ ಪ್ರಾಪಂಚಿಕ ವಿದ್ಯೆ. ಸೆಕ್ಯೂಲರ್ ವಿದ್ಯೆ, ಸತ್ಯ, ಧರ್ಮ, ದಯೆ, ಕರುಣೆ, ಕೃತಜ್ಞತೆ, ಸರಳತೆ ದೈವ ಚಿಂತನೆ ಇವೇ ಆಪತ್ಕಾಲಕ್ಕೆ ಒದಗುವ ಸಂಗಾತಿ.

ಯೌವ್ವನ ಯುವಕರ ಸಂಪತ್ತು. ಯುವಕರು ಜನಾಂಗದ ಸಂಪತ್ತು. ಜವಾಂಗ ಯುವ ಪೀಳಿಗೆಯನ್ನು ಕಳೆದುಕೊಳ್ಳುವುದಿಲ್ಲ. ಯುವಕರು ಸಮಾಜವನ್ನು ಪೋಷಿಸಬೇಕು. ರಕ್ಷಿಸಬೇಕು. ಯುವಕರ ಸಂಪತ್ತಿನಲ್ಲಿ ನಡತೆ (character) ವಿಶಿಷ್ಟವಾದ ಸಂಪತ್ತು. ಯೌವ್ವನದಲ್ಲಿ ಯುವಕರು ಮಾನವತ್ವವನ್ನು ಕಳೆದುಕೊಳ್ಳಬಾರದು. ತಮ್ಮ ಕುಲಾಚಾರ, ಜೀವನ ಸಂಸ್ಕೃತಿ, ಸಂಸ್ಕೃತಿಯ ಸಂಪ್ರದಾಯ, ಸಂಪ್ರದಾಯದ ಉಡಿಗೆ ತೊಡಿಗೆ (ಮೂಲಸ್ಥಿತಿ ಬದಲಾಗದ ಹಾಗೆ ನವೀಕರಿಸಬಹುದು) ಇವೇ ಒಂದು ಜನಾಂಗದ ಆಸ್ತಿ. ಈ ಆಸ್ತಿಯನ್ನು ಉಳಿಸಿ ಕೊಳ್ಳಬೇಕಾದರೆ ಹಿರಿಯರು ಒಳ್ಳೆ ಮಾರ್ಗದರ್ಶನ ನೀಡಬೇಕು. ಕಿರಿಯರಾದ ಯುವ ಜನಾಂಗ ಸಮಾಜದ ಏಳ್ಗೆಗಾಗಿ ನಿಸ್ವಾರ್ಥವಾಗಿ ದುಡಿಯಬೇಕು.

ವಿದ್ಯಾರ್ಥಿ ಜೀವನ ಪವಿತ್ರವಾದ ಸ್ವರ್ಣಯುಗ. ಜ್ಞಾನವನ್ನು ಆದಷ್ಟುಗಳಿಸಿ. ಸೆಕ್ಯೂಲರ್ ವಿದ್ಯೆ ಸಂಸಾರಕ್ಕೆ, ಹಣಗಳಿಕೆಗೆ, ಆಧ್ಯಾತ್ಮಿಕ ವಿದ್ಯೆ ಜೀವನ ಪರಿಯಂತದ ವಿದ್ಯೆ. ಸತ್ತ ಮೇಲೂ ಪ್ರಯೋಜನಕಾರಿ ಆಧ್ಯಾತ್ಮಿಕ ತಿಳುವಳಿಕೆಯನ್ನು ಚಿಕ್ಕಂದಿನಿಂದಲೇ ಜೀವನದಲ್ಲಿ ಅಳವಡಿಸಿಕೊಳ್ಳಿ. ಹೃದಯದಲ್ಲಿ ನಿಮ್ಮ ನೆಚ್ಚಿನ ದೇವರ ಚಿತ್ರವಿರಲಿ. ಅವರ ನಾಮ ನಿತ್ಯ ನಿಮ್ಮ ನಾಲಿಗೆಯಲ್ಲಿರಲಿ. ನಾವು ಮಾಡುವ ಸರ್ವಕರ್ಮಗಳನ್ನು ದೇವರಿಗೆ ಒಪ್ಪಿಸಿ, ಸಮಾಜ ಸೇವೆ ಮಾಡಿ, ಇದುವೇ ಸತ್ಯ.

ತಾಯಿಗಿಂತ ಹೆಚ್ಚಿನ ಶ್ರೇಷ್ಠರಿಲ್ಲ, ದೇವರಿಗಿಂತ ಹೆಚ್ಚಿನ ಬಂಧುವಿಲ್ಲ.

- ಚೇಂದ್ರಿಮಾಡ ಗ. ಮುತ್ತಪ್ಪ, ಕುಶಾಲನಗರ.

ವ್ಯಕ್ತಿಗಳು ಕ್ರೂರವಾಗಿರಬಹುದು ಆದರೆ ಮಾನವ ಮಾತ್ರ ಕರುಣಾಮಯಿ

ಭೂತ ಅಲ್ಲದೆ ಮತ್ತೆ ಇನ್ನೆಂಥ ?

ಅಂವ ಅಂದ್ ಬಾರೀ ಜೋರಾಗಿ ಮನೆಕಡೆ ಹೆಜ್ಜೆ ಹಾಕ್‌ತಿತ್ತ್. ಗಂಟೆ ಆಗಲೇ ರಾತ್ರಿ ಒಂಬೋತ್ತುವರೆ ಆಗಿತ್ತ್. ಆಂದ್ ಅಮಾಸೆ ಬ್ಯಾರೆ, ಕರಿಗೂಡು ಕತ್ತಲೆಲಿ, ಕಾಡ್‌ದಾರಿಲಿ ನಡ್ದ್‌ಹೋಕನ ಕೆಲು ಕೀಟಗಳ ಟೊರೋ...ಟೊರೋ....ಸದ್ದ್ ಬುಟ್ರೆ ಅವನ ಎದೆಬಡ್ತ ಅವಂಗೆ ಕೇಳ್‌ತಿತ್ತ್. ಹೀಂಗೆ ಹೋಗ್‌ತ್ತಿದ್ದವಂಗೆ ಹಿಂದೆಂತೋ ಸಪ್ಪಳ ಕೇಳ್ದಂಗಾಗಿ ತಿರ್‍ಗಿ ನೋಡ್ರೆ ಒಂದ್ ನಾಯಿ ಹಿಂಬಾಲಿಸ್ಕಂಡ್ ಬರ್‍ತಾ ಉಟ್ಟು. ಇದರ ಸುಡಿಕೆತ್ತ್ೇಳಿ, ಬೈಕಂಡ್ ಮುಂದೆ ನೋಡ್ರೆ ಅರೆ!......ಅದೇ ನಾಯಿ ಮುಂದೆ ಓಡ್ತಾ ಉಟ್ಟು, ನೋಡ್ತಾ ಇದ್ದಂಗೆ ನಾಯಿ ದೊಡ್ಡ ದೊಡ್ಡದಾದಂಗೆ ಕಾಂಬೊತ್ತುಟ್ಟು, ಹಂಗೇ ಅದ್ ಮಾಯಾಗಿ ಹೋತ್. ಅಂವ ಜೂವ ಕೈಲಿ ಹಿಡ್ಕಂಡ್ ಮನೆ ತಲ್ಪಿತ್ತ್. ಮತ್ತೊಮ್ಮೆ ಇಬ್ಬರ್ ಶಿವರಾತ್ರಿಗೆ ಮನೆ ಹಾಡಿಕೆ ಹೋದವ್ ಸಿಕ್ಕಿದ ಅಕ್ಕಿ, ದುಡ್ಡ್ ತಕಂಡ್, ದೊಂದಿ ಹಿಡ್ಕಂಡ್ ಬಾಕನ ಇದ್ದಕ್ಕಿದ್ದಂಗೆ, ದೊಂದಿಗೆ ಕಲ್ಲ್ ಬಿದ್ದಾಗಾಂಗಿ ಅಲ್ಲಿಂದ, ಕೈಲಿದ್ದ ಬ್ಯಾಗ್‌ನ ಬುಟ್ಟ್ ಓಡ್ದವ್ ಮನೇಲೇ ಬಂದ್ ನಿತ್ತದ್‌ಗಡ. ನಮ್ಮ ಕಂದ ಹೈದ ಬ್ಯಾಟೆಗೆ ಹೋದರೆ ಅದ್ ಕಣ್ಣ್‌ಕೊಡ್ದ್ ತೆಡೆಕೆ ಬೊತ್ತದೆ ಮತ್ತೆ ತೋಟಕ್ಕೆ ಸೂಜಿ ಸೆಕ್ಸಿ ಹೊಡ್ದಮೇಲೆ, ಕಲ್ಲ್ ಮ್ಯಾಲೆ ಹಾಮಾಜಿ ಆಗಿ ಬೀತ್‌ಗಡ. ಮತ್ತೊಮ್ಮೆ ಒಬ್ಬ ಹುಣ್ಣಿಮೆ ದಿನ ನಡ್ಕಂಡ್ ಹೋಕನ ಎಂತದೋ ಬಿಳೀ ಆಗಿ ತೇಲಿಕಂಡ್ ತೇಲಿಕಂಡ್... ವೈಯ್ಯಾರಲಿ ಹೋಗ್ತಿತ್ತ್‌ಗಡ. ಹೀಂಗೆ ದೆವ್ವ ಭೂತಗಳ ಬಗ್ಗೆ ಜನ ಆಡಿಕೊಣ್ದು ಕೇಳ್ರೆ ರಾತ್ರಿ ಇರ್‍ಲಿ ಹಗ್ಲ್ ಕೂಡ ಒಬ್ಬನೇ ಕಾಡ್ ದಾರಿಲಿ ಹೋಕನ ಚರ್-ಪರ್‌ತ್ತ್ೇಳಿ ಆರಣೆ ಓಡ್ರು ಮೈ ಜುಂತ್ತ್ೇಳ್ದೆ. ಇದೆಲ್ಲಾ ನಿಜನಾ, ಅಲ್ಲಾ ಭ್ರಮೆನ ಯಾರಿಗೆ ಗೊತ್ತು?

ಒಮ್ಮೆ ನಮ್ಮ ಚಾಮಿ ಎಲ್ಲಿಗೋ ಹೋದಂವ ಅವಂದೂರಿಗಾಗಿ, ಮದೆನಾಡಿಗೆ ನಡ್ಕಂಡ್ ಬರ್‍ತಿತ್ತ್. ಅದ್ ಬಾರೀ ಕಾಡ್ ದಾರಿ, ಕತ್ತಲಾಗಿ ಹೋಗಿತ್ತ್, ಅವನ್ನ ಕೈಲಿ ಬೆಳ್ಕ್ ಬ್ಯಾರೆ ಇತ್ಲೆ. ಮುಂಗಾರ್ ಸಮೆ ಆದ್ರಂದ ಆಗಾಗ ಸಿಡ್ಲ್ ಮಿಂಚ್‌ತಿತ್ತ್. ಆ ಬೆಳ್ಕ್‌ಲೇ ನಡ್ಕಂಡ್ ಹಾರಿಕಂಡ್ ಓಡಿಕಂಡ್ ಬರ್‍ತಿದಂವಂಗೆ ಊರ್ ಸೇರ್‍ತಿದ್ದಂಗೆ ಏನೋ ಒಂದು ಥರಾ ಖುಷಿ ಆಗಿಯೋ, ಅಲ್ಲ ಹೆದ್ರಿಕೆ ದೂರ ಆಗಿಯೋ, ಅಲ್ಲ ತುಂಟಾಟ ಕ್ಕೆತ್ತ್ೇಳಿಯೋ, ಸ್ವಲ್ಪ ಬುಟ್ಟ್ ಬುಟ್ಟ್ ಮೂರು ಕೂಗ್ ಹೊಟ್ಕಂಡ್ ಮನೆಗೆ ಬಾತ್, ಇದಾಗಿ ಸುಮಾರ್ ಒಂದ್ ವಾರ ಕಳ್ದ್ ಚಾಮಿ ಊರೊಳಗೆ ಹೋದೇ... ಇಬ್ಬರ್ ಹೆಂಗ್ಸ್‌ಗ ಮಾತಾಡಿತ್ತಿದ್ದೊ, 'ಅಕ್ಕಾ ನಿಮಿಗೆ ಗೊತ್ತುಟಾ, ಈಗ ನಮ್ಮ ಮ್ಯಾಲೆ ಕರೆ ದಾರಿಲಿ ಓಡಾಡ್ದು ಬಾರೀ ಡೇಂಜರ್, ಸಾಯಂಕಾಲ ಎಂಟ್‌ಗಂಟೆಗೆಲ್ಲ ಬೀರ ಕೂಗ್ ಹೊಡ್ಕಂಡ್ ಹೋದೆಗಡ. ಮೊನ್ನೆ ಒಂದಿನ ಆಚೆ ಮನೆ ಬೋಜಿ ಗೂಡೆ ಮಿಯಾಕ್ಕೆ ಹೋದವ್ವು ಬೀರನ ಕೂಗು ಕೇಳಿ ಹಂಗೇ ಹೆದ್ರಿ ಮನೊಳೊಗೆ ಓಡಿ ಬಂದಿವ್ಳಿಗೆ ಜ್ವರ ಬಂದ್, ಮತ್ತೆ ಬಲಿ ತೆಗ್ದ್, ಹಾಂರಂ ವನತ್ರದ ಭಸ್ಮ ತಂದ್ ಹಾಕಿದ ಮೇಲೆ ಗೂಡೆ ಉಸರಾತ್ ಗಡತ್ತ್ೇಳ್ಕನ ಚಾಮಿಗೆ ನಗೆ ತಡೆಕೆ ಬೊತ್ತದೆ, ನಿಜ ವಿಷ್ಯ ಹೇಳ್ಕಾಕನ ಅವೂ ಇವನೊಟ್ಟಿಗೆ ನೆಗಾಡಿಕೊಂಡೊಗಡ.

ಹಿಂಗೆ ನೋಡಿಕೆ ಹೋದರೆ ಜನ ಬೀರ ಮೋಹಿನಿ ಅದ್ ಇದ್ ತ್ತೆಲ್ಲ ಹೇಳ್ದು ಬರಿ ಒಂದು ಕಲ್ಪನೆ, ಅಲ್ಲ ಮೂಢ ನಂಬಿಕೆ, ಇಲ್ಲೆಯೋ ಅವ್ ನೋಡ್ದರ್ನ ಪರಾಂಬರ್ಸಿ ನೋಡ್ದೇ ಇಲ್ಲ ದ್ರಂದ ಸತ್ಯ ಅವ್ಕೆ ಕಾಂಬಲೆತ ನನ್ನನ್ನಿಸಿದೆಪ್ಪ. ನೀವ್ ನಮ್ಮ ಬಿದ್ದಯ್ಯನ ಕಥೆ ಕೇಳ್ರೆ ನಿಮ್ಗೂ ಹಾಂಗನ್ಸದೇ ಇರ್‍ಕಿಲೆ.

ಬಿದ್ದಯ್ಯ, ಪಾರ್ವತಿ, ಅವ್ಕೆಡ್ರ್ ಮಕ್ಕ. ಸಣ್ಣ ಮನೆ ಮಾಡಿಕಂಡ್ ಟೌನ್‌ಲಿ ವಾಸ ಮಾಡ್ತಿದ್ದೊ. ಅವ್ರ ಸುಖ ಸಂಸಾರಕ್ಕೆ ಯಾವ ಭಂಗನೂ ಇತ್ಲೆ. ಆದ್ರೆ ಒಂದಿನ ರಾತ್ರಿ ಅವ್ರ ಮನೆ ಸುತ್ತ ಬುಡ್ಕ್... ಬಡ್ಕ್‌ತ್ತ್ೇಳಿ ಸದ್ದ್ ಕೇಳಿಕೆ ಸುರಾತ್. ಆ ಸದ್ದ್ ಒಂದೆರಡ್ ದಿನಕ್ಕೆ ನಿಲ್ಲದೆ ದಿನ ದಿನಾ ಹೆಚ್ಚಾಗ್ತಾ ಹೋತ್. ಮತ್ತೆ ಅವ್ರ ಮನೆ ಬಾಗ್ಲ್‌ನ ಗುಡ್ಕ್.... ಗುಡ್ಕ್...ತ್ತ್ೇಳಿ ಸದ್ದ್ ಮಾಡಿಕೆ ಸುರಾತ್. ಒಂಥರಾ ಐದ್ ಬೆರ್‌ಳ್‌ಲಿ ಬಾಗ್ಲ್‌ನ ತಟ್ಟಿದ ಸದ್ದ್!... ಪಾರ್ವತಿ ಮತ್ತೆ ಮಕ್ಕ ನಿಜಕ್ಕೂ ಹೆದ್ರಿಹೋದೋ. ಬಿದ್ದಯ್ಯಂಗೆ ದೆವ್ವ ಭೂತಗಳಲ್ಲಿ ನಂಬಿಕೆ ಇಲ್ಲದಿದ್ರು ಹೆಣ್ಣ್ ಮತ್ತೆ ಮಕ್ಕ ಹೆದ್ರುದರ ನೋಡಿ ತಾನು ಹೆದ್ರೋತ್.

ಪಾರ್ವತಿ ತವ್ರ್ ಮನೆಗೆ ಹೋಗಿ ಅಪ್ಪನೊಟ್ಟಿಗೆ ಸದ್ದಾಗುವ ವಿಷ್ಯ ಹೇಳ್ದೇ ಹೇಲ್ದ್, ಅಪ್ಪ ಮಾರ್‍ನೆ ದಿನ ಬೊಳಿ ಬೊಳಿ ಬುಡ್ಕನೇ ಪೂವಣ್ಣ ಮೊಲಿಯನತ್ರ ಓಡ್ತ್. ಅಲ್ಲಿ ಕೇಳ್ಸ್‌ಕಾಕನ ಅವರ ಮನೆ ಸುರ್ಕುಳಿಗೆ ಸೊರ್ತ ಉಟ್ಟು, ಹಂಗ್ಯಾಗಿ ಪಿಶಾಚಿ ದೃಷ್ಟಿ ಆ ಮನೆ ಮೇಲೆ ಬೀಳ್ದೊಂರ್ದ ಮನೆ ಬುಡೊಕು ತೇಳಿಯಾತ್. ಈಗ ಸಧ್ಯಕ್ಕೆ ನಾನ್'ತಡೆ' ಮಾಡಿ ಕೊಟ್ಟನೆತೇಳ್ದಂರ್ದ ಒಂದ್ ವಾರ ಬುಟ್ಟ್ ಮನೆ ಖಾಲಿ ಮಾಡ್ದುತ ತೀರ್ಮಾನ ಮಾಡ್ದೊ. ಬಿದ್ದಯ್ಯಾಂಗೆ ಮಾತ್ರ ಮನೆ ಖಾಲಿ ಮಾಡಿಕೆ ಮನ್ಸ್ ಇತ್‌ಲೆ. ಮೊಲಿಯ 'ತಡೆ' ಮಾಡ್ದಂರ್ದ ಅಂದ್ ಸದ್ದ್ ಆಕಿಲೆತ್ತ್ೇಳಿ ಮಲ್ಗಿದೋ. ಸರೀ ಮಧ್ಯರಾತ್ರಿ ಮತ್ತದೇ ಸದ್ದ್! ಬಾಗ್ಲ್ ಗುಡ್ಕ್.... ಗುಡ್ಕ್.... ಸದ್ದ್. ಬಿದ್ದಯ್ಯ, ಪಾರು,...ಪಾರು....ತ ಹೆಣ್ಣ್‌ನ ಕರೆಕನ, ಪಾರು ಎದ್ದತ್, ಮಕ್ಕಳೂ ಎದ್ದ್‌ಕಂಡೋ ಸದ್ದ್ ಮತ್ತೆ ಮತ್ತೆ ಕೇಳ್ತಾವುಟ್ಟು, ಹೆಜ್ಜೆ ಸಪ್ಪಳ, ಬುಸು, ಬುಸು ಸೇಂಕುವ ಸದ್ದ್, ಮನೇಲಿರವು ಹೆದ್ರಿ ನಡ್ಗ್‌ತೊಳೊ. ಬಿದ್ದಯ್ಯ ಮಾತ್ರ ಬಂದ್ ಸಿಗಂಟ್ ಮಾಡೇಬುಡ್ತ್, ಹೆದ್ರಿಕಂಡ್ ಬೊದ್ಕುದಕ್ಕಿಂತ, ಸಾಯೋದೇ ಮೇಲ್, ಇದಂಥದ್ ನೋಡೇ ಬುಟ್ನೆತ್ತ್ೇಲಿ, ದೊಣ್ಣೆ, ಟಾರ್ಚ್ ತಕ್ಕಂಡ್ ಬಾಗ್ಲ್ ತೆಗೆಕೆ ಹೋಕಾಕನ ಪಾರು ಬಂದ್ ಬಿದ್ದಯ್ಯನ ಕಾಲ್ ಹಿಡ್ಕಂಡ್ ದಮ್ಮಯ್ಯ ಬಾಗ್ಲ್ ತೆಗಿಬ್ಯಾಡಿತ ಬೇಡಿ ಕಂಡತ್. ಬಿದ್ದಯ್ಯ ಪಾರುವಿಗೆ ಧೈರ್ಯ ಹೇಳಿ, ಒಳ್ಗೆ ಕಳ್ಸಿ, ಎದೆ ಢವ, ಢವತ್ತ್ೇಳ್ರು, ಇದ್ದ ದೇವ್ರುಗಳ್ನೆಲ್ಲಾ ಗ್ಯಾನ ಮಾಡಿಕಂಡ್, ಅದ್ರಲ್ಲೂ ಪಾಸಾಣ ಮೂರ್ತಿನ ಗ್ಯಾನಮಾಡಿ ಧೈರ್ಯ ತಂದ್‌ಕಂಡ್ ಒಮ್ಮೆಗೆ ಬಾಗ್ಲ್‌ತೆಗ್ದ್ ನೋಡ್ರೆ ಅಲ್ಲಿನ ದೃಶ್ಯ ನೋಡಿ, ಉಸ್ಸಪ್ಪಾ....ತ್ತ್ೇಳಿ ಉಸ್ರ್‌ಬುಟ್ಟ್, ಪಾರೂ ಇಲ್ಲಿ ಒಮ್ಮೆ ಬಾತ್ತ್ೇಳಿ ಕರ್ತ್. ಪಾರೂನೂ, ಮಕ್ಕಳೂ ಬಂದ್ ಆ ದೃಶ್ಯ ನೋಡಿ ನೆಗಾಡಿ....ನೆಗಾಡಿ ಹಾಕಿದೊ. ಬೀದಿ ಸುತ್ತುವ ಕೋಣ, ಎಮ್ಮೆಗಳ ಗ್ಯಾಂಗ್ ಅಲ್ಲಿ ಹಾದ್ ಹೋಕನ ಮೆಟ್ಲ್‌ಬುಡಲಿ ಇರುವ ಹುಲ್ಲು ಕರ್ಪುಕಾಕನ ಅವರ ಕೊಂಬು ಬಾಗ್ಲ್‌ಗೆ ಬಡಿತಿತ್ತ್. ಹಂಗೆ ಹಣೆ ತೊರ್ಸ್‌ಕಾಕನ ಕಟ್ಟಿಳಕ್ಕೆ ಹಣೆನ ಉಜ್ಜಿಕಂಡ್, ಅವವೇ ಕೊಂಬುಗಳ್‌ಲಿ ತಟ್ಟಿಕಂಡ್ ಹಾಯಾಗಿ ಹೋಗ್‌ತಿದ್ದೊ.

- ಪಟ್ಟಡ ಶಿವಕುಮಾರ್

ನನ್ನ ಬಾಲ್ಯದ ನೆನಪಿನ ಬುತ್ತಿ ತೆರೆದಾಗ

ಮೊನ್ನೆ ಕರೆಂಟಿರಲಿಲ್ಲ....ನಾನು, ಕಿರಣ್, ಹರೀಶ್ ಮೂರು ಜವರು ಹರಟೆ ಹೊಡೆಯುತ್ತಾ ಕೋಣೆಯಲ್ಲಿದ್ದೆವು. ಏನೋ ಮಾತಾಡುತ್ತಾ ಹರೀಶ, ದೆವ್ವಗಳನ್ನು ಕರೆಯುವ ವಿಧಾನವನ್ನು ಕಿರಣ್ ವಿವರಿಸುತ್ತಿದ್ದಂತೆಯೇ, ಕಿರಣ್‌ಗೆ ಎಲ್ಲಿಲ್ಲದ ಉತ್ಸಾಹ ಮೂಡಿ ಬಂದು, ಹಾಗಾದ್ರೆ ನಾವು ಕರೆಯೋಣ ಎಂದುಹೇಳುತ್ತಾ ಪೇಪರ್ ಪೆನ್ ಹಿಡಿದಾಗ, ಹರೀಶನಿಗೆ ಯಾಕಾದ್ರು ಹೇಳಿದೆನೊ.....ಎನ್ನುವ ತಾಕಲಾಟ ಮನದಲ್ಲಿ ಆಗುತ್ತಿದ್ದದ್ದು ಮುಖದಲ್ಲಿ ಸ್ಪಷ್ಟವಾಗಿತ್ತು. ಯಾರನ್ನು ಕರೆಯೋದು ಎನ್ನುವ ವಿಚಾರ ಮಾಡ್ತ ಇದ್ದ ಹಾಗೆ ಎಲ್ಲರ ಮನಸ್ಸಿನೊಳಗೂ ಭಯ ಅವಲಕ್ಕಿ ಕುಟ್ಟುತ್ತಿತ್ತೇನೊ.....ಆದ್ರೂ ಯಾರೊಬ್ರು 'ನಂಗೇನೂ ಹೆದ್ರಿಕೆ ಇಲ್ಲ' ಎನ್ನುತ್ತಿದ್ದೆವು. " ಕರೆದ್ರೆ ವಾಪಾಸು ಕಳ್ಸೋಕೂ ಗೊತ್ತು ಬೇಕು. ಇಲ್ಲದಿದ್ರೆ ಕರೆದವರನ್ನೆ ಹಿಡ್ಕೊಳ್ತದೆ. ಅರೆಬರೆ ಗೊತ್ತಿರುವವರು ಇಂತಹ ಕೆಲ್ಸಕ್ಕೆಲ್ಲಾ ಕೈ ಹಾಕಬಾರ್ದಪ್ಪ" ಎಂಬ ನನ್ನ ಮಾತು ಕೇಳಿ, ಇಬ್ರಿಗೂ ಒಳಗೆ ಖುಷಿಯಾಯ್ತೇನೊ.......ತಾವಾಗಿ ಹಿಂದೆ ಸರಿಯಲು ಹಿಂಜರಿಯುತ್ತಿದ್ದ ಅವರಿಗೆ ನನ್ನ ಮಾತು ಸರಾಗವಾಗಿ ಉಸಿರಾಡಲು ಅನುವು ಮಾಡಿಕೊಟ್ಟಿತ್ತು.

ಪುಸ್ತಕ ಪೆನ್ನು ಇನ್ನು ಕೈಯಲ್ಲೇ ಹಿಡಿದಿದ್ದ ಕಿರಣ್, ನಾವು ಹಾಗಾದ್ರೆ ಕಳ್ಳ-ಪೊಲೀಸ್ ಆಟ ಆಡೋಣ ಎಂದಾಗ, ಮರೆತೇ ಹೋಗಿದ್ದ ಆ ಆಟವನ್ನು ನೆನೆದು O.K. ಎನ್ನುತ್ತಾ ಬಾಡೆಗೆ ಜಿಗಿದ್ವಿ. ಕವನ ಮೌನ ಪವಿತನ ಕರೆದಾಗ ಸಂತೋಷದಿಂದ್ಲೆ ಬಂದ್ರು, ಇನ್ನೂ ಪ್ರೈಮರಿ ಶಾಲೆಯಲ್ಲಿರುವ ಕವನ ಮೈನ, ಕಾಲೇಜಿನಲ್ಲಿರುವ ಹರೀಶ-ಕಿರಣ, ಕಾಲೇಜಿನ ಹೊಸ್ತಿಲನ್ನು ದಾಟಿರುವ ನಾನು ಪವಿತ್ರ ಎಲ್ಲರು ಸೇರಿ ಆಟ ಆಡುವಾಗ ನಮ್ಮ ನಗು ಮಾತು ತಾರಕಕ್ಕೇರಿತು. ಖುಷಿಯಂತೂ ಮುಗಿಲು ಮುಟ್ಟಿತು. "ನಾವು ಮಾತ್ರ ಕಿವಿಗೆ ಹತ್ತಿ ಹಾಕಿಕೊಬೇಕು' ಎನ್ನುವ ತಾಯಿಯ ಮಾತು ಬಹುಶಃ ನನ್ನ ಕಿವಿಗೆ ಮಾತ್ರ ಬಿದ್ದಿದ್ದೇನೊ.......ಅಂತೂ.......ಈ ಘಟನೆ ನನ್ನ ಬಾಲ್ಯವನ್ನು ಮತ್ತೊಮ್ಮೆ ನೆನಪಿಸಿ ಕೊಟ್ಟಿತ್ತು.

ಅದೆಷ್ಟು ಸುಂದರವಾಗಿತ್ತು. ಆ ದಿನಗಳು, ಕಾಡಿನೊಳಗಿರುವ ನಮ್ಮ ಮನೆಯಿಂದ 2-3 ಮೈಲು ದೂರ ಇರುವ ಶಾಲೆಗೆ ನಡೆದೇ ಹೋಗ್ತಾ ಇದ್ದೇವು. ವಾರ್ಷಿಕ ಪರೀಕ್ಷೆಗೆ ಹೋಗಿ ಬರುವಾಗಲೇ ರಜೆಯಲ್ಲಿ ಮನೆ ಕಟ್ಟಲು ಬೇಕಾದ, ಕವಟೆ, ಬಡಿಗೆ, ಅದನ್ನು ಮುಚ್ಚಲು ಸೊಪ್ಪು, ಇತ್ಯಾದಿಗಳನ್ನು ಎಲ್ಲೆಲ್ಲಿ ಇದೆ ಎನ್ನುವುದು ನೋಡಿ ಇಟ್ಟುಕೊಂಡಿರುತ್ತಿದ್ದೆವು. ಆದರೂ ಪರಸ್ಪರ ಹೇಳಿಕೊಳ್ತಾ ಇರಲಿಲ್ಲ. ಅಂತೂ ಪರೀಕ್ಷೆ ಮುಗಿದ ಹಾಗೆ ಮನೆಕಟ್ಟಲು ಸುರು ಮಾಡ್ತ ಇದ್ದೆವು. ಜೊತೆಗೆ ಮನೆಗೊಂದು ಗೊಂಬೆ, ತೊಟ್ಟಿಲು ಎಲ್ಲಾ ನಾವೇ ತಯಾರು ಮಾಡಿಕೊಳ್ತಾ ಇದ್ದೇವು. ಹಗಲಿನ ಹೊತ್ತು ಪೂರ್ತಿ ಅಲ್ಲೆ ಕಳೆಯುತ್ತಿದ್ದೇವು ಅಡಿಗೆ ಮಾಡೋದೇನು, ಪಕ್ಕದ ಮನೆಯವರನ್ನು ಊಟಕ್ಕೆ ಕರೆಯುವುದೇನೂ....... ಎಲ್ಲಾ ಸಖತ್ ಆಗಿತ್ತು ! ಊಟಕ್ಕೆ ಧಾರಾಳವಾಗಿ ದೊರೆಯುತ್ತಿದ್ದ ರಾಮಫಲ, ಸೀತಾಫಲ, ಮಾವಿನಕಾಯಿ, ಪಪ್ಪಾಯಿ, ಹುಣಸೆ ಹಣ್ಣು, ಹಲಸಿನ ಹಣ್ಣು, ಬೆಲ್ಲ ಎಲ್ಲಾ ಇರುತ್ತಿತ್ತು.

ಒಮ್ಮೆ ವಾಣಿಗೆ ಊಟ ಕೊಟ್ಟು ಕಳುಹಿಸಿಯಾಯ್ತು, ಅವಳು ಎಷ್ಟೊತ್ತಾದ್ರು ಕರೆಯೋದೆ ಇಲ್ಲ ನನ್ನ, ನಾನಂತು ಬರ್ಲಾ........ ಬರ್ಲಾ...ಅಂತ ಕೇಳಿ ಸಾಕಾಯ್ತು. ಅವಳಂತೂ ಇನ್ನೂ ಅಡಿಗೆ ಆಗಿಲ್ಲ ಅಂತಾನೆ ಇದ್ದಳು. ಅಂತೂ ಕೊನೆಗೊಮ್ಮೆ ನಾನೇ ಹೋಗುವಾಗ..........ಅವಳ ತಂಗಿಯೊಡನೆ "ನಾವೆಲ್ಲಾ ತಿಂದು ಮತ್ತೆ ಕರೆಯೋಣ, ಇಲ್ಲಂದ್ರೆ ಸಾಕೆ ಆಗೋದಿಲ್ಲ" ಅಂತ ಮನೆಯೊಳಗಿಂದನೇ ಹೇಳ್ತಾ ಇದ್ದದ್ದು, ಅವಳ ತಂಗಿ ಹೊರಗೆ ಇದ್ದು, ನಾನು ಬಂದು ನಿಂತಿದ್ದನ್ನು ಹೇಳಲಿಕ್ಕೂ ಆಗದೆ.... ಒದ್ದಾಡಿದ್ದು, ಎಲ್ಲರೂ ಅವರವರದೆ ಆದ ಸಂಕಟ ಅನುಭವಿಸಿದ್ದು, ಈಗ ಯೋಚನೆ ಮಾಡಿದ್ರೆ ನಗು ಬರುತ್ತೆ. ಅವಳ ಗಂಡು ಗೊಂಬೆಗೂ ನನ್ನ ಹೆಣ್ಣು ಗೊಂಬೆಗೂ, ಇನ್ನೇನೂ ಮದುವೆ ಮಾಡ್ಬೇಕು ಅಂದಾಗ ನಮ್ಮ ತಾಯಿ ಹುಣಸೆ ಹಣ್ಣು ಹೆರಕಲೂ ಕರೆದದ್ದೂ, ಹೊಗದಿದ್ದರೆ ಬಯ್ತಾರೆ ಎನ್ನುವ ಹೆದ್ರಿಕೆಯಿಂದ ಮಧ್ಯಾಹ್ನ ಮೇಲೆ ಮದ್ವೆ ಮಾಡೋಣ ಅಂತ ಓಡಿದ್ದು, ಈಗೆಲ್ಲಾ ನೆನೆಸಿಕೊಂಡರೆ ಮುಗ್ಳ್ನಗೆಯೊಂದೆ ಇರುವ ದಾರಿ.

ಚಿಂಟೂ ಅಂತೂ ಅಂಗಡಿ ಇಡ್ತಾ ಇದ್ದ, ಮಣ್ಣಿನ ಹೆಂಟೆಗಳು ಬೆಲ್ಲ ಆಗಿ, ಮರಳು ಸಕ್ಕರೆ, ಮಣ್ಣು ಅಕ್ಕಿ, ವಿವಿಧ ರೀತಿಯ ಹೂಗಳೂ ಇನ್ನು ಏನೇನೊ ಗುಡ್ಡೆ ಹಾಕಿ ಇಡ್ತಾ ಇದ್ದ. ಅದನ್ನು ನಾವು ಎಲೆಗಳೆಂಬ ನೋಟು ಕೊಟ್ಟು ಕೊಳ್ತಾ ಇದ್ದೆವು. ಅವನು ತೆಂಗಿನ ಚಿಪ್ಪಿನಲ್ಲಿ ಮಾಡಿದ ತಕ್ಕಡಿಯಿಂದ ತೂಗಿ ಕೊಡ್ತಾ ಇದ್ದ. ಅವನ ಅಸಿಸ್ಟೆಂಟ್ ಪವನ್‌ಗೆ ಸ್ವಲ್ಪ ರಾಮಫಲ ಕೊಟ್ಟು, ನಾನು ಗಬ್ಬಲ ಮರದ ಹೂಗಳನ್ನು ಚಿಂಟುಗೆ ಗೊತ್ತಿಲ್ಲದ ಹಾಗೆ ಪಡಕೊಂಡಿದ್ದು, ಅದು ಅವರಿಗೆ ಗೊತ್ತಾಗಿ ಜಗಳ ಆಡಿದ್ದು, ಎಲ್ಲಾ ಹೇಗೆ ಮರೆಯೋದು.

ಇನ್ನೂ ಸಂಜೆ ಆಡುತ್ತಿದ್ದ, ಹಿಡಿಯಾಟ, ಕೈ-ಕೈ ಹಿಡಿದು ಕೊಂಡು ಆಡುವ ಚೈನು ಆಟ, ತೇಗದ ಮರವನ್ನು ಗುರುತಾಗಿ ಇಟ್ಟುಕೊಂಡು ಆಡ್ತ ಇದ್ದ ಐಸ್‌ಪ್ರೈಸ್ ಆಟ, ಮನೆಯಲ್ಲಿಯೆ ಆಡ್ತಾ ಇದ್ದ ಕಣ್ಣಾಮುಚ್ಚಾಲೆ ಬಿಸಿಲನ್ನು ಲೆಕ್ಕಿಸದೆ ಆಡುತ್ತಿದ್ದ ಸವೆನ್‌ಟೋನ್ಸ್ ಆಟ, ಬಾಲನ್ನು ಬೀಸಿ ಹೊಡೆಯುತ್ತಾ ಆಡುವ ಸೂರ್ತಿ ಆಟ, ಚಿಣ್ಣೆದಾಂಡು ಆಟ, ಚಿಲ್ಕಿ ಆಟ, ಕುಂಟಾಟ, ಚೆಂಡಿನಲ್ಲಿ ಆಡುವ ಮೆಟ್ಲಾಟ, ಗೊಡೆ ಆಟ ಎಲ್ಲಾ ಒಂದಕ್ಕಿಂತ

ಒಂದು ಸೂಪರ್ ಹಿಟ್ ಆಟಗಳು.

ಕೊಟ್ಟಿಗೆ ಹತ್ತಿರ ವಿಶಾಲವಾಗಿ ಹರಡಿಕೊಂಡಿರುವ ಹುಣಸೇ ಮರದಲ್ಲಿ ಆಡಿದ ಮರಕೋತಿಯಾಟ ಅದಂತೂ ಇನ್ನೂ ಬೊಂಬಾಟ್. ಮರದ ಬುಡವೆ ಅಂತಿಮ ಗುರಿಯಾಗಿದ್ದರಿಂದ, ಮರದ ಯಾವ ಬದಿಯಿಂದಲೂ ಇಳಿದು ಓಡಿ ಗುರಿ ಮುಟ್ಟಲು ಬಿಡಿದಿದ್ದಾಗ, ಪ್ರತಿಮ, ಪ್ರೀತಮ್, ಕಿರಣ್ ಎಲ್ಲಾ ಒಬ್ಬೊಬ್ಬ ರಾಗಿ ಔಟ್ ಆಗಲು ಸುರುವಾದಾಗ, ನಾನು ಗೆಲ್ಲಲೋಸ್ಕರ ಮರದ ಮೇಲಿನಿಂದ ಮರದ ಬುಡಕ್ಕೆ ನೇರವಾಗಿ ಜಿಗಿದು ಗೆದ್ದು, ಸೊಂಟನೋವು ತಂದುಕೊಂಡು ತಾಯಿ ಕೈಯಿಂದ ಬೈಯ್ಯಿಸಿ ಕೊಂಡದ್ದು ಎಷ್ಟು ಮಜವಾಗಿತ್ತು. ಇನ್ನೂ ಅದೆ ಹುಣಸೆ ಮರಕ್ಕೆ, ತಾಲಾಡಿ ಮರಕ್ಕೆ ಹಗ್ಗ ಕಟ್ಟಿ ಆಡಿದ ಉಯ್ಯಾಲೆ ಆಟ ಇನ್ನೂ ಸೂಪರ್!

ರಾತ್ರಿ ಹೊತ್ತು ಆಡುವ ಕಳ್ಳ-ಪೊಲೀಸ್ ಆಟ, ಕಲ್ಲಾಟ, ಕಡ್ಡಿಆಟ, ಬಳೆಚೂರಿನಾಟ, ಕವಡಿ ಆಟ ಎಲ್ಲವೂ ತುಂಬಾ ಖುಷಿ ಕೊಡ್ತಾ ಇದ್ದವು. ಕಾಡಿನಲ್ಲಿ ಸಂಗ್ರಹಿಸುತ್ತಿದ್ದ ಗೊಟ್ಟೆ ಹಣ್ಣು ಚೀಪೆಹಣ್ಣು, ನೇರಳೆ ಹಣ್ಣು, ತರಚಿಲು ಹಣ್ಣು, ಚೂರಿಹಣ್ಣು, ಅಕ್ಕರೆ ಹಣ್ಣು, ಗೂಮೆ ಹಣ್ಣು, ಇವುಗಳೆಲ್ಲದರ ಸವಿ ಮರೆಯಲು ಸಾಧ್ಯವೆ?

ಆಗ ನಾವು ಕೊಟ್ಟಿಗೆಯಲ್ಲಿ ಕುಂಬುಳಿ ಬೀಜ ಸಂಗ್ರಹಿಸಿ ಮಾರಾಟ ಮಾಡ್ತಿದ್ದ ನಾವು ಅದಕ್ಕಾಗಿ ಕುಂಬಳಿ ಹಣ್ಣು ತರಲು ಬೆಳಗಿನ ಜಾವವೆ ಚೀಲ ಹಿಡಿದು ಓಡ್ತಾ ಇದ್ದೆವು. ಕಾಡು ಮಾವಿನ ಹಣ್ಣಿಗಾಗಿ ಹೀಗೆನೆ ಓಡ್ತಾ ಇದ್ದೆವು.

ಮಣ್ಣಿನಲ್ಲಿ ಆಟದ ಸಾಮಾನು, ಗಣಪತಿ ಎಲ್ಲಾ ಮಾಡಿ ಬಾತ್‌ರೂಮ್ ಒಲೆಯಲ್ಲಿ ಸುಟ್ಟಾಗ, ಅಡಿಗೆ ಸಾಮಾನಿನ ಹಿಡಿ ಗಣಪತಿಯ ಸೊಂಡಿಲು ಎಲ್ಲ ಮುರಿದು ಹೋದಾಗ ಎಷ್ಟು ಬೇಸರವಾಗುತ್ತಿತ್ತು ನಮಗಂದು.

ಓಹ್! ಅದೆಷ್ಟು ಸುಂದರವಾಗಿತ್ತು. ಆ ದಿನಗಳು, ಇಂದು ಕೂಡ ನಾವು ಅದೆ ಪರಿಸರದಲ್ಲಿ ಇದ್ದರೂ ಆ....ಆಟಗಳನ್ನು ಆಡುತ್ತಿಲ್ಲ. ನಾವೀಗ ಚಿಕ್ಕವರಲ್ಲದ ಕಾರಣವಾದರೆ, ಇರುವ ಚಿಕ್ಕ ಮಕ್ಕಳು ಆ ಆಟಗಳನ್ನು ಆಡುತ್ತಿಲ್ಲ. ಕಾರಣ ಏನಪ್ಪಾ ಅಂದ್ರೆ ಇಂದು T.V. ಕ್ರಿಕೆಟ್ ಬಂದು ಅವುಗಳೆಲ್ಲವನ್ನು ನುಂಗಿ ಹಾಕಿವೆ. ಇಂದು ಬೇಕರಿ ತಿಂಡಿಗಳು ಮನೆಯಲ್ಲಿದ್ರು, ಅಂದು ಮಣ್ಣಿನಲ್ಲಿ ಒಣಗಿಸಿಟ್ಟ ಹಲಸಿನ ಬೀಜ, ಅವ್ವನ ಮನೆಯಿಂದ ತಂದ ಗೇರು ಬೀಜವನ್ನು ಸುಟ್ಟು ತಿಂದ ರುಚಿ ಯಾವುದಕ್ಕೆ ಸಾಟಿಯಿಲ್ಲ ಇಂದು? ನಮ್ಮ ಈ......ಗ್ರಾಮೀಣ ಆಟಗಳು ಮುಂದೆ ಇರುತ್ತವೆಯೆ? ಅನುಭವ ಸಿಹಿಯಲ್ಲ ಅದರ ನೆನಪೆ ಸವಿ ಎನ್ನುತ್ತಾರೆ, ಅನುಭವಸ್ಥರು. ಆದರೆ ನನಗೆ ಅನುಭವವೂ ಸಿಹಿ, ನೆನಪೂ ಎರಡು ಸಹ ಸವಿಯೆ.

ಆ ನನ್ನ ಬಾಲ್ಯದ ದಿನಗಳು ಸದಾ ಕಿವಿಯಲ್ಲಿ ಗುಂಯು ಗುಟ್ಟಿ ಸವಿಯನ್ನುಣಿಸುತ್ತಿದೆ ಇಂದು.

-ಮೂಡಗದ್ದೆ ಕೃಪಾ, ತಿತಿಮತಿ.

ಬಾಲ ಸಂಗಾತಿ ವಿಭಾಗ ಕಥೆ- 8

'ಜಾಣೆ ಅಜ್ಜಿ'

ಒಂದ್ ಊರ್‌ಲಿ ಒಂದ್ ಅಜ್ಜಿ ಇತ್ತ್. ಅಜ್ಜಿಗೆ ತುಂಬಾ ವಯಸ್ಸ್ ಆಗಿತ್ತ್. ಆ ಅಜ್ಜಿಗೆ ಯಾರ್ ಸಂಬಂಧಿಕರ್ ಇತ್ತ್‌ಲೆ ಹಂಗಾಗಿ ಅಜ್ಜಿ ಒಬ್ಬಳೆ ಇತ್ತ್.

ಸ್ವಲ್ಪ ಕಾಲ ಕಳೆಕನ ಅಜ್ಜಿಗೆ ಕಣ್ಣ್ ಮಂಕಾಕಂಡ್ ಬಾತ್. ಮತ್ತೆ ಸ್ವಲ್ಪ ಕಾಲಲಿ ಅಜ್ಜಿಗೆ ಕಣ್ಣ್ ಪೂರ್ತಿ ಮಂಜಾಗಿ ಒಂದೂ ಕಾಂಬತಿತ್ತ್‌ಲೆ. ಆಗ ಅಜ್ಜಿ ಒಬ್ಬ ಡಾಕ್ಟರ್‌ಗೆ ತೋರ್ಸಿತ್. ಕಣ್ಣ್‌ನ ಪೂರ್ತಿ (ಮೊದಲಿನಂಗೆ) ಕಾಣುವಂಗೆ ಮಾಡಿರೆ ನಾನ್ ನಿಂಗೆ ಪುರಸ್ಕಾರ ಕೊಟ್ಟನೆತ್ತೇಳ್ತ್. ಆ ಡಾಕ್ಟರ್ ಅಲ್ಪ ಸ್ವಭಾವದಂವ. ಅಜ್ಜಿಗೆ ಚಿಕಿತ್ಸೆ ಸುರು ಮಾಡ್ತ್. ಹಂಗೆನೆ ಮನೆಲಿರುವ ಕುರ್ಚಿ ಮೇಜ, ಪಾತ್ರೆ ಪಗಡ ಮುಂತಾದ ಸಾಮಾನ್‌ಗಳನ್ನೆಲ್ಲಾ, ಸ್ವಲ್ಪ ಸ್ವಲ್ಪ ಆಗಿ ತನ್ನ ಮನೆಗೆ ಸಾಗಿಸ್‌ಕಂಡ್‌ತ್. ಸ್ವಲ್ಪ ಸಮಯಲಿ ಅಜ್ಜಿಗೆ ಕಣ್ಣ್ ಲಾಯಿಕ್ ಕಾಂಬಗೆ ಸುರಾತ್. ಆಗ ಡಾಕ್ಟರ್ ಇನ್ನ್ ನಿಮ್ಮ ಚಿಕಿತ್ಸೆ ಮುಗ್ತ್ ಕಣ್ಣ್ ಈಗ ಲಾಯಿಕ್ ಕಂಡದೇ ನಂಗೆ ಪುರಸ್ಕಾರ ಕೊಡಿತ ಕೇಳ್ತ್. ಅಜ್ಜಿ ಪುರಸ್ಕಾರ ಕೊಡುದುಲೆತ ನಿರಾಕರಿಸಿತ್. ಡಾಕ್ಟರಿಗೆ ಸಿಟ್ಟ್ ಬಂದ್ ನ್ಯಾಯಾಲಯಕ್ಕೆ ಹೋತ್. ನ್ಯಾಯಾಧೀಶ ಅಜ್ಜಿನ ಕರ್‌ಸಿ ಕೇಳ್ದೋ ಆಗ ಅಜ್ಜಿ ಹೇಳ್ತ್. ನಾನ್ ಚಿಕ್ತ್ಸೆ ಆರಂಭ ಮಾಡ್‌ಕಾಕನ ನನ್ನ ಮನೆಲಿ ಇದ್ದ ಕುರ್ಚಿ, ಮೇಜ, ಪಾತ್ರೆಗ ಮೊದಲಾದ ಸಾಮಾನ್‌ಗ ಕಾಂಬತ್ತಿತ್ತ್‌ಲೆ. ಹಂಗೆ ಈಗಲ್ಲೂ ಸನ ಕಾಂಬದುಲೆ. ಹಂಗಿರ್ಕನ ನಾನ್ ನನ್ನ ಕಣ್ಣ್ ಪೂರ್ತಿ ಕಂಡದೆತ ಹೇಂಗೆ ತೀರ್ಮಾನ ಮಾಡ್ಲಿತ ಕೇಳ್ತ್. ನ್ಯಾಯಾಧೀಶಂಗೆ ಎಲ್ಲಾ ಅರ್ಥ ಆತ್. ಅಜ್ಜಿನ ಜಾಣ್ಮೆನ ಮೆಚ್ಚಿ ಕಂಡತ್. ಡಾಕ್ಟರ್ ಅವರ ಮನೆಂದ ಸಾಗಿಸಿದ ಎಲ್ಲಾ ವಸ್ತುಗಳ ಪುನಃ ಅಜ್ಜಿಗೆ ಕೊಡ್ಸಿತ್. ಅಜ್ಜಿ ಸನ ಡಾಕ್ಟರಿಗೆ ಪುರಸ್ಕಾರ ಕೊಟ್ಟ್ ಕಳ್ಸಿತ್.

ಅಜ್ಜಿ ತನಗಾದ ಅನ್ಯಾಯಾನ ಎಷ್ಟ್ ಲಾಯಿಕ್ ಪರಿಹಾರ ಮಾಡ್ಸಿಕಂಡತ್ ಅಲ್ಲಾ ಮಕ್ಕಳೆ. ಅಜ್ಜಿ ನಿಜವಾಗಲೂ ತುಂಭಾ ಜಾಣೆ ಅಲ್ಲಾ. ನೀವುಸನ ಕಷ್ಟ ಬಂದರೆ, ಕೂಗಾಡಿ ತಲೆ ಕೆಡ್ಸಿಕಣದೆ ಉಪಾಯಲಿ ಅಜ್ಜಿತರ ಪರಿಹಾರ ಕಂಡ್ ಕಣೊಕು ಆತಾ.

(ನಿಮ್ಮ ಕತೆಗೆ ಜನಮೆಚ್ಚಿ ಪತ್ರ ಬರ್ದೊಳೊ)

- ಮುಂದುವರ್ದದೆ. -ಬಿಟ್ಟೀರ ಚೋಂದಮ್ಮ, ಶಂಭು.

ನಗೆಹನಿಗ

ಮನು : ನಿನ್ನ ಕೂಸೀಗ ಉಗುರು ಯಾಕೆ ಕಚ್ಚುಲೆ ?

ತನು : ಆಗ ನನ್ನ ಕೂಸು ಉಗುರು ಕಚ್ಚ್‌ತ್ತಿತ್ತ್, ಈಗ ಕಚ್ಚುಲೆ

ಮನು : ಅದೆಂಗೆ ?

ತನು : ಕೂಸ್‌ನ ಹಲ್ಲ್‌ನ ಪೂರ ಕೀಳ್ಸಿಬಿಟ್ಟೆ.

ಮನುಷ್ಯನಲ್ಲಿ ಅಡಕವಾಗಿರುವ ದೈವತ್ವವನ್ನು ಹೊರಗೆಡುವುದು ಶಿಕ್ಷಣ

ಗೌಡ ಜನಾಂಗದಲ್ಲಿ ಖೆಡ್ಡಾಸ ಆಚರಣೆ

ಭೂಮಿ ತಾಯಿಗೆ ಪೊನ್ನಿ ತಿಂಗಳಿನಿಂದ ವರುಷ ಸುರು.

ಜನಪದರಲ್ಲಿ ಹಬ್ಬ ಹರಿದಿನಗಳು ಸಾಮಾನ್ಯವಾಗಿ ನೈಸರ್ಗಿಕ ವಾರ್ಷಿಕ ಆವರ್ತನದಲ್ಲಿ ಆಚರಣೆಗೊಳ್ಳುತ್ತವೆ. ಅದರಲ್ಲೂ ಸಮೃದ್ಧಿ ಮತ್ತು ಫಲಾಪೇಕ್ಷೆಯ ಆಶಯವುಳ್ಳ ಆಚರಣೆಗಳು ಪ್ರಕೃತಿಯೊಂದಿಗೆ ನಿಕಟ ಸಂಬಂಧವನ್ನು ಪಡೆದಿರುತ್ತವೆ. ಹಾಗೆಯೇ ಜೀವನ ನಿರ್ವಹಣೆಯ ಕ್ಷೇತ್ರ ಮಾಧ್ಯಮದಲ್ಲಿಯೇ ವ್ಯಕ್ತ ರೂಪವನ್ನು ಪಡೆಯುತ್ತವೆ. ಇಂತಹ ಹಲವು ಅಭಿವ್ಯಕ್ತ ರೂಪಗಳಲ್ಲಿ ಖೆಡ್ಡಾಸ ಆಚರಣೆಯೂ ಒಂದು. ಈ ಆಚರಣೆಯ ಹುಟ್ಟು ಸ್ವರೂಪವನ್ನು ಗಮನಿಸಿದಾಗ ಫಲಾಪೇಕ್ಷೆಯ ಆಶಯ ಸಾಂಕೇತಿಕವಾಗಿ ಸುವ್ಯಕ್ತವಾಗುತ್ತದೆ.

ಖೆಡ್ಡಾಸವೆಂದರೆ ಜನಪದರಿಗೆ ರಸ ಜ್ವಾಲೆಯಾದ ನೆಲ ತಾಯಿಯನ್ನು ಪರಿಶುದ್ಧಗೊಳಿಸಿ ಮನೆಯೊಳಗೆ ಬರಮಾಡಿ ಕೊಳ್ಳುವ ಸುದಿನ. ತಾನು ನಂಬಿ ಆರಾಧಿಸುವ ದೇವರುಗಳಿಗೂ ಸಾಮಾನ್ಯ ಮಾನವರ ದೈಹಿಕ ಹಾಗೂ ಮಾನಸಿಕ ಪ್ರತಿಕ್ರಿಯೆ ಗಳಿರುತ್ತವೆಯೆಂದು ಆರೋಪಿಸುವುದು ಜನಪದರಲ್ಲಿ ಸಾಮಾನ್ಯ ಅಂಶ. ಈ ಅರ್ಥದಲ್ಲಿ ನೆಲತಾಯಿ ವರ್ಷಕ್ಕೊಮ್ಮೆ ರಸಜ್ವಾಲೆ ಯಾಗುತ್ತಾಳೆಂಬ ಪೌರಾಣಿಕ ನಂಬಿಕೆಯನ್ನು ಅಳವಡಿಸಿದ್ದಾರೆ. ಸಾಮಾನ್ಯವಾಗಿ ಪಿತೃ ಪ್ರಧಾನ ಕುಟುಂಬಗಳಲ್ಲಿ ಮೂರು ದಿನಗಳಲ್ಲಿ ಹಾಗೂ ಮಾತೃ ಪ್ರಧಾನ ಕುಟುಂಬಗಳಲ್ಲಿ ನಾಲ್ಕು ದಿನಗಳಲ್ಲಿ ಈ ಖೆಡ್ಡಾಸ ಆಚರಣೆಯಾಗುತ್ತದೆ. ಹೀಗೆ ಜನಾಂಗಿಕ ಹಾಗೂ ಪ್ರಾದೇಶಿಕ ವ್ಯತ್ಯಸ್ತತೆಯಲ್ಲಿ ಆಚರಿಸಲ್ಪಡುವ ಈ ಹಬ್ಬ ಅರೆಗನ್ನಡ ಭಾಷೆಯ ಪೊನ್ನಿ ತಿಂಗಳ 27 ನೇ ದಿನದಿಂದ ಆರಂಭವಾಗುತ್ತದೆ. ಮುಖ್ಯವಾಗಿ ಆಯಾಯ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣು ಬಹಿಷ್ಟೆಯಾದಾಗ ಎಷ್ಟು ದಿನದ 'ಸೂತಿಕಾ'ಚರಣೆಯನ್ನು ಆಚರಿಸುತ್ತಾಳೆಯೋ ಅದನ್ನು ಅನುಸರಿಸಿ ಈ ಹಬ್ಬದ ಆಚರಣೆಯಾಗುತ್ತದೆ.

ಖೆಡ್ಡಾಸದ ಮೊದಲ ದಿನ ಮನೆಯನ್ನು ಸಾರಿಸಿ ಶುದ್ಧಿ ಮಾಡಲಾಗುತ್ತದೆ. ಅಂಗಳದ ಒಂದು ಭಾಗದಲ್ಲಿ ತುಳಸಿಕಟ್ಟೆಯ ಹತ್ತಿರವೂ ಆಗಬಹುದು. ಸೆಗಣಿ ಸಾರಿಸಿ ಭಸ್ಮದಿಂದ ಚೌಕ ಬರೆಯಬೇಕು. ಚೌಕ ಬರೆದ ಆವರಣದಲ್ಲಿ ಹರಳು, ಉರಿದ ಅಕ್ಕಿಯ ಪುಡಿ ಬೆಲ್ಲ ಇತ್ಯಾದಿಗಳನ್ನು ಅಗ್ರ ಭಾಗದ ಬಾಳೆಲೆಯಲ್ಲಿ ಇಡುತ್ತಾರೆ. ಇವೆಲ್ಲಾ ಪುಷ್ಟಿಗೆ ಸಂಬಂಧಿಸಿದ ಪೌಷ್ಟಿಕ ಪದಾರ್ಥಗಳು ಸಂಕೇತಗಳು. ಋತುಮತಿಯಾದ ಕನ್ಯೆಗೆ 'ಮದ್ದು' ಆಡುವ ಹಾಗೆ. (ಮೆತ್ತೆ ಆಡುವುದು) ಇದನ್ನೆಲ್ಲ ಸಮರ್ಪಿಸಿದ ತರುವಾಯ ಕುಟುಂಬದ ಸದಸ್ಯರು ಹಂಚಿ ತಿನ್ನುತ್ತಾರೆ. ಈ ದಿನ ಮಧ್ಯಾಹ್ನದ ಊಟಕ್ಕೆ ನುಗ್ಗೆ ಮತ್ತು ಬದನೆಕಾಯಿ ಮಿಶ್ರಿತ ಮೇಲೋಗರ ಅವಶ್ಯವಾಗಬೇಕು. ಇವುಗಳು ಇಲ್ಲಿ ಮಾಂಸದೂಟಕ್ಕೆ ಸಂವಾದಿಯಾಗಿ ಬಳಕೆಯಾಗುತ್ತವೆ.

ಎರಡನೆಯ ದಿನವನ್ನು 'ನಡು ಖೆಡ್ಡಾಸ' ವೆಂದು ಕರೆಯಲಾಗುತ್ತದೆ. ಈ ದಿನದ ಮುಖ್ಯ ಚಟುವಟಿಕೆ ಬೇಟೆಯಾಡುವುದು. ಬೇಟೆ ಮಾಡುವ ವಿಚಾರವನ್ನು ಹಾಗೆಯೇ ಖೆಡ್ಡಾಸ ಆಚರಣೆಯ ನಿಗದಿತ ದಿನವನ್ನು ನಲಿಕೆಯವ (ಅಜಲಾಯ) ತನ್ನ ಹೆಗಲ ಮೇಲೆ ಹಾಕಿಕೊಂಡ 'ತೆಂಬರೆ'ಯನ್ನು ಬಡಿಯುತ್ತಾ ಹಿಂದೆಯೇ ಮನೆ ಮನೆಗೆ ಮುಟ್ಟಿಸಿರುತ್ತಾನೆ. ಅವನು ಮುಖ್ಯವಾಗಿ "ಆಂಜೇವುನಕುಳು ಕಡೆಪಿಕಲ್ ನೀರ್‌ಗ್ ನೂಕುಲೆ ಪೊಂಜೇವುನಕುಳು ಉಜ್ಜೇರ್ ಪತ್ತ್‌ದ್ ಬೋಂಟೇಗ್ ಪಿದಾಡ್ಲೆ...." ಹೀಗೆ ಸವಿಸ್ತಾರವಾಗಿ ಬೇಟೆಗೆ ಬೇಕಾದ ಎಲ್ಲಾ ಸಿದ್ಧತೆಗಳ ಬಗ್ಗೆ ವ್ಯತಿರಿಕ್ತ ವ್ಯಂಗ್ಯವಾಗಿ ಹೇಳುತ್ತಾನೆ. ಅಲ್ಲದೆ ತನಗೆ ಬೇಕಾಗುವ ಮುಖ್ಯ ಅಡುಗೆ ಸಾಮಾಗ್ರಿಗಳನ್ನು ಸಂಗ್ರಹಿಸುತ್ತಾನೆ. ಅವನು ಹೇಳುವ ಮಾತುಗಳಲ್ಲಿ ವ್ಯಂಗ್ಯ ಜನಪದ ಜೀವನ ಕ್ರಮದಲ್ಲಿರುವ ಹಾಸ್ಯ ಪ್ರವೃತ್ತಿಯನ್ನು ಅಭಿವ್ಯಕ್ತಿಸುತ್ತದೆ.

ಖೆಡ್ಡಾಸ ಎಂಬ ಶಬ್ದ ಬೇಟೆಯ ಪರಿಕಲ್ಪನೆಯನ್ನು ವ್ಯಂಜಿಸುತ್ತದೆ. ಬೇಟೆಯು ಈ ಹಬ್ಬದ ಉಪಾಂಗವಾಗಿರು ವುದರಿಂದ ಆ ಆಚರಣೆಗೆ ಖೆಡ್ಡಾಸವೆಂಬ ನಾಮಕರಣ ಬಂದಿರು ವುದನ್ನು ಊಹಿಸಬಹುದು. ಖೆಡ್ಡಾಸದ ದಿನಗಳಲ್ಲಿ ಕಾಡು ಪ್ರಾಣಿಗಳಿಗೆ 'ಕಾಲುಗುಂಟ' (ಕಾಲು ಒಡೆಯುವುದು) ಬರುತ್ತದೆ. ಹಾಗಾಗಿ ಸುಲಭದಲ್ಲಿ ಬೇಟೆ ಮಾಡಬಹುದೆಂಬ ನಂಬಿಕೆ. ಋತುಮಾನದ ವ್ಯತ್ಯಾಸದಿಂದ ಇದು ಸಂಭವನೀಯವಾದರೂ, ತಮ್ಮ ಬೇಳೆಕಾಳುಗಳಿಗೆ ತೊಂದರೆ ಕೊಡುವ ಮೃಗಗಳನ್ನು ಬೇಟೆ ಮಾಡಲು ಅವಕಾಶವಾಗುವುದರ ಜೊತೆಗೆ ಮನೋರಂಜನೆಯ ಉದ್ದೇಶವೂ ಅಡಗಿದೆ. ಈ ಸಂದರ್ಭದಲ್ಲಿ ಮಾಂಸದೂಟ ಮಾಡದಿದ್ದರೆ ಎಲುಬು ನುಗ್ಗು ನುರಿಯಾಗುತ್ತದೆಂಬ ನಂಬಿಕೆಯು ಗೌಡ ಜನಾಂಗದಲ್ಲಿ ಇದೆಯಾದ್ದರಿಂದ ಸಾಮೂಹಿಕವಾಗಿ ಜನ ಒಂದು ಕಡೆ ಸೇರುವುದಕ್ಕೆ ಅವಕಾಶವೂ ಲಭ್ಯವಾಗುತ್ತದೆ.

ಖೆಡ್ಡಾಸದ ಮೂರನೆಯ ದಿನ ಕುಂಭ ಸಂಕ್ರಮಣ ಕ್ಕಾಗುತ್ತದೆ. ಪ್ರಾತಃಕಾಲ ಕೋಳಿ ಕೂಗುವ ಮೊದಲು ಮೊದಲ ದಿನ 'ಚೌಕ'ಬರೆದ ಜಾಗದಲ್ಲಿ ಸ್ನಾನ ಮಾಡಿ 'ಮಡಿ'ಯಾದ ಮುತ್ತೈದೆ ಸ್ತ್ರೀ ಸಿದ್ಧಳಾಗುತ್ತಾಳೆ. ಏಳು ಸರೋಳಿ ಎಲೆ. ಏಳು ಮಾವಿನ ಎಲೆಗಳನ್ನು ಪಶ್ಚಿಮದ ಕಡೆ ತುದಿ ಬಾಗ ಬರುವ ಹಾಗೆ ಜೋಡಿಸಿ ಇಡುತ್ತಾಳೆ. ಗೆರೆಟೆಯಲ್ಲಿ ಸೀಗೆ, ಕುರ್ದಿ (ಅರಶಿನ ಮಿಶ್ರಿತ ನೀರು) ತೆಂಗಿನಕಾಯಿಯಿಂದ ಹಿಂಡಿ ತೆಗೆದ ಹಾಲು, ಮೂರು ಕುಡಿ ಗರಿಕೆ ಹುಲ್ಲಿನೊಂದಿಗೆ ಇಡುತ್ತಾರೆ. ತೆಂಗು ಅಥವಾ ಕಂಗಿನ ಗರಿಯಿಂದ ಮಾಡಿದ 'ಚೆರಿಯೆ'ಯಲ್ಲಿ ತಂಬಿಗೆ ನೀರನ್ನೂ ಪಕ್ಕದಲ್ಲಿ ಮಣೆಯೊಂದನ್ನು ಪೀಠಕ್ಕಾಗಿ ಇಡುತ್ತಾರೆ. ನೆಲ ತಾಯಿಯ ಅಲಂಕಾರಕ್ಕಾಗಿ ಕುಂಕುಮ, ಕನ್ನಡಿ, ಆಭರಣಗಳನ್ನು ಇರಿಸುತ್ತಾರೆ. ಇಷ್ಟೆಲ್ಲಾ ಪರಿಕರಗಳನ್ನು ಜೋಡಿಸಿಯಾದ ನಂತರ ಸೀಗೆ, ಹಾಲನ್ನು ಗರಿಕೆ ಹುಲ್ಲಿನ ಕುಡಿಯಿಂದ ಮನುಷ್ಯನ

ಶರೀರವನ್ನು ಸವರುವಂತೆ ನೆಲವನ್ನು ಸವರುತ್ತಾರೆ. ನೀರಿನಿಂದ ಓಕುಳಿ ಮಾಡುತ್ತಾರೆ. ಈ ಕ್ರೀಯಾ ವಿಧಾನದ ಕೊನೆಯಲ್ಲಿ ಭೂಮಿಗೆ 'ಎಣ್ಣೆ ಹೊಯ್ಯು'ತ್ತಾರೆ. ಇದು ಖೆಡ್ಡಾಸದ ಪ್ರಧಾನ ಅಂಗವು ಆಗಿದೆ. ಹೀಗೆ ಮಿಂದು ಪರಿಶುದ್ಧಳಾದ ಪುಷ್ಪವತಿ ನೆಲತಾಯಿಯನ್ನು ಫಲವತಿಯಾಗಲು ಮನೆಯೊಳಗೆ ಬರಮಾಡಿಕೊಳ್ಳುವ ಪರಿಶುದ್ಧಗೊಳಿಸುವ ರೀತಿಯಲ್ಲಿ ಸಾಂಕೇತಿಕವಾಗಿ ಮುತ್ತೈದೆಯಾದ ಮನೆಯೊಡತಿ ಕಾರ್ಯ ನಿರ್ವಹಿಸುತ್ತಾಳೆ.

ಮಡಿ ಮಿಂದ ತಾಯಿಯನ್ನು ಬರಮಾಡಿಕೊಂಡ ತರುವಾಯ ಅಡುಗೆ ಮನೆಯ ಒಂದು ಭಾಗದಲ್ಲಿ ವಿವಿಧ ಬಗೆಯ ತರಕಾರಿಗಳಿಂದ ಮಾಡಿದ ಮೇಲೋಗರ ಹಾಗೂ ಅಕ್ಕಿಯಿಂದ ಮಾಡಿದ ತಿನಿಸುಗಳನ್ನು ಅಗ್ರ ಬಾಳೆಲೆಯಲ್ಲಿ ಬಡಿಸಿ, ಪಕ್ಕದಲ್ಲಿ ತಂಬಿಗೆ ನೀರನ್ನು ಇಟ್ಟು ನೆಲತಾಯಿಗೆ ಅರ್ಪಿಸಿ ಸಂಪತ್ತು ಹಾಗೂ ಸಂತಾನ ಸಮೃದ್ಧಿಯನ್ನು ಪಾಲಿಸಬೇಕಾಗಿ ಕೇಳಿಕೊಳ್ಳುತ್ತಾರೆ. ಇಲ್ಲಿಗೆ ಖೆಡ್ಡಾಸ ಆಚರಣೆಯು ಮುಗಿಯುತ್ತದೆ.

ಖೆಡ್ಡಾಸದ ಕ್ರಿಯಾಚರಣೆಯಲ್ಲಿ ಸ್ತ್ರೀಯರದ್ದೆ ಕೈವಾಡ ವಾದರೂ, ಆ ದಿನಗಳಲ್ಲಿ ಸ್ತ್ರೀ ಬಹಿಷ್ಠೆಯಾದರೆ ದೋಷವೆಂಬ ನಿಷೇಧವಿದೆ. ಅಂತಹವಳು ಊಟ ಮಾಡುವಾಗ ಎಂಜಲು ನೆಲಕ್ಕೆ ಬೀಳಬಾರದು. ಅವಳು ಊಟ ಮಾಡಿದ ಎಲೆಯನ್ನು ಮರದ ಕೊಂಬೆಯ ಸಂಧಿನಲ್ಲಿಡಬೇಕು. ಇಲ್ಲಿ ನೆಲತಾಯಿ ರಸಜ್ವಾಲೆ ಯಾದಾಗ ಇತರ ಸ್ತ್ರೀಯರು ರಸಜ್ವಾಲೆಯರಾದರೆ ಅವಳಿಗೆ ಕೋಪ ಬರುತ್ತದೆಯೆಂಬ ನಂಬಿಕೆ. ಆದರೆ ವರ್ತಮಾನದಲ್ಲಿ ಬಹಿಷ್ಠೆಯಾಗುತ್ತಿರುವ ಹೆಣ್ಣೆ ನೆಲತಾಯಿಯನ್ನು ಶುದ್ಧೀಕರಿಸ ಬೇಕು. ಬಹಿಷ್ಠಾವಧಿಯಿಂದ ಹೊರಗುಳಿಯುವ ಯಾವ ಸ್ತ್ರೀ ಕೂಡ ಇದಕ್ಕೆ ಅರ್ಹಳಲ್ಲ ಸಾಮಾನ್ಯವಾಗಿ 'ಸೂತಿಕ' ವೆಂದರೆ ದೋಷ. ಆದರೆ ಇಲ್ಲಿ ಶುದ್ಧೀಕರಿಸಿದ ನಂತರ ದೋಷವೂ ಶುಭಕ್ಕೆ ನಾಂದಿಯೆಂಬ ಮನಸ್ಸು ಕಾರ್ಯ ಮಾಡುತ್ತದೆ. ಆದ್ದರಿಂದ ಬಹಿಷ್ಠೆಯಾಗಲು ಅರ್ಹತೆ ಇರುವ ಹೆಣ್ಣೆ ಫಲವತಿಯಾಗಲು ಯೋಗ್ಯಳು ಎಂಬ ವಸ್ತು ಸ್ಥಿತಿಯಲ್ಲಿ ಅಂತಹ ಸ್ತ್ರೀಯೆ ಈ ಕ್ರಿಯಾಚರಣೆಯಲ್ಲಿ ಪಾಲುಗೊಳ್ಳುವುದರಿಂದ ನೆಲ ತಾಯಿಗೆ ಅವಳ ಅರ್ಹತೆ ಆರೋಪಿಸಲ್ಪಟ್ಟಿರುವುದನ್ನು ಗಮನಿಸಬಹುದು.

ಖೆಡ್ಡಾಸ ಆಚರಣೆಯಾಗುವ ಸಂದರ್ಭವನ್ನು ವಾರ್ಷಿಕ ಆವರ್ತನದ ಹಿನ್ನಲೆಯಲ್ಲಿ ವಿಶ್ಲೇಷಣೆಗೆ ತೆಗೆದುಕೊಂಡಾಗ, ಸಾಮಾನ್ಯ ಭತ್ತವೇ ಪ್ರಧಾನ ಕೃಷಿ ಮಾಡುವ ಜನಪದರಿಗೆ (ತುಳುವರಿಗೆ) ಇದು ಸುಗ್ಗಿಯ ಕಾಲ. ಈ ಕಾಲದಲ್ಲಿ ಸುಗ್ಗಿ ಬೆಳೆಯ ಕಟಾವು ಹೆಚ್ಚು ಕಡಿಮೆ ಮುಗಿದಿರುತ್ತದೆ. ಇಲ್ಲಿಗೆ ಒಂದು ವರ್ಷದ ಎರಡನೆಯ ಬೆಳೆಯ ಸಂಗ್ರಹ ಕಾರ್ಯವು ಮುಗಿದಿರುತ್ತದೆ. ಮುಂದೆ ಏನಿದ್ದರೂ ಮುಂದಿನ ವಾರ್ಷಿಕ ಆವರ್ತನದ ಪ್ರಥಮ ಬೆಳೆಗೆ ಭೂಮಿಯನ್ನು ಹದಗೊಳಿಸುವ ಕಾಲ ಏಣೆಲ್ ಬೆಳೆ ಇಲ್ಲಿಂದಲೇ ಆರಂಭವಾಗುವುದು ಹಾಗಾಗಿ ರಜಸ್ವಲೆಯಾದ ಹೆಣ್ಣು ಹೇಗೆ ಪರಿಶುದ್ಧಳಾದ ನಂತರ ಗರ್ಭವತಿಯಾಗಲು ಅರ್ಹಳಾಗು ತ್ತಾಳೆಯೋ ಹಾಗೆಯೇ ಮುಂದಿನ ಫಲವನ್ನು ಕೊಡಲು ಭೂಮಿ ತಾಯಿ ರಜಸ್ವಲೆಯಾಗಿ ಪರಿಶುದ್ಧಗೊಳ್ಳಬೇಕು ಎಂಬ ಜನಪದರ ಆಶಯ ಈ ಆಚರಣೆಯಲ್ಲಿ ಕಲ್ಪಿತಗೊಂಡಿದೆ.

ಋತು ಮಾನಕ್ಕನುಗುಣವಾಗಿ ವ್ಯತ್ಯಾಸಗೊಳ್ಳುವ ಪ್ರಕೃತಿಯ ವೈಖರಿಯನ್ನು ಗಮನಿಸಿದಾಗ ಈ ಋತುಮಾನ ಶಿಶಿರ ಋತು ಅಂತ್ಯಗೊಂಡು ವಸಂತಕಾಲ ಆರಂಭಗೊಳ್ಳುವ ಸಂದರ್ಭವಾಗಿದೆ. ಶಿಶಿರದಲ್ಲಿ ಹಣ್ಣೆಲೆಗಳನ್ನು ಕಳಚಿಕೊಂಡ ಮರಗಿಡಗಳು ಮತ್ತೆ ಚಿಗುರು ಬಿಡುವ ಸಂಕ್ರಮಣ ಕಾಲಕ್ಕೆ ಕಾಲಿಡುತ್ತವೆ. ತಣ್ಣನೆಯ ಗಾಳಿ ಬೀಸಲು ಆರಂಭಿಸುತ್ತದೆ. ಇದನ್ನು ಖೆಡ್ಡಾಸದ ಕರೆಗಾಳಿಯೆಂದೇ ಕರೆಯಲಾಗುತ್ತದೆ. ವಸಂತಾಗಮನದ ಚೈತನ್ಯದಿಂದಿರುವ ಪ್ರಕೃತಿ ಹೆಣ್ಣು ಈ ಗಾಳಿಯ ಸ್ಪರ್ಶದಿಂದ ಪುಲಕಿತಗೊಂಡು ಫಲದಾಯಿಯಾಗಬೇಕಾದ್ದು ಅನಿವಾರ್ಯ. ಹೀಗೆ ಶಿಶಿರದಲ್ಲಿ ನಿಶ್ಯಕ್ತಿಯಿಂದ ಸೊರಗಿದ ಪ್ರಕೃತಿ ಮತ್ತೆ ವಸಂತದಲ್ಲಿ ಫಲ ಕೊಡಲು ಪುಷ್ಪಿಯಾಗಬೇಕು ಎಂಬಂಶ ವನ್ನು ಈ ಆಚರಣೆಯ ಹಿನ್ನೆಲೆಯಲ್ಲಿ ಗುರುತಿಸಬಹುದು.

ಈ ರೀತಿ ಹೊಸ ಚೈತನ್ಯಕ್ಕೆ ನಾಂದಿಯಾಗಬೇಕಾದ ಪ್ರಕೃತಿಯನ್ನು ಆರಾಧಿಸುವ ಖೆಡ್ಡಾಸಕ್ಕೆ ಸಂಬಂಧಿಸಿ ಕೆಲವು ನಿಷೇಧಗಳು ಇವೆ. ಈ ದಿನಗಳಲ್ಲಿ ಭೂಮಿಯನ್ನು ಊಳಬಾರದು, ಅಗೆಯಬಾರದು, ಪುರುಷರಿಗೆ ರಿಯಾಯಿತಿ ಇದ್ದರೂ ಸ್ತ್ರೀಯರು ಭಾರ ಹೆಜ್ಜೆಗಳನ್ನು ಇಡಬಾರದು. ನೆಲತಾಯಿಗೆ ನೋವಾದರೆ ಬಂಜೆಯಾಗುತ್ತಾಳೆ. ತುಳುವಿನಲ್ಲಿ 'ಪಜಿ ಕಡ್ಪರ ಬಲ್ಲಿ, ನುಂಗೆಲ್ ಪೊಲ್ಪರ ಬಲ್ಲಿ' ಎಂಬ ಮಾತೆ ಇದೆ. ಈ ಖೆಡ್ಡಾಸ ಆಚರಣೆ ಎಲ್ಲಾ ಮತ ಧರ್ಮದ ಜನರಲ್ಲಿ ಇಲ್ಲದೆ ಇದ್ದರೂ ಗೌಡ ಜನಾಂಗವು ಮಾತ್ರ ಆಚರಿಸಲಿದ್ದು, ಸಾಮೂಹಿಕವಾಗಿ ಕೃಷಿ ಸಾಧನ ಸಾಮಾಗ್ರಿಗಳು ಮಾತ್ರ ಈ ದಿನಗಳಲ್ಲಿ ವಿಶ್ರಾಂತಿ ಪಡೆಯುತ್ತವೆ.

ಒಟ್ಟಿನಲ್ಲಿ ಬೆಳೆ ಮೊಳಕೆ ಒಡೆಯುವಂತೆ ಭೂಮಿತಾಯಿ ಯನ್ನು ಆರಾಧಿಸುವ ಈ ಖೆಡ್ಡಾಸ ತನ್ನ ಕ್ರಿಯಾರೂಪದಲ್ಲಿ ಇತ್ತೀಚೆಗೆ ಸಡಿಲಗೊಂಡಿದ್ದರೂ ಫಲಾಪೇಕ್ಷೆಯ ಅಭೀಷ್ಠೆ ಮಾತ್ರ ಸಾಂಕೇತಿಕವಾಗಿ ಮೂಲ ರೂಪದಲ್ಲಿಯೇ ಅಡಗಿದೆ.

- ಶ್ರೀ ಕೆ. ಪೂವಪ್ಪ ಕಣಿಯೂರು, ಕನ್ನಡ ಉಪನ್ಯಾಸಕರು,
ನೆಹರೂ ಸ್ಮಾರಕ ಮಹಾವಿದ್ಯಾಲಯ, ಸುಳ್ಯ.

"ರಂ" ಪ್ರಭಾವ

ಹುಟ್ಟಿದ್ದು ಸಿದ್ದಾಪುರಂ,
ಬೆಳೆದದ್ದು ಮಲ್ಲೇಶ್ವರಂ,
ಓದಿದ್ದು ಶೇಷಾದ್ರಿಪುರಂ,
ಇಷ್ಟೆಲ್ಲಾ "ರ"ಂಗಳ ಪ್ರಭಾವ ಇದ್ರೂ
ವಂದೇ ಮಾತರಂ ಹೇಳಿಸ್ಬೇಕಂದ್ರೆ
ಬಿಡಬೇಕು ನಮ್ಮ ಯುವ ಜನಾಂಗ
ಬ್ರಾಂದಿ, ವಿಸ್ಕಿ, ರಂ.

-ಕಲ್ಲುಮುಟ್ಲು ಅಶೋಕ್ ಮನು, ಸಿದ್ದಾಪುರ.

ಭೂಮಿತಾಯಿಯನ್ನು ಆರಾಧಿಸುವವರಾದ್ದರಿಂದ ಗೌಡರು ಭೂಮಿಗೊಡೆಯರು

ಬಾಲ ಸಂಗಾತಿ ವಿಭಾಗ, ಜ್ಞಾನ - 8

ಶಾಲೇಲಿ ಹೇಳಿಕೊಟ್ಟಿದ್ದೆಲ್ಲಾ ನಿಜ ಅಲ್ಲಾ

ಪ್ರಾಚೀನ ಭಾರತಲಿ ವಿಜ್ಞಾನ ಈಗ ಬೆಳ್ದಂಗೆ ಬೆಳ್‌ದಿತ್ತ್‌ಲೆ. ಆದರೆ ಆಗಿನ ಕಾಲದ ಗ್ರೀಕ್ ವಿಜ್ಞಾನಕ್ಕಿಂತ ಅದ್ ಬಾಳ ಮುಂದೆ ಇತ್ತ್. ಭಾರತದ ತತ್ವಜ್ಞಾನಿಗ ಕಷ್ಟ ಇಲ್ಲದೆ ಸಾಧಿಸಿದ ಎಷ್ಟೋ ವಿಷಯಗಳ್ನ ಆಧುನಿಕ ವಿಜ್ಞಾನಿಗ ಬಾಳ ಕಾಲದ ಪರಿಶ್ರಮಂದ ಕಂಡ್‌ಕಂಡೊ. ಉದಾಹರಣೆಗೆ, ಪರಮಾಣು ಸಿದ್ಧಾಂತವೇ ತಕಣೊ. ಪರಮಾಣುನ ಬಗೆಗೆ ಹಿಂದೂ ದರ್ಶನಗ ವಸ್ತು ನಿಷ್ಠವಾಗಿ ವಿಮರ್ಶೆ ಮಾಡ್ಯೊಳೊ. ಆಧುನಿಕ ವಿಜ್ಞಾನ ಬೆಳ್ದ ಹಾದಿಲಿ ಡೆಮೋಕ್ರ್ಯಾಟ್‌ತ್ತೇಳುವ ವಿಜ್ಞಾನಿವರೆಗೂ ಪರಮಾಣು ಅವಿಭಾಜ್ಯತ್ತೇಳಿ, ಇದೇ ಅಂತಿಮ ಅವಯವತ. ಅದ್‌ಕೆ ಬೇರೆ ಯಾವ ಅವಯವವೂ ಇಲ್ಲೆತ್ತೇಳಿ ಸಾರ್‌ತಿದ್ದೊ. ಆದರೆ ಪರಮಾಣುಲಿ ಎಲೆಕ್ಟ್ರಾನ್‌ಗತ್ತೇಳುವ ಅವಯವಗ ಕಾಂಬಕೆ ಸುರಾಕನ ಆ ಸಿದ್ಧಾಂತನೇ ಬದ್‌ಲಾತ್. ಮತ್ತೆ ಪರಮಾಣುಗೂ ಅವಯವಗ ಉಟ್ಟುತ ತೋರಿಸಿದೊ. ಅದ್ ಸನ ಕೆಲವು ಕಾಲದವರೆಗೆ, ಎಲೆಕ್ಟ್ರಾನ್, ನ್ಯೂಟ್ರಾನ್, ಪ್ರೋಟಾನ್‌ಗ ನಿರ್ದಿಷ್ಟ ಸಂಖೆಲಿ ಉಟ್ಟುತ ಹೇಳ್‌ತಿದ್ದೊ. ವಿಜ್ಞಾನ ಬೆಳ್ದಂಗೆ ಎಲ್ಲಾ ವಾದಗ ಹಿಂದೆ ಬಿದ್ದೊ. ಇಂದ್ ಪರಮಾಣು ಸನ, ಅನಂತ (Infinite) ತ ಸಿದ್ಧಾಂತ ಮಾಡ್ಯೊಳೊ.

ಆಕಾಶಲಿ ಎಲ್ಲಾ ಗ್ರಹಗ ಸೂರ್ಯನ ಗುರುತ್ವಾಕರ್ಷಣೆಗೆ ಒಳಗಾಗಿ ನಿರಂತರ ಆಗಿ, ಸುತ್ತುವಂತೆ ಪರಮಾಣುನ ಸುತ್ತ ಅನಂತ ಸೂಕ್ಷ್ಮಾತಿಸೂಕ್ಷ್ಮ ಅವಯವಗ ಸುತ್ತಿಕಂಡೇ ಒಳೊ. ಅದರಿಂದನೇ ಒಂದು ಪರಮಾಣುಲೂ ಅನಂತ ಶಕ್ತಿ ತುಂಬುಟ್ಟು. ಇಲ್ಲಿ ಆಶ್ಚರ್ಯ ಏನ್‌ತ್ತೇಳ್ರೆ ಈ ಎಲ್ಲಾ ವಿಷಯನೂ ಜೈನ ಮೊದಲಾದ ತತ್ವಶಾಸ್ತ್ರಗ್ರಂಥಗಳ್ಲಿ ವಿವರಿಸ್ಯೊಳೊ. ಜೈನದರ್ಶನದ ಪ್ರಕಾರ ಇಂದಿನ ಎಲೆಕ್ಟ್ರಾನ್ ಅವಯವವೇ "ಪರಮಾಣು". ಇಂತಹ ಪರಮಾಣುಗಳ ಸಂಘಟನೆನೆ "ಅಣು" ಅನಿಸಿಕಂಡದೆ. ಇಂತ ಅಣುಗಳ ಸಂಘಟನೆ ಯಾವ ಯಾವ ಆಕಾರ ವಿಶೇಷಲಿ ಉಂಟಾದೆಯೋ ಆಯಾ ಪದಾರ್ಥಗಳ ನಿರ್ಮಾಣ ಆದೆ. ಉದಾಹರಣೆಗೆ, ಬಂಗಾರಲಿ ಯಾವ ವಿಧಾನ ಅಣು ಸಂಯೋಜನೆ ಉಟ್ಟೊ, ಅದ್ ಪರಮಾಣುಗಳ ಸಂಯೋಜನೆಯಿಂದನೇ ಆದದ್ದ್. ಜೈನ ಸಿದ್ಧಾಂತಲಿ ಪರಮಾಣುಗಳ್‌ಲಿ ಆಕರ್ಷಣ ವಿಕರ್ಷಣ ಶಕ್ತಿನ ಸಮರ್ಥಿಸೊಳೊ. ಆಧುನಿಕ ವಿಜ್ಞಾನಿಗ ಈ ವಿಷಯನ ವಿವರಿಸುವ ಕ್ರಮಲೇ ಜೈನ ಸಿದ್ಧಾಂತವು ವಿವರಿಸಿದೆತ ಹೇಳಿಕೆ ಆದುಲೆ. ಆದರೂ ನಮ್ಮ ಪೂರ್ವಜರ್ ಸಾವಿರಾರ್ ವರ್ಷಗಳ ಹಿಂದೆನೆ ಸೂಕ್ಷ್ಮ ಚಿಂತನೆ ನಡ್‌ಸ್ಯೊತ್ತೇಳ್ದು, ನಿಜಕ್ಕೂ ಸೋಜಿಗದ ಸಂಗತಿ. ನಮ್ಮ ಪ್ರಾಚೀನರ ಪರಮಾಣು ಸಿದ್ಧಾಂತನ ಹೆಚ್ಚಿಗೆ ತಿಳಿಯಕೆ ಇಷ್ಟಪಡವು ಜೈನರ ಸುಪ್ರಸಿದ್ಧ ತಾತ್ವಿಕ ಗ್ರಂಥವಾದ "ಗೌಮಟ ಸಾರ" ಹಾಗೂ "ತತ್ವಾರ್ಥಸೂತ್ರ" ಗ್ರಂಥಗಳ್ನ ಓದಕ್. ಕಣಾದರ ವೈಶೇಷಿಕ ದರ್ಶನ ಸನ ಈ ಹಾದಿಲಿ ಬೆಳ್‌ಕ್ ಚೆಲ್ಲಿದೆ.

ಚಲನೆಯ ಶಾಸ್ತನೂ ಕೂಡ ನಮ್ಮ ಪುರಾತನ ಋಷಿಗ ಅದ್ಭುತ ಆಗಿ ವಿಶ್ಲೇಷಣೆ ಮಾಡ್ಯೊಳೊ. ಹಿಂದಿನವರ್‌ಲಿ ಸಾಮಾನ್ಯ ಆಗಿ ಧ್ವನಿ ವಿಜ್ಞಾನ ಬೆಳ್‌ಕ್‌ನ ವಿಜ್ಞಾನ, ಶಕ್ತಿ ವಿಜ್ಞಾನ ಇತ್ಯಾದಿಗಳಲಿ ಪರಸ್ಪರ ವಿರೋಧವೇ ಇತ್ತ್‌ಲೆ. ಇಲ್ಲಿ ಒಂದೆ ಬಗೆ ಜ್ಞಾನದ ಬೆಸುಗೆ ವಿಜ್ಞಾನದ ಶೃಂಖಲೆನ ಬೆಸ್‌ದದ್ದ್ ಕಂಡ್ ಬಂದದ್ದೆ. ಒಟ್ಟ್‌ಲಿ ಚಲನೆಯಿಲ್ಲದೆ ಯಾವ ಶಕ್ತಿನೂ ಉತ್ಪತ್ತಿ ಆದುಲೆತ ಕಂಡ್‌ಕಂಡಿದ್ದ ಪೂರ್ವಿಕರ ಪರಮಾಣುನ ಒಳಗಿನ ಅವಯವಗಳ್‌ಲೂ ಚಲನೆನ ಅಧ್ಯಯನ ಮಾಡ್ಯೊಳೊ.

ಮುಂದುವರ್ದದೆ.

-ಬಿಟ್ಟೀರ ಚೋಂದಮ್ಮ, ಶಂಭು.

ಹಾಸ್ಯ

ಕುಳ್ಳಂದೊಂದು ಪಿಳ್ಳೆನೆವ

ಒಬ್ಬ ಕುಳ್ಳ ಮನುಷ್ಯ ಬಾರ್ ಒಳಗೆ ಅವನ ಮೇಜದ ಮೇಲ್ ಮಡ್‌ಗಿದ್ದ ಗ್ಲಾಸ್‌ನೇ ನೋಡಿಕಂಡ್ ಕುದ್ದಿತ್ತ್. ಪಾಪ, ಅಂವಂಗೆ ಎಂತ ಬ್ಯಾಜರನೋ ಏನೋ ಮುಖ ಬಾಡಿಸಿಕಂಡ್ ಸುಮಾರ್ ಅರ್ಧ ಗಂಟೆ ಕುದ್ದಲ್ಲೇ ಅಲ್ಲಾಡದೆ ಕುದ್ದ್‌ಕಂಡಿತ್ತ್. ಅಷ್ಟೋತ್ತಿಗೆ ಒಬ್ಬ ಧಾಂಡಿಗ ಲಾರಿ ಡ್ರೈವರ್ ಬಂದ್ ಅವನೆದರ್ ಕುದ್ದಕಂಡತ್ ಕುಳ್ಳ ಮಡಗಿ ಕಂಡಿದ್ದ ಗ್ಲಾಸ್‌ನ ಗಭಕ್‌ತ ಕಿತ್ತಕಂಡ್ ಧಡಿಯ ಒಂದೇ ಗುಟ್‌ಕ್‌ಗೆ ಕುಡ್‌ದ್‌ಬುಟ್ಟಿತ್. ಕುಳ್ಳಂಗೆ ಈಗ ಬ್ಯಾಜರ ತಡಿಯಕ್ಕಾಗದೆ ಅಂವ ಬಿಕ್ಕಿ ಬಿಕ್ಕಿ ಮರ್‌ಡಿಕೆ ಶುರುಮಾಡಿಬುಟ್ಟಿತ್. ಅದನ್ನ ನೋಡಿ ಲಾರಿ ಡ್ರೈವರ್ ಜೋರಾಗಿ ನೆಗಾಡಿಕಂಡ್ ಹೇಳ್ತ್- " ಹೇ ಎಂತ ಮಹರಾಯ ನೀನ್, ಇಷ್ಟ್ ಸಣ್ಣ ವಿಷಯಕ್ಕೆ ಹಿಂಗೆ ಹೆಣನಂಗಾಡಿಯ? ಮೀಸೆ ಹೊತ್ತಂವ ಮರ್‌ಟರೆ ನಂಗೆ ನೋಡಿಕಾದುಲೆ, ನಿಂಗೆ ಎಷ್ಟ್ ಕಳ್ಳ್ ಬೇಕೋ ನಾನ್ ಕುಡ್ಸಿನೆ".

"ನಾನ್ ಅದ್‌ಕ್ಕಲ್ಲ ಮರ್‌ಡ್‌ತಾ ಇರ್ದು " ಕುಳ್ಳ ಹೇಳ್ತ್,

"ಇಂದ್ ನನ್ನ ಜೀವನಲೇ ಅತ್ಯಂತ ದುಃಖದ ದಿನ"

"ಮೊದಲಿಗೆ ನಾನ್ ಬೆಳಿಗ್ಗೆ ಲೇಟಾಗಿ ಎದ್ದ್ ಬುಟ್ಟೆ,

ಆಫೀಸ್‌ಲಿ ಒಂದು ಅರ್ಜೆಂಟ್ ಮೀಟಿಂಗ್‌ಗೆ ಲೇಟಾಗಿ ಹೋದೆ. ನನ್ನ ಬಾಸ್‌ಗೆ ಸಿಟ್ಟ್ ಬಂದ್ ಅಂವ ನನ್ನ ಕೆಲಸಂದ ತೆಗ್ದ್ ಹಾಕಿ ಬುಟ್ಟಿತ್. ಆಫೀಸ್‌ದ ಮನೆಗೆ ಬರ್ತಾ ಇರ್‌ಕಾಕನ ನನ್ನ ಕಾರ್‌ಗೆ ಆಕ್ಸಿಡೆಂಟ್ ಆಗಿ ಹೋತ್. ಕಾರ್ ಈಗ ಸ್ಟೇಷನಲಿ ಉಟ್ಟು. ಸ್ಟೇಷನ್‌ದ ಟ್ಯಾಕ್ಸಿ ಮಾಡಿಕಂಡ್ ಮನೆಗೆ ಬಂದ್ ನೋಡಿರೆ ಯಾರೋ ನನ್ನ ಜೇಬ್‌ಲಿದ್ದ ಪರ್ಸ್ ಕದ್ದ್‌ಬುಟ್ಟಿದ್ದೊ. ಸರಿ, ಹೆಣ್ಣ್‌ಗೆ ಹೇಳಿ ಟ್ಯಾಕ್ಸಿ ಡ್ರೈವರ್‌ಗೆ ದುಡ್ಡ್ ಕೊಡಿಸಿಕೆ ಅವಳ್ನ ಹುಡ್‌ಕಾಡ್‌ದೆ. ನೋಡಿರೆ ಅವಳು ಹತ್ರದ ಮನೆಯವನೊಟ್ಟಿಗೆ ಓಡಿಹೋಗಿಬುಟ್ಟಿತ್ತ್‌ತೇಳಿ ಗೊತ್ತಾತ್. ನಂಗೆ ತುಂಬಾ ದುಃಖ ಆಗಿ ಬಾರ್‌ಗೆ ಬಂದೆ. ವಿಷ ಕುಡ್‌ದ್ ಪ್ರಾಣ ಕಳ್‌ಕಂಡ್ ಬುಡೊಕುತೇಳಿ ಯೋಚನೆ ಮಾಡಿಕಂಡಿರ್‌ಕಾಕನ ನೀನೊಬ್ಬ ಅಡ್ಡಬಂದ್ ಇದ್ದ ಸ್ವಲ್ಪ ವಿಷನೂ ಕುಡ್ದ್ ಮುಗಿಸಿಬುಟ್ಟಿ-ತೇಲಿ ಮರ್‌ಡ್‌ತಾ ಒಳೆ".

-ಎಡಿಕೇರಿ ಸುದರ್ಶನ್, ಬೆಂಗಳೂರು.

ಆ ಗುರುವಿನ ದೇಹ ಪಂಚಭೂತಗಳಲ್ಲಿ ಲೀನವಾಯಿತು.

ದಿ॥ ತೊತ್ತಿಯನ ಮಂದಣ್ಣ



ಕತ್ತಲೆಯಿಂದ ಬೆಳಕಿನಡೆಗೆ ಕೊಂಡೊಯ್ಯುವವನು ಗುರು. ಅಜ್ಞಾನದ ಅಂಧಕಾರ ಕಳೆದು ಜ್ಞಾನದ ಬೆಳಕು ಮೂಡಿಸುವವನು ಗುರು. ಕೇವಲ ಸರಕಾರ ಕೊಡುವ ಸಂಬಳ ಪಡೆದು ಕಾಟಚಾರಕ್ಕೆ ಕರ್ತವ್ಯ ಪಾಲಿಸುವ ಗುರುನಾಮರು ನಮ್ಮಲ್ಲಿ ಹಲವರಿದ್ದಾರೆ. ಸಂಬಳ ಪಡೆದೂ ಕರ್ತವ್ಯ ನಿರ್ವಹಿಸದ ಕಪಟಿಗಳೂ ಇದ್ದಾರೆ. ಸಂಬಳ ಪಡೆದೂ, ಅದಕ್ಕೆ ತಕ್ಕಷ್ಟು ದುಡಿಯುವ ಗುರುಗಳೂ ಇದ್ದಾರೆ. ಆದರೆ ಯಾವುದನ್ನೂ ನಿರೀಕ್ಷಿಸದೆ ತಾವು ಕಲಿತದ್ದನ್ನು ನಿಸ್ವಾರ್ಥದಿಂದ ದಾನ ಮಾಡಿ, ಹಲವರ ಜೀವನಕ್ಕೆ ಮಾರ್ಗದರ್ಶನದ ಬೆಳಕು ನೀಡುವವನೇ ನಿಜವಾದ ಗುರು. ನಮ್ಮ ಗೌಡ ಜನಾಂಗದವರು ಶೈಕ್ಷಣಿಕವಾಗಿ ಹಿಂದುಳಿದಿದ್ದಾಗ, ಅವರಲ್ಲಿ ಜ್ಞಾನದ ಕಿಡಿ ಮೂಡಿಸಿದ ಕೆಲವೇ ಮಹಾನ್ ಗುರುಗಳಲ್ಲಿ ಅಗ್ರ ಗಣ್ಯರು ದಿ॥ ತೊತ್ತಿಯನ ಮಂದಣ್ಣನವರು ಎಂದರೆ ತಪ್ಪಾಗಲಾರದು.

ದಿ॥ ತೊತ್ತಿಯನ ಮಂದಣ್ಣನವರು ಬಾಲ್ಯದಿಂದಲೇ ಚತುರತೆಯನ್ನು, ಬುದ್ಧಿವಂತಿಕೆಯನ್ನೂ ಬೆಳೆಸಿಕೊಂಡ ಪ್ರತಿಭಾವಂತರು. ಮನೆಯಲ್ಲಿ ಬಡತನವಿದ್ದರೂ ಅದನ್ನೇ ಸವಾಲಿನ ಬಂಡವಾಳವಾಗಿ ಸ್ವೀಕರಿಸಿದವರು. ವಿದ್ಯಾರ್ಥಿಯಾಗಿದ್ದಾಗ ತರಗತಿಯಲ್ಲಿ ಯಾವಾಗಲೂ ಮುಂದಿರುತ್ತಿದ್ದ ಇವರು ಕ್ರೀಡೆಯಲ್ಲೂ ಸದಾ ಮುಂದು. ಎನ್.ಸಿ.ಸಿ.ಯಲ್ಲೂ ಉನ್ನತ ಹಂತವನ್ನು ತಲುಪಿದ್ದವರು, ಬೇಟೆಯಲ್ಲಿ ಉತ್ತಮ ಗುರಿಕಾರರಾಗಿದ್ದ ಇವರು, ಜೀವನದಲ್ಲಿಯೂ ಗುರಿಯ ಬೆನ್ನತ್ತಿದರೆ ಹಿಂತಿರುಗಿ ನೋಡದವರು.

ವಿದ್ಯಾಭ್ಯಾಸ ಮುಗಿದ ಬಳಿಕ ಶಿಕ್ಷಣ ವೃತ್ತಿಯನ್ನೇ ಆಯ್ದುಕೊಂಡ ಶ್ರೀಯುತರು ಮೊದಲು ಶಿಕ್ಷಕ ವೃತ್ತಿಯನ್ನು ಆರಂಭಿಸಿದ್ದು ಚೆಂಬು ಗ್ರಾಮದಲ್ಲಿ. ನಂತರ ಪೆರಾಜೆ, ಸಂಪಾಜೆ, ಮರರೋಡು, ಭಾಗಮಂಡಲಗಳಲ್ಲಿ ಶಿಕ್ಷಕ ವೃತ್ತಿಯನ್ನು ಸವೆಸಿ ಅಂತಿಮವಾಗಿ ನೆಲೆಗೊಂಡದ್ದು ಮದೆನಾಡಿನಲ್ಲಿ. ಮದೆನಾಡಿನಲ್ಲಿ ಮದೆಮಹೇಶ್ವರ ವಿದ್ಯಾಲಯ ತಲೆಯೆತ್ತಿ ನಿಲ್ಲಲು ಮುಖ್ಯ ಕಾರಣಕರ್ತರು. ದಿ॥ ತೊತ್ತಿಯನ ಮಂದಣ್ಣನವರು ಅವರ ಕಠಿಣ ಪರಿಶ್ರಮ, ಮಾರ್ಗದರ್ಶನ, ಪ್ರೇರಣೆ ಮತ್ತು ಅವರಲ್ಲಿದ್ದ ವರ್ಚಸ್ಸಿನ ಪರಿಣಾಮವಾಗಿ ಇಂದು ಮದೆ ಮಹೇಶ್ವರ ವಿದ್ಯಾಲಯದಲ್ಲಿ ಎಂಟರಿಂದ ಹತ್ತನೇ ತರಗತಿ ಮತ್ತು ಪಿ.ಯು.ಸಿ ಯಲ್ಲಿ ಕಲಾ ಮತ್ತು ವಿಜ್ಞಾನ ವಿಭಾಗಗಳು ತಲೆಯೆತ್ತಿ ನಿಂತಿವೆ. ಈ ಎಲ್ಲಾ ತರಗತಿಗಳಿಗೆ ಸ್ವಂತ ಕಟ್ಟಡವಿದೆ. ತನ್ನದೇ ಐತಿಹ್ಯ ಖ್ಯಾತಿಯನ್ನು, ಬೆಳೆಸಿಕೊಂಡಿದೆ.

ದಿ॥ ತೊತ್ತಿಯನ ಮಂದಣ್ಣನವರು ಮದೆನಾಡಿನಲ್ಲಿ ಕೇವಲ ಶೈಕ್ಷಣಿಕ ಪ್ರಗತಿಗೆ ಮಾತ್ರ ಶ್ರಮಿಸಿದವರಲ್ಲ. ಅದರ ಜೊತೆಗೆ, ಮದೆನಾಡಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ವಿದ್ಯಾರ್ಥಿಗಳಲ್ಲಿ ಕೇವಲ ವಿದ್ಯಾಭ್ಯಾಸವನ್ನು ಮೂಡಿಸದೆ, ಅದರ ಜೊತೆ ಜೊತೆಗೆ ಪ್ರತಿಯೊಬ್ಬನನ್ನೂ ಪರಿಪೂರ್ಣ ವ್ಯಕ್ತಿಯನ್ನಾಗಿ ರೂಪಿಸುವಲ್ಲಿ ಅವರು ನೀಡಿದ ಕೊಡುಗೆ ಅಪಾರವಾದದ್ದು. ಮದೆ ಮಹೇಶ್ವರ ವಿದ್ಯಾಲಯದ ಕಟ್ಟಡ ಕಟ್ಟಲು ಇಟ್ಟಿಗೆಯನ್ನೂ ಮಕ್ಕಳ ಮೂಲಕವೇ ತಯಾರಿಸಿದರು. ಕಾಫಿ, ಏಲಕ್ಕಿ, ಬಾಳೆ ಸೇರಿದಂತೆ ಹಲವು ಬೆಳೆಗಳನ್ನು ಬೆಳೆಸಿದರು. ಮೊಟ್ಟ ಮೊದಲ ಬಾರಿಗೆ ಶಾಲೆಯಲ್ಲಿಯೇ ರೇಷ್ಮೆ ಬೆಳೆಸಿ ಈ ಪರಿಸರದಲ್ಲಿಯೂ ರೇಷ್ಮೆ ಬೆಳೆ ಉತ್ತಮ ಆದಾಯ ತರಬಲ್ಲದು ಎಂಬುದನ್ನು ನಿರೂಪಿಸಿ, ಹಲವು ರೈತರು ರೇಷ್ಮೆ ಬೆಳೆಯುವಂತೆ ಹುರಿದುಂಬಿಸಿ ದರು. ವಿದ್ಯಾರ್ಥಿಗಳಿಂದಲೇ ಶಾಲಾವರಣದಲ್ಲಿ ಕೆರೆಯೊಂದನ್ನೂ ಮಾಡಿಸಿ, ಈಜು ಕಲಿಸಿ ನೋಡುಗರನ್ನು ಬೆರಗುಗೊಳಿಸಿದರು. ಕರಿಮೆಣಸು, ಹಲಸು, ನೆಲ್ಲಿಕಾಯಿ, ಬಿದಿರು ಮೊದಲಾದ ಗಿಡ ಗಳನ್ನು ನರ್ಸರಿ ಮಾಡಿ ಊರಿನ ಜನತೆಗೆ ವಿತರಿಸಿ, ನಾಡಿನ ಪರಿಸರಕ್ಕೆ ಹೊಸ ಪರಿಕರ ಒದಗಿಸಿದರು. ಒಟ್ಟಿನಲ್ಲಿ ಮದೆನಾಡಿನ ಬೆಟ್ಟದ ಮೇಲೊಂದು ಇಷ್ಟೊಂದು ಸುಂದರ ವಿದ್ಯಾಮಂದಿರ ತಲೆಯೆತ್ತಿರುವುದನ್ನು ನೋಡಿದ ಯಾರೇ ಆದರೂ ಮೂಕ ವಿಸ್ಮಿತರಾಗಲೇ ಬೇಕು.

ಮದೆ ಮಹೇಶ್ವರ ವಿದ್ಯಾಲಯ ಮತ್ತು ಮಂದಣ್ಣ ಮಾಸ್ಟ್ರ ನಡುವೆ ಅನ್ಯೋನ್ಯ ಸಂಬಂಧ. ಭಾನುವಾರವಿರಲಿ, ಸರಕಾರಿ ರಜೆಯಿರಲಿ ಅವರು ದಿನಕ್ಕೊಮ್ಮೆ ವಿದ್ಯಾಲಯಕ್ಕೆ ಭೇಟಿ ನೀಡಲೇ ಬೇಕು. ಕೊಡಗಿನಲ್ಲೇ ಉತ್ತಮ ಫಲಿತಾಂಶವನ್ನು, ಅದರಲ್ಲಿಯೂ ಎಲ್ಲೂ ಸಲ್ಲದವರು ಇಲ್ಲಿ ಸಲ್ಲುವರು ಎಂಬಂತೆ, ಬೇರೆ ಕಡೆ ಫೇಲಾದವರು, ಹಲವು ಸಲ ಪ್ರಯತ್ನಿಸಿ ಯಶ ಕಾಣದವರು, ಮಂದಣ್ಣನವರ ಶಿಷ್ಯರಾಗಿ ತಮ್ಮ ಭವಿಷ್ಯ ರೂಪಿಸಿಕೊಡವರು ಹಲವರು. ಆದುದರಿಂದಲೇ ಈ ವಿದ್ಯಾರ್ಥಿಗಳನ್ನು ತನ್ನತ್ತ ಸೆಳೆದಿತ್ತು. ಈ ಎಲ್ಲಾ ಸಾಧನೆಗಳ ಪ್ರತಿಫಲದಿಂದಲೇ 'ರಾಜ್ಯ ಉತ್ತಮ ಶಿಕ್ಷಕ' ಪ್ರಶಸ್ತಿ ಅರ್ಹವಾಗಿಯೇ ಶ್ರೀಯುತರಿಗೆ ಸಂದಿತ್ತು.

ಮಂದಣ್ಣನವರ ಸೇವೆಯ ಹಾದಿಯನ್ನು ನೋಡಿ, ಚೆಂಬುವಿನಿಂದ ಹಿಡಿದು ಮದೆನಾಡಿನವರೆಗೆ ಸೇವೆ ಸಲ್ಲಿಸುವಾಗ ಅವರ ಸಂಪೂರ್ಣ ಸದುಪಯೋಗ ಗೌಡ ಜನಾಂಗಕ್ಕೆ ದೊರೆತಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಮಂದಣ್ಣನವರು ಸ್ವತಃ ಜನಾಂಗ ಪ್ರೇಮಿಯಾಗಿದ್ದರು. ಗೌಡ ಸಂಸ್ಕೃತಿ, ಸಂಪ್ರದಾಯಗಳಲ್ಲಿ ವಿಶೇಷ ಆಸಕ್ತಿ ಮತ್ತು ಅರಿವು ಅವರಿಗಿತ್ತು. ಹಳೆಯ ಗೌಡ ಸಮಾಜದ ಪುಸ್ತಕಗಳಲ್ಲಿ ಅವರ ಲೇಖನದ ಹರಿತವನ್ನೂ ಗುರುತಿಸಬಹುದು. ಹಲವು ಗೌಡ ನೇತಾರರನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಜನಾಂಗದ ಏಕೈಕ ಪತ್ರಿಕೆ ಸಂಗಾತಿ ಬಗ್ಗೆ ಭರವಸೆಯಿಟ್ಟವರು. ನಮ್ಮ ಜನಾಂಗದ ಬಹುಮಂದಿಯ ಬದುಕಿಗೆ ಬೆಳಕು ತಂದ ಗುರುವಿನ ಬದುಕಿಗೆ ಕತ್ತಲಾವರಿಸಿದ್ದು ಕಳೆದ ಡಿಸೆಂಬರ್ 25 ರಂದು. ಡಿಸೆಂಬರ್ 26 ರಂದು ಗುರುವಿನ ದೇಹ ಮದೆನಾಡಿನ ಮಣ್ಣಿನಲ್ಲಿ ಲೀನವಾಯಿತು. ಗುರುವಿನ ದೇಹ ನೆಲಕ್ಕೊರಗಿದರೂ ಅವರಿಂದಾದ ವಿದ್ಯಾಸಂಸ್ಥೆ ತಲೆಯೆತ್ತಿ ನಿಂತಿದೆ. ಅಸ್ತಂಗತವಾದ ನಕ್ಷತ್ರದಿಂದ, ಬೆಳಕು ಪಡೆದ ಹಲವು ತಾರೆಗಳು ಬೇರೆ ಬೇರೆ ಕಡೆ ಬೆಳಗುತ್ತಲಿವೆ. ಇನ್ನೂ ಬೆಳಗಲಿವೆ.

-ಪಟ್ಟಡ ಶಿವಕುಮಾರ್.

ನಿಧನ

ಮೂಲತಃ ಕೊಡಗು ಕುಂಬಳದಾಳು ಗ್ರಾಮದ ಹಾಲಿ ಬೆಂಗಳೂರು ನಿವಾಸಿ ಕರ್ಣೆಯ್ಯನ ವಿಜು ದೇವಯ್ಯನವರು ದಿನಾಂಕ 11-1-2003 ರಂದು ಬೆಂಗಳೂರಿನಲ್ಲಿ ಅಕಾಲಿಕ ಮರಣ ಹೊಂದಿದರು. ಶ್ರೀಯುತರಿಗೆ 28 ವರ್ಷ ಪ್ರಾಯವಾಗಿದ್ದು ಅವಿವಾಹಿತರಾಗಿದ್ದರು. ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

- ವರದಿ - ಕಲ್ಲುಮುಟ್ಲು ಬಸಪ್ಪ

ಮಡಿಕೇರಿ ತಾಲ್ಲೂಕು ಅವಂದೂರು ಗ್ರಾಮದ ಬೆಳ್ಯನ ಯಾನೆ ಪಂಜದ ದಿ||ಪೊನ್ನಪ್ಪನವರ ಧರ್ಮಪತ್ನಿ ಅಮ್ಮಣ್ಣಿಯವರು ದಿನಾಂಕ 6-1-2003 ರಂದು ನಿಧನರಾದರು. ಶ್ರೀಯುತರಿಗೆ 100 ವರ್ಷ ಪ್ರಾಯವಾಗಿದ್ದು 3 ಗಂಡು ಮತ್ತು 4 ಹೆಣ್ಣು ಮಕ್ಕಳಲ್ಲದೆ ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ. ಇವರ ತಿಥಿಕರ್ಮಾಂತರವು 19-1-2003 ರಂದು ಶನಿವಾರ ಸಂತೆ ಹೋಬಳಿ ಹಿತ್ಲುಗದ್ದೆ ಯಲ್ಲಿರುವ ತಮ್ಮ ಹಿರಿಮಗ ದಿ|| ಮಾಚಯ್ಯನವರ ಸ್ವಗೃಹದಲ್ಲಿ ನಡೆಯಿತು.

-ಸಂಗಾತಿ

ಸುಂಟಿಕೊಪ್ಪ ಸಮೀಪ ಹರದೂರು ಗ್ರಾಮದ ಅಮೆಮನೆ ಸೋಮಪ್ಪನವರು ಹಾವು ಕಡಿದ ಪರಿಣಾಮ ದಿನಾಂಕ 15-1-2003 ರಂದು ದುರ್ಮರಣಕ್ಕೀಡಾದರು. ಕೊಟ್ಟಿಗೆಯಲ್ಲಿ ದನಕರುಗಳಿಗೆ ಒಣಹುಲ್ಲನ್ನು ಹಾಕಲು ಮುಂದಾದಾಗ ಹುಲ್ಲೊಳಗಿದ್ದ ವಿಷಪೂರಿತ ನಾಗರ ಹಾವೊಂದು ಕಚ್ಚಿದ ಪರಿಣಾಮ ಸ್ಥಳದಲ್ಲಿಯೇ ದಾರುಣ ಸಾವನ್ನಪ್ಪಿದರು. ಇವರಿಗೆ 54 ವರ್ಷ ಪ್ರಾಯವಾಗಿದ್ದು ಪತ್ನಿ, ಮೂವರು ಪುತ್ರಿಯರು ಓರ್ವ ಪುತ್ರನನ್ನು ಅಗಲಿದ್ದಾರೆ.

-ಸಂಗಾತಿ

ಪತ್ರ ವಿಭಾಗ :

To,
Kodagu
Sangathi

ಸಂಪಾದಕೀಯರಿಗೆ,

ಆರನೇ ವರ್ಷದ ಕೊನೆ ಘಟ್ಟದ ಪೂರೈಕೆಯಲ್ಲಿರುವ ಕೊಡಗು ಸಂಗಾತಿಗೆ ಹೊಸ ವರುಷದ ಹಾರ್ದಿಕ ಶುಭಾಶಯಗಳು. ನಮ್ಮ ನಿಮ್ಮ ಪಾಕ್ಷಿಕ ಪತ್ರಿಕೆ ಕೊಡಗು ಸಂಗಾತಿ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ಇನ್ನು ಮುಂದೆಯೂ ಹೀಗೆ ನಡೆಸಿ ಕೊಂಡು ಬರುವಿರಿ ಎಂದು ಆಶಿಸುತ್ತೇನೆ.

ಡಿಸಂಬರ್‌ನಲ್ಲಿ ತಾವು ಪ್ರಕಟಿಸಿದ ಕೊಡಗು ಸಂಗಾತಿಯಲ್ಲಿ ಮೂಡಿ ಬಂದ ಎಲ್ಲಾ ಕಥೆ ಕವನ ಹಾಗೂ ಲೇಖನಗಳು ತುಂಬಾ ಚೆನ್ನಾಗಿತ್ತು. ಹೀಗೆ ನಮ್ಮ ಜನಾಂಗದವರ ಸಹಕಾರದಿಂದ ಈ ಪತ್ರಿಕೆ ಇನ್ನು ಉತ್ತಮವಾಗಿ ಮೂಡಿಬರಲಿ ಎಂದು ನಾನು ಆಶಿಸುತ್ತೇನೆ. ಪತ್ರ ವಿಭಾಗದಲ್ಲಿ ಜೈನಿರ ವೆಂಕಟೇಶ್‌ರವರು ಹೇಳಿರುವ ಹಾಗೆ ನಮ್ಮ ಜನಾಂಗದವರು ಒಂದಾಗಬೇಕು. ನಮ್ಮಲ್ಲಿ ನಮ್ಮದು ನಮ್ಮವರು ಎಂಬ ಸ್ವಾಭಿಮಾನ ಮೂಡಬೇಕು. ನಾವು ಒಗ್ಗಟ್ಟಾಗಬೇಕು. ಆದರೆ ಅದನ್ನು ಯಾರಿಗೂ ತೋರಿಸುವ ಅವಶ್ಯಕತೆ ಇಲ್ಲ. ನಾವು ಒಗ್ಗಟ್ಟಾಗಿ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವಲ್ಲಿ ನಾವು ಯಾರಿಗೂ ಕಮ್ಮಿಯಿಲ್ಲ. ನಮ್ಮ ಜನಾಂಗದಲ್ಲೂ ಯುವ ಪ್ರತಿಭೆಗಳಿಗೆ ಬರವಿಲ್ಲ. ಸಂಘ ಸಂಸ್ಥೆಗಳು ಇನ್ನು ಹೆಚ್ಚು ಹೆಚ್ಚಾಗಿ ಯುವ ಪ್ರತಿಬೆಗಳನ್ನು ಪ್ರೋತ್ಸಾಹಿಸಿ ನಮ್ಮ ಬಾಂಧವರ ಉದ್ಧಾರಕ್ಕೆ ಆಶಿಸೋಣಾ. ಮತ್ತೊಮ್ಮೆ ಆರು ಸಂವತ್ಸರವನ್ನು ಪೂರೈಸುತ್ತಿರುವ ಸಂಗಾತಿಗೆ ಇದೋ ನನ್ನ ನಮನ.

-ಮುಕ್ಕಾಟಿ ಶೈನಿ, ನಾಪೋಕ್ಲು.

ಶುಭ ವಿವಾಹ

1. ಮಡಿಕೇರಿ ತಾಲ್ಲೂಕು ಚೆಂಬು ಗ್ರಾಮದ ಕೊಡಗು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಮತ್ತು ಲೀಲಾವತಿ ದಂಪತಿಗಳ ಪುತ್ರ ಉಜ್ವಲ್‌ನಿಗೂ ಮತ್ತು ಮರಗೋಡು ಗ್ರಾಮದ ಮಳ್ಳಂದಿರ ಉಶ್ವಪತಿ ಗೌಡರ ಮಗಳು ಸ್ಮಿತಾಳಿಗೂ ದಿನಾಂಕ 16-1-2003 ರಂದು ಮಡಿಕೇರಿಯಲ್ಲಿರುವ ಕೆಳಗಿನ ಗೌಡ ಸಮಾಜದಲ್ಲಿ ವಿಜೃಂಭಣೆಯಿಂದ ನಡೆಯಿತು.

2. ಮೈಸೂರು ನಿವಾಸಿ ಉಳುವಾರನ ಲೇಟ್ ಮಾದಯ್ಯ ಮತ್ತು ಲಲಿತ ದಂಪತಿಗಳ ಪುತ್ರ ಕಿರಣ್‌ನಿಗೂ ಮತ್ತು ಸುಳ್ಯ ತಾಲ್ಲೂಕು ಪಂಜದ ತಮ್ಮಯ್ಯಗೌಡ ಮುಡೂರು ಹಾಗೂ ಕಮಲ ದಂಪತಿಗಳ ಪುತ್ರಿ ಡಾ|| ಮಮತಳಿಗೂ ದಿನಾಂಕ 24-1-2003 ರಂದು ಕುಕ್ಕೆಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಅನುಗ್ರಹ ಸಭಾ ಭವನದಲ್ಲಿ ವಿಜ್ರಂಭಣೆಯಿಂದ ಕಳೆಯಿತು. -ಸಂಗಾತಿ

ನೆನಪು

ಮಳೆನಾಡ ಮಡಿಲಲ್ಲಿ
ಹೊರಹೊಕ್ಕು ನೋಡಿದರೆ
ಛಾಯೆಯ ಮಾಯೆ
ಕಂಗೊಳಿಸುವುದು ದೈನಂದಿನದಿ.
ಕಣ್ಣು ತೆರೆದು ನೋಡಿದಲ್ಲೆಲ್ಲ
ಕೈ ಬೀಸಿ ಕರೆಯುವಳು
ಪ್ರಕೃತಿಯ ಮಾತೆ, ನಮ್ಮ ನಾವು
ಮರತರೆ ಹಗಲಿರುಳು ಕ್ಷಣಿಕ
ಭರಿಸಲಾಗದ ಬಯಕೆ
ಸವಿದರೂ ಸವೆಯದ ಸವಿ
ಸಮಯ ಕಳೆಯುತ್ತಾ
ಸವಿಯ ನೆನಪು ಮಾತ್ರ ನಮಗೆ

-ಮುಕ್ಕಾಟೀರ ರವಿಕುಮಾರ್, ಕೆ.ಆರ್.ನಗರ.

ಎದುರಾಳಿಯನ್ನು ಅಪ್ಪಳಿಸುವವನು ಶಕ್ತಿಶಾಲಿಯಲ್ಲ ಪರಂತು ತನ್ನ ಕೋಪವನ್ನು ನಿಗ್ರಹಿಸುವವನೇ ಶಕ್ತಿಶಾಲಿ

2 ನೇ ವರ್ಷದ ಚಿರಸ್ಮರಣೆ



ಗೌಡುದಾರೆ ನವೀನ್.


ಜೀವನದಲ್ಲಿ ನಮಗೆ ಆಸರೆಯಾಗಬೇಕಿದ್ದ ನೀನು ಕಾಲನ ಸೆರೆಯಾದರೂ ನಿನ್ನ ನಗು, ನೆನಪು ಸದಾ ನಮ್ಮೊಂದಿಗಿದೆ. ನಿನ್ನದೆ ಪ್ರೀತಿಯ ಸೆಳೆಯಲ್ಲಿ ಕಾಲ ಕಳೆಯುತ್ತಿರುವ..........

- ನಿನ್ನ ಅಪ್ಪ, ಅಮ್ಮ, ಅಕ್ಕ, ಭಾವ, ತಂಗಿ, ಚಿಕ್ಕಪ್ಪಂದಿರು ಮತ್ತು ಕುಟುಂಬಸ್ಥರು ಹಾಗೂ ಬಂಧು ಮಿತ್ರರು.

ಪ್ರಕಟಣೆ : ತಂಗಿ : ಮಂಜುಳಾ (ರೀನಾ) ಪೋಸ್ಟ್ ಮಾಸ್ಟರ್, ಕೆದಮುಳ್ಳೂರು,
ಫೋನ್ : 461566

ಜನನ : **2-7-1974**
ಮರಣ : **3-1-2001**

ಪ್ರಥಮ ವರ್ಷದ ಚಿರಸ್ಮರಣೆ



ತೋಟಂಬೈಲು ಈರಪ್ಪ ಇಂದ್ರಾಜ್
(ವಾಸು)
ಜನನ : **10-12-1958**
ಮರಣ : **28-1-2002**

ನೀವು ಭೌತಿಕ ಶರೀರವನ್ನೂ ತ್ಯಜಿಸಿ ಒಂದು ವರ್ಷ ಕಳೆದರು ನಿಮ್ಮ ನೆನೆಪುಗಳು ನಿಮ್ಮ ಒಡನಾಟದ ಆ ಸುಂದರ ಕ್ಷಣಗಳು ನಮ್ಮ ಕಣ್ಣು ಮುಂದೆ ಆಗಾಗ ತೇಲಿ ಬರುತ್ತಲಿದೆ. ನೀವು ತೋರಿಸಿ ಕೊಟ್ಟ ಆದರ್ಶಮಯ ಮಾರ್ಗ ದರ್ಶನವು ನಮಗೆಲ್ಲರಿಗೂ ದಾರಿ ದೀಪವಾಗಿದೆ. ನಿನ್ನ ಆತ್ಮಕ್ಕೆ ಸದಾ ಚಿರಶಾಂತಿಯನ್ನೂ ಆ ಭಗವಂತನು ನೀಡಲೆಂದು ನಾವೆಲ್ಲರೂ ಪ್ರಾರ್ಥಿಸುವೆವು.

ತಾಯಿ : ಬೋಜಮ್ಮ, ಪತ್ನಿ : ಇಂದಿರಾ, ಮಕ್ಕಳಾದ ಚಾಂದಿನಿ, ಕಾಳಪ್ಪ, ಸಹೋದರರು, ಸಹೋದರಿಯರು, ಬಾವಂದಿರು ಹಾಗೂ ಕುಟುಂಬಸ್ಥರು.

ಕೃತಜ್ಞತೆಗಳು



ಮಂಞ್ಞಾಪುರ ಗಂಗಮ್ಮ ಮಾದಪ್ಪ.

ದಿನಾಂಕ 1-1-2003 ರಲ್ಲಿ ನಮ್ಮ ಮಾತ್ರೋಶ್ರೀ ಮಂಞ್ಞಾಪುರ ಗಂಗಮ್ಮನವರು ನಿಧನರಾದ ಸಂದರ್ಭ ಮತ್ತು ಶುದ್ದತಿಥಿಗಳ ಅಪರ ಕ್ರಿಯೆಗಳಲ್ಲಿ ಬಂದು ಸಹಕರಿಸಿ, ಪತ್ರ ಮುಖೇನ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ನಮ್ಮ ದುಃಖದಲ್ಲಿ ಪಾಲ್ಗೊಂಡು ಸಂತೈಸಿದ ಎಲ್ಲಾ ಬಂದು ಮಿತ್ರರಿಗೂ, ಹಿತೈಷಿಗಳಿಗೂ, ಕುಟುಂಬದವರಿಗೂ, ನೆರೆಕೆರೆ, ಊರಿನವರಿಗೂ ಈ ಮೂಲಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

*ಮಕ್ಕಳು : ಮಂಞ್ಞಾಪುರ ದೇವರಾಜ್, ರಮೇಶ್, ಗಣಪತಿ, ಮತ್ತು ಮಗಳು ಯಶೋಧ ಹಾಗೂ ಸೊಸೆಯಂದಿರು, ಅಳಿಯಂದಿರು, ಮತ್ತು ಮೊಮ್ಮಕ್ಕಳು, ದೂರವಾಣಿ: **453960***

---

3 ನೇ ವರ್ಷದ ಪುಣ್ಯಸ್ಮರಣೆ



ಕೈಬೀಲಿರ ಬೋಜಮ್ಮ ತಿಮ್ಮಯ್ಯ.

ಮರಣ : **17-1-2000**

ನೀವು ದಿನಾಂಕ 17-1-2000 ರಂದು ಇಹಲೋಕ ತ್ಯಜಿಸಿ ಮೂರು ವರ್ಷಗಳು ಸಂದರು ಸಹ ನಿಮ್ಮ ಪ್ರೀತಿ, ವಾತ್ಸಲ್ಯ, ಮಮತೆ ಸದಾ ಮರುಕಳಿಸುತ್ತಿದ್ದು, ನಮ್ಮನ್ನು ಸಮಾಜದಲ್ಲಿ ಉತ್ತಮ ವ್ಯಕ್ತಿಯನ್ನಾಗಿ ಬೆಳೆಸಲು ನೀವು ಮಾಡಿದ ಆ ತ್ಯಾಗಮಯಿ ಜೀವನ ನಮಗಿಂದು ಮಾರ್ಗದರ್ಶನ. ನಿಮ್ಮ ಆತ್ಮಕ್ಕೆ ಅನುದಿನವು ಶಾಂತಿ ಸಿಗಲೆಂದು ಪ್ರಾರ್ಥಿಸುವೆವು.

ಪುತ್ರ : ಕೈಬೀಲಿರ ತಿಮ್ಮಯ್ಯ ಮನೋಹರ್, ಇಂಜಿನಿಯರ್,
ಸೊಸೆ : ತುಳಸಿ,
ಮೊಮ್ಮಗಳು : ದೀಪ್ತಿ

ದೂರವಾಣಿ : **404645** ಮೈಸೂರು.

Reg. No. KA/SK/MYS-88/2003 Registered : 10-01-96 TCI Kar. 09592

ಗೌಡ ಕುಟುಂಬಗಳ ನಡುವೆ 'ದಂಬೆಕೋಡಿ ಕಪ್' ಕ್ರಿಕೆಟ್ ಪಂದ್ಯಾವಳಿ.

ಕಳೆದ ವರ್ಷ 'ಪರ್ಲಕೋಟಿ ಕಪ್' ಕ್ರಿಕೆಟ್ ಪಂದ್ಯಾವಳಿ ನಡೆಸಿ ಜನರ ಮೆಚ್ಚುಗೆಗೆ ಪಾತ್ರವಾಗಿದ್ದ 'ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ' ಯು ಈ ಬಾರಿ 'ದಂಬೆಕೋಡಿ ಕಪ್' ಕ್ರಿಕೆಟ್‌ಪಂದ್ಯಾವಳಿಯನ್ನು ಮಡಿಕೇರಿಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಸಲಿದೆಯೆಂದು ತಿಳಿದು ಬಂದಿದೆ.

ಜನಾಂಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ಎಲ್ಲಾ ಪರೀಕ್ಷೆಗಳು ಮುಗಿದ ಬಳಿಕ ಮೇ15 ರ ನಂತರ ಈ ಪಂದ್ಯಾವಳಿಯನ್ನು ನಡೆಸಲಾಗುವುದು ಎಂದು ದೃಢಪಟ್ಟಿದೆ. ಕಳೆದ ವರ್ಷದ 'ಪರ್ಲಕೋಟಿ ಕಪ್' ಪಂದ್ಯಾವಳಿ ಮುಗಿದ ಬಳಿಕ ಅಕಾಡೆಮಿಯ ಅಧ್ಯಕ್ಷ ತುಂತಜೆ ಗಣೇಶ್‌ರವರಿಂದ ದಂಬೆಕೋಡಿ ಕುಟುಂಬಸ್ಥರ ಪರವಾಗಿ ದಂಬೇಕೋಡಿ ಹರೀಶ್ ಮತ್ತು ಮಾಜಿ ಶಾಸಕ ದಂಬೆಕೋಡಿ ಮಾದಪ್ಪನವರು ವೀಳ್ಯವನ್ನೂ ಸ್ವೀಕರಿಸಿ ಮುಂದಿನ ಸಾಲಿನಲ್ಲಿ 'ದಂಬೆಕೋಡಿ ಕಪ್' ಕ್ರಿಕೆಟ್ ಪಂದ್ಯಾ ನಡೆಸುತ್ತೇವೆಂದು ಘೋಷಿಸಿದ್ದನ್ನು ಇಲ್ಲಿ ಸ್ಮರಿಸಹುದು.

ಆ ಸಂಬಂಧ ದಂಬೆಕೋಡಿ ಹರೀಶ್‌ರವರು, ಈಗಾಗಲೇ ದಂಬೆಕೋಡಿ ಕುಟುಂಬಸ್ಥರೊಡನೆ ಹಲವು ಸುತ್ತಿನ ಮಾತುಕತೆ ನಡೆಸಿದ್ದು, ಪಂದ್ಯಾವಳಿಗೆ ಅಂತಿಮ ರೂಪು ಕೊಡಲು ಎಲ್ಲಾ ಸಿದ್ಧತೆಗಳು ಆರಂಭಗೊಂಡಿದೆ.

ಈ ಕ್ರಿಕೆಟ್ ಪಂದ್ಯಾವಳಿಯನ್ನು ದಂಬೆಕೋಡಿ ಕುಟುಂಬಸ್ಥರ ಪ್ರಾಯೋಜಕತ್ವದೊಂದಿಗೆ, ಗೌಡ ಸಾಂಸ್ಕೃತಿಕ ಅಕಾಡೆಮಿಯು ನಡೆಸುತ್ತಿದ್ದು ಬಹಳ ಆಕರ್ಷಣೀಯವಾಗಿ ಮತ್ತು ಉತ್ಸವಗೋಪಾದಿಯ ಪಂದ್ಯಾವಳಿಯನ್ನು ನಡೆಸಲು ಚಿಂತನೆ ನಡೆದಿದೆ. ಕಳೆದ ಬಾರಿ ಸುಮಾರು **80** ಕುಟುಂಬಗಳು ಪಂದ್ಯಾವಳಿಯಲ್ಲಿ ಪರಸ್ಪರ ಸೆಣಸಿದ್ದರೆ, ಈ ಬಾರಿ ಸುಮಾರು **120** ಕ್ಕೂ ಹೆಚ್ಚು ಕುಟುಂಬಗಳು ಪಂದ್ಯಾವಳಿಯನ್ನು ಭಾಗವಹಿಸಬಹುದೆಂದು ನಿರೀಕ್ಷಿಸಲಾಗಿದೆ. ಪಂದ್ಯಾವಳಿಯ ಆರಂಭದಲ್ಲಿ ಎಲ್ಲಾ ತಂಡಗಳಿಂದ ಧ್ವಜ ಹಿಡಿದು ಆಕರ್ಷಣೀಯ ಪಥ ಸಂಚಲನ ನಡೆಯಲಿದೆ ಮತ್ತು ಎಲ್ಲಾ ತಂಡಗಳೂ ಸಮವಸ್ತ್ರ ಧರಿಸಿ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಲಿರುವುದಾಗಿ ತಿಳಿದು ಬಂದಿದೆ.

-ಪಟ್ಟಡ ಶಿವಕುಮಾರ್.

ಕೊಡಗು ಎಜುಕೇಷನ್ ಅಕಾಡೆಮಿ - ಬೆಂಗಳೂರು

Chapter III (ಸೀಮಿತ ವಿಷಯ) ವಕೀಲರು

10 ಕುಟುಂಬ **18** ಗೋತ್ರದ ಗೌಡ ಬಾಂಧವರಲ್ಲಿ ವಕೀಲರಾಗಿ, ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು, ಹಾಲಿ ಸೇವೆ ಸಲ್ಲಿಸುತ್ತಿರುವವರು ಹಾಗೂ ವ್ಯಾಸಂಗ ಮಾಡುತ್ತಿರುವ ಯಾರೇ ಆದರೂ ಅವರನ್ನು ಒಂದು ಸೂರಿನಡಿಯಲ್ಲಿ ಸೇರಿಸುವ ಪ್ರಯತ್ನವಾಗಿದೆ. ಆಸಕ್ತರು ಈ ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣವಿವರದೊಂದಿಗೆ ಅರ್ಜಿ ಸಲ್ಲಿಸುವುದು.

Chapter IV ಸರ್ಕಾರಿ ಉದ್ಯೋಗಸ್ಥರು,

Phone : 080/3539555
Mobile : 98441 72183

ವಿಳಾಸ : ಮೊಟ್ಟನ ರವಿಕುಮಾರ್,
Advocate, Secretary, KEA, C/o 156/1B, I Floor,
R.V. Road, Near Minerva Circle
Opp. Hero Honda Show Room, Bangalore - 4

Statement about owner ship and other particulars about news paper- Kodagu Sangathi, fortnight Magazine Form IV (See Rule - 8)

1. Place of Publication	:	Mysore, Karnataka State
2. Periodicity of its Publication	:	Fort Night
3. Printers Name	:	**Smt. Pattada P. Sheelamani**
4. Whether Citizen of India	:	Yes / Indian
(If foreigns, state of the country of origin)	:	NA
Address	:	12058, Sangathi Nilaya, Vijayanagar IV Stage, II Phase, Hinkal Post, Mysore - 17
4. Publishers Name	:	**Smt. Pattada P. Sheelamani**
5. Editors Name		**Smt. Pattada Sheelamani**
6. Name & Address of individuals who the news paper & partners or share Holders holding more than one present of the total capital.		**Smt. Pattada P. Sheelamani** hole proprietor, 12058 Sangathi Nilaya, Vijyanagara IV ,Stage, II Phase, Hinkal Post, Mysore- 17

I Smt. Pattada P. Sheelamani hereby declare that the partculars are given above to the best of my knowledge.

Place : Mysore, Date 1-2-2003.

Sd/-
Pattada Sheelamani, Publisher

Kodagu Sangathi Kannada Fortnightly Edited, Published, Printed by **Pattada Sheelamani, # 12058 "Sangathi Nilaya", Vijayanagar IV Stage, II Phase, Hinkal Post, Mysore - 570017. ☎ : 0821/404290.**
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/431792.